ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 15 ಭಾನುವಾರ 2023

₹4

ಸಂಪುಟ: 44 | ಸಂಚಿಕೆ: 180 | ಪುಟಗಳು: 12+XII

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

Promotional Feature

ಶ್ರೀ ರಾಯಲ್ ವಾರಿಯರ್ ಬೇಕರಿಯಿಂದ ಸಿಹಿ ಸುದ್ದಿ!

ಎಂ.ಎಸ್.ನಾರಾಯಣ ಸ್ವೀಟ್ಸ್ ಉದ್ಯಮ ಕಾರ್ಯಾರಂಭಕ್ಕೆ ಸಜ್ಜು
ಮೈಸೂರು ದಸರಾ ಸಂಭ್ರಮ ಸಂದರ್ಭದಲ್ಲಿ ನಾಲ್ಕು ಸಿಹಿ ತಿನಿಸು ಮಳಿಗೆಗೆ ಚಾಲನೆ

ರುಚಿಯಲ್ಲಿ ರಾಜಿಯಿಲ್ಲದ, ಶುದ್ಧತೆ-ಗುಣಮಟ್ಟದಲ್ಲಿ ಸಾಟಿ ಇಲ್ಲದ ಬೇಕರಿ ತಿನಿಸುಗಳನ್ನು ಪೂರೈಸಿ ಗ್ರಾಹಕರ ಮನ ಗೆದ್ದಿರುವ 'ಶ್ರೀ ರಾಯಲ್ ವಾರಿಯರ್ ಬೇಕರಿ' ಇದೀಗ 'ಎಂ.ಎಸ್.ನಾರಾಯಣ ಸ್ವೀಟ್ಸ್' ಹೆಸರಿನಲ್ಲಿ ಸಿಹಿ ತಿನಿಸುಗಳ ಉದ್ಯಮ ಆರಂಭಿಸುತ್ತಿದೆ. ಇದೇ ಮೈಸೂರು ದಸರಾದ ಶುಭ ಸಂದರ್ಭದಲ್ಲಿ ನಾಲ್ಕು ಮಳಿಗೆಗಳು ಮೈಸೂರು ನಗರದ ವಿವಿಧೆಡೆ ಕಾರ್ಯಾರಂಭ ಮಾಡಲಿವೆ. ಬೇಕರಿ ತಿನಿಸು ಹೊರತಾಗಿ ಸಿಹಿ ತಿನಿಸುಗಳಿಗೆ ಮಾತ್ರವೇ ಮೀಸಲಾಗಿ ಈ ನಾಲ್ಕು ಮಳಿಗೆಗಳು ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಸಜ್ಜುಗೊಳ್ಳುತ್ತಿವೆ. 2019ರಲ್ಲಿ ಕುವೆಂಪುನಗರ ನೃಪತುಂಗ ರಸ್ತೆಯಲ್ಲಿ ಶ್ರೀ ರಾಯಲ್ ವಾರಿಯರ್ ಬೇಕರಿ ಸ್ಥಾಪನೆಯಾಯಿತು. ಪ್ರಸ್ತುತ ನಗರದ ಹಲವು ಕಡೆಗಳಲ್ಲಿ ತನ್ನ ಬೇಕರಿ ಶಾಖೆಗಳನ್ನು ಹೊಂದಿರುವ ಮೂಲಕ ಜನಮನ್ನಣೆ ಗಳಿಸಿದೆ. ಈಗ ಎಂ.ಎಸ್. ನಾರಾಯಣ ಸ್ವೀಟ್ಸ್ ಹೆಸರಿನಲ್ಲಿ ಗ್ರಾಹಕರ ಬಾಯಿ ಸಿಹಿಗೊಳಿಸಲು ಮುಂದಾಗಿದೆ. ನಾರ್ತ್ ಇಂಡಿಯನ್-ಸೌತ್ ಇಂಡಿಯನ್ ಸ್ವೀಟ್ಸ್, ಕಾಜು ಸ್ವೀಟ್ಸ್, ನಾರ್ಮಲ್ ಸ್ವೀಟ್ಸ್ ಸೇರಿದಂತೆ ಎಲ್ಲಾ ಸಾಂಪ್ರದಾಯಿಕ ಸಿಹಿ ತಿಂಡಿಗಳು ಇಲ್ಲಿ ದೊರೆಯಲಿವೆ. ರುಚಿಕರ, ಪರಿಶುದ್ಧ ಸಿಹಿ ಪದಾರ್ಥಗಳು ಇಲ್ಲಿ ಗ್ಯಾರಂಟಿಯಾಗಿದೆ.

ಮೈಸೂರಿನ ಕುವೆಂಪುನಗರದ ನೃಪತುಂಗ ರಸ್ತೆಯ ಪೂಜಾ ಬೇಕರಿ ಸರ್ಕಲ್, ಜೆಪಿ ನಗರದ ಪೊಲೀಸ್ ಠಾಣೆ ಎದುರು, ಸಿದ್ಧಾರ್ಥನಗರದ ಟೆರಿಷಿಯನ್ ಪ್ರೌಢಶಾಲೆ ಹತ್ತಿರ, ಗೋಕುಲಂನ ಗಣಪತಿ ದೇವಸ್ಥಾನದ ಹತ್ತಿರ ಎಂ.ಎಸ್.ನಾರಾಯಣ ಸ್ವೀಟ್ಸ್ ಮಳಿಗೆಗಳು ಪ್ರಾರಂಭವಾಗುತ್ತಿವೆ. ಅ.16ರಂದು ಕುವೆಂಪುನಗರ ಮತ್ತು ಜೆಪಿ ನಗರದ ಮಳಿಗೆಗಳು ಮತ್ತು ಅ.20ರಂದು ಸಿದ್ಧಾರ್ಥನಗರ ಮತ್ತು ಗೋಕುಲಂ ಮಳಿಗೆಗಳು ಉದ್ಘಾಟನೆಗೊಳ್ಳಲಿವೆ. ಬೇಕರಿ ತಿನಿಸುಗಳನ್ನು ಹೊರತುಪಡಿಸಿ, ಸಿಹಿ ತಿನಿಸುಗಳಿಗಾಗಿಯೇ ಪ್ರತ್ಯೇಕವಾಗಿ ಆರಂಭಿಸುತ್ತಿರುವ ಸ್ವೀಟ್ಸ್ ಮಳಿಗೆಗಳು ಇವು ಎಂಬುದು ವಿಶೇಷ. 150 ವಿಧದ ರುಚಿಕರ ಸಿಹಿ ತಿನಿಸುಗಳು ಇಲ್ಲಿ ದೊರೆಯಲಿವೆ. ಎಲ್ಲಾ ನಾಲ್ಕು ಮಳಿಗೆಗಳಲ್ಲಿ ಒಂದೇ ತರದ ರುಚಿ, ಉತ್ತಮ ಗುಣಮಟ್ಟ ಸಿಹಿ ತಿನಿಸು ಒದಗಿಸಿ, ಗ್ರಾಹಕರ ವಿಶ್ವಾಸಕ್ಕೆ ಬದ್ಧವಾಗಿ ನಡೆಯಲು ಮಾಲೀಕರು ಕಟ್ಟುಬದ್ಧರಾಗಿದ್ದಾರೆ. 'ಬೆಸ್ಟ್ ಕ್ವಾಲಿಟಿ, ಲೋಯಸ್ಟ್ ಪ್ರೈಸ್ ಗ್ಯಾರಂಟಿ' ಎಂಬುದೇ ಇಲ್ಲಿನ ಪ್ರಮುಖ ಅಂಶ.

'ಲೈವ್ ಮೈಸೂರು ಪಾಕ್' ಸೇರಿ ವೈಶಿಷ್ಟ್ಯಪೂರ್ಣ ತಿನಿಸುಗಳು ಲಭ್ಯ





ಇವರ ನಾಲ್ಕು ಸಿಹಿ ತಿನಿಸು ಮಳಿಗೆಗಳಲ್ಲಿ ಶುಗರ್‌ಲೆಸ್ ಬರ್ಫಿ, ಮಲ್ಟಿಗ್ರೇನ್ ಬರ್ಫಿ, ಮಿಲೆಟ್ ಡ್ರೈಫ್ರೂಟ್ ಬರ್ಫಿ, ಜಾಗಿರಿ ಬರ್ಫಿ, ಹನಿಚಂದ್ರಕಲಾ ಎಂಬ ಪ್ರಮುಖ ವೈಶಿಷ್ಟ್ಯಪೂರ್ಣ ಸಿಹಿ ತಿನಿಸುಗಳು ದೊರೆಯಲಿವೆ. ಜೊತೆಗೆ ಕುವೆಂಪುನಗರದ ನೂತನ ಮಳಿಗೆಯಲ್ಲಿ 'ಲೈವ್ ಮೈಸೂರು ಪಾಕ್' ಪೂರೈಸಲಾಗುತ್ತದೆ. ಹೀಗಾಗಿ ಬೇಕೆನ್ನಿಸಿದಾಗ ಆಗಲೇ ತಾಜಾತನದಿಂದ ತಯಾರಾದ ಬಿಸಿ ಮೈಸೂರು ಪಾಕ್ ಸವಿದು ಬಾಯಿ ಸಿಹಿಗೊಳ್ಳಿಸಿಕೊಳ್ಳಬಹುದು. ಸದ್ಯ ಮೈಸೂರಿನಲ್ಲಿ ಎಲ್ಲಿಯೂ ಲೈವ್ ಮೈಸೂರು ಪಾಕ್ ಒದಗಿಸದ ಹಿನ್ನೆಲೆಯಲ್ಲಿ ಇದು ಮೈಸೂರಿಗರಿಗೆ ಹೊಸ ಸುದ್ದಿ.

'ಹನಿಚಂದ್ರಕಲಾ' ಸಿಹಿ ತಿನಿಸು ದೊರೆಯುವುದು ವಿಶೇಷ







ಇನ್ನು ಜೇನುತುಪ್ಪದಿಂದ ತಯಾರಾಗುವ ಹನಿಚಂದ್ರಕಲಾ ಸಿಹಿ ತಿನಿಸು ಇಲ್ಲಿ ದೊರೆಯುವುದು ಮತ್ತೊಂದು ವಿಶೇಷ.

ಇಡೀ ಮೈಸೂರು ನಗರದಲ್ಲಿ ಹನಿಚಂದ್ರಕಲಾ ಸಿಹಿ ತಿನಿಸು ಸದ್ಯ ಎಲ್ಲಿಯೂ ಲಭ್ಯವಿಲ್ಲ. ಆದರೆ ಇಲ್ಲಿನ ನಾಲ್ಕು ಮಳಿಗೆಗಳಲ್ಲಿ ಹನಿಚಂದ್ರಕಲಾ ಒದಗಿಸಲಾಗುತ್ತದೆ. ಈಗಾಗಲೇ ಶ್ರೀ ರಾಯಲ್ ವಾರಿಯರ್ ಬೇಕರಿ ರುಚಿ-ಶುಚಿ ಮತ್ತು ಗುಣಮಟ್ಟಕ್ಕೆ ಹೆಸರಾಗಿದ್ದು, ಇದೀಗ ಸಿಹಿ ತಿನಿಸು ಉದ್ಯಮದಲ್ಲೂ ಅದರಂತಯೇ ಕಾರ್ಯನಿರ್ವಹಿಸಲು ಸಜ್ಜಾಗುತ್ತಿದೆ.

ತಾಯಿ ಚಾಮುಂಡೇಶ್ವರಿ ದಯೆಯಿಂದ ತೊಂದರೆ ದಿನಗಳು ಕಳೆದವು...



ಎಂ.ಎಸ್.ನಾರಾಯಣ
ಸಂಸ್ಥಾಪಕರು ಹಾಗೂ ಮಾಲೀಕರು



ಹೃತ್ವಿಕ್ ಎನ್.
ಮ್ಯಾನೇಜಿಂಗ್ ಡೈರೆಕ್ಟರ್

ಗ್ರಾಹಕರು ಸ್ವೀಟ್ಸ್ ಮಾರಾಟ ಮಳಿಗೆ ಆರಂಭಿಸುವಂತೆ ಪ್ರೀತಿಪೂರ್ವಕವಾಗಿ ಒತ್ತಾಯಿಸುತ್ತಿದ್ದರು. ಅವರ ಪ್ರೀತಿಗೆ ಕಟ್ಟುಬಿದ್ದು, ಅವರ ಬೆಂಬಲ ದೊರೆಯುವ ಅತೀವ ವಿಶ್ವಾಸದೊಂದಿಗೆ ಅರಮನೆ ನಗರಿಯಲ್ಲಿ ನಾಲ್ಕು ಮಳಿಗೆಗಳನ್ನು ತೆರೆಯುವ ಮೂಲಕ ಶ್ರೀ ರಾಯಲ್ ವಾರಿಯರ್ ಬೇಕರಿ, ಸಿಹಿ ತಿನಿಸು ಉದ್ಯಮಕ್ಕೆ ಕಾಲಿಡುತ್ತಿದೆ.

ಬೇಕರಿಯು ಹಲವು ಶಾಖೆಗಳನ್ನು ಹೊಂದಿದ್ದು, ಬೇಕರಿ ಪದಾರ್ಥ ಗಳನ್ನು ಒದಗಿಸುವಲ್ಲಿ ಮೈಸೂರು ಜನತೆಯ ವಿಶ್ವಾಸ ಗಳಿಸಿದೆ. ಇದೀಗ 'ಎಂ.ಎಸ್. ನಾರಾಯಣ ಸ್ವೀಟ್ಸ್' ಬ್ರ್ಯಾಂಡ್ ನೇಮ್‌ನಡಿ ನಮ್ಮ ನಾಲ್ಕು ಮಳಿಗೆಗಳು ಆರಂಭಗೊಳ್ಳುತ್ತಿವೆ. ಗ್ರಾಹಕರಿಗೆ ಸ್ವಾದಿಷ್ಟಪೂರ್ಣ ಮತ್ತು ಉತ್ತಮ ಗುಣಮಟ್ಟದ ಸಿಹಿ ತಿನಿಸುಗಳನ್ನು ಪೂರೈಸುವುದು ನಮ್ಮ ಆದ್ಯತೆ.

ಈ ಹಿಂದೆ 2019, 2022ರಲ್ಲಿ ಸಿಹಿ ಉದ್ಯಮ ಪ್ರಾರಂಭಿಸಿದ್ದೆವು. ಯಾರ ವಕ್ರದೃಷ್ಟಿಯೋ ಗೊತ್ತಿಲ್ಲ, ಅನೇಕ ತೊಂದರೆಗಳು ಎದುರಾದವು. ಹೀಗಾಗಿ ಸ್ವೀಟ್ಸ್ ಉದ್ಯಮ ಆಗ ಮುಂದುವರೆಸಲಾಗಲಿಲ್ಲ. ಆದರೆ ಈಗ ಕಾಲಕೂಡಿ ಬಂದಿದೆ. 2023ರ ದಸರಾ ಮಹೋತ್ಸವದ ಶುಭ ಸಂದರ್ಭದಲ್ಲಿ ನಾಲ್ಕು ಮಳಿಗೆಗಳೊಂದಿಗೆ ಸಿಹಿ ಉದ್ಯಮಕ್ಕೆ ಚಾಲನೆ ನೀಡುತ್ತಿದ್ದೇವೆ. ಮೈಸೂರಿನ ಆದಿದೇವತೆ ತಾಯಿ ಚಾಮುಂಡೇಶ್ವರಿ ಆಶೀರ್ವಾದ ನಮ್ಮ ಮೇಲಿದೆ ಎಂಬ ಅತೀವ ನಂಬಿಕೆ ನಮ್ಮದಾಗಿದ್ದು, ನಮ್ಮ ಬೇಕರಿ ತಿನಿಸುಗಳಿಗೆ ಸಹಕಾರ ನೀಡುತ್ತಿರುವಂತೆ ನಮ್ಮ ಸ್ವೀಟ್ಸ್ ಉದ್ಯಮಕ್ಕೂ ಗ್ರಾಹಕರು ಬೆಂಬಲ ನೀಡಬೇಕೆಂಬುದು ನಮ್ಮ ಮನವಿ.

ಉದ್ಘಾಟನೆ ವಿಶೇಷ ಕೊಡುಗೆ ತ್ವರೆ ಮಾಡಿ...

ಮಳಿಗೆ ಉದ್ಘಾಟನೆ ದಿನಕ್ಕೆ ಅನ್ವಯಿಸುವಂತೆ 1 ಕೆಜಿ ಸಿಹಿ ಖರೀದಿಗೆ 500 ಗ್ರಾಂ ಮೈಸೂರು ಪಾಕ್ ಮತ್ತು ಅರ್ಧ ಕೆಜಿ ಸಿಹಿ ಖರೀದಿಗೆ 250 ಗ್ರಾಂ ಮೈಸೂರು ಪಾಕ್ ಉಚಿತವಾಗಿ ನೀಡಲಾಗುತ್ತಿದೆ. ಅ.16ರಂದು ಜೆಪಿ ನಗರ ಮತ್ತು ಕುವೆಂಪುನಗರ ಹಾಗೂ ಅ.20ರಂದು ಸಿದ್ಧಾರ್ಥನಗರ ಮತ್ತು ಗೋಕುಲಂನ ಎಂ.ಎಸ್.ನಾರಾಯಣ ಸ್ವೀಟ್ಸ್ ಮಳಿಗೆಗಳಲ್ಲಿ ಈ ಕೊಡುಗೆ ದೊರೆಯಲಿದೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 15 ಭಾನುವಾರ 2023

₹4

ಸಂಪುಟ: 44 | ಸಂಚಿಕೆ: 180 | ಪುಟಗಳು: 12+XII

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ಗಂಡ : ನೀನು ರಾಜ ದರಬಾರ್ ಬಗ್ಗೆ ಕೇಳಿದ್ದೀಯಾ?
ಹೆಂಡತಿ : ಕೇಳಿದ್ದೀನಿ..., ಯಾಕೆ?
ಗಂಡ : ಅವನಿಗೆ ಮೂವರು ಹೆಂಡತಿಯರು...
ಹೆಂಡತಿ : ಹೌದು, ಗೊತ್ತು
ಗಂಡ : ಆ ಲೆಕ್ಕದಲ್ಲಿ ನಾನು ಇನ್ನೆರಡು ಮದುವೆ ಆಗಬಹುದು, ಏನಂತೀಯಾ?
ಹೆಂಡತಿ : ದ್ರೌಪದಿಯ ಹೆಸರು ಕೇಳಿದ್ದೀರಾ?
ಗಂಡ : ಹೋಗಲಿ ಬಿಡು, ನೀನು ಚಿಕ್ಕ ಚಿಕ್ಕ ವಿಷಯ ಕೂಡ ಮನಸ್ಸಿಗೆ ತೆಗೆದುಕೊಳ್ಳುತ್ತೀಯಾ...

ಮೈಸೂರು ಮಿತ್ರ
ಭಾನುವಾರ, 15 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

"ಎಷ್ಟೋ ಬಾರಿ ಅಳುವುದು ನಗುವಿಗಿಂತಲೂ ಸುಖದ ವಸ್ತು. ಎದೆಯ ಭಾರವನ್ನು ಅದು ಇಳಿಸಿದಷ್ಟು ಮನಸ್ಸಿನ ಕಲ್ಮಶವನ್ನು ಅದು ತೊಳೆದಷ್ಟು ಪಾಪವನ್ನು ಕಿತ್ತು ಅದು ಶುಚಿ ಮಾಡಿದಷ್ಟು, ಯಾವ ತೀರ್ಥ–ಪ್ರಸಾದಗಳು ಮಾಡಲಾರವು."

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

ಇಂದಿನಿಂದ ಅರಮನೆಯಲ್ಲಿ ಖಾಸಗಿ ದರ್ಬಾರ್




ನವರಾತ್ರಿ ಮಹೋತ್ಸವ ಆಚರಣೆಗಾಗಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಶುಚಿಗೊಳಿಸುತ್ತಿರುವುದು. ಬಲಚಿತ್ರದಲ್ಲಿ ರತ್ನಖಚಿತ ಸಿಂಹಾಸನವನ್ನು ಕಾಣಬಹುದು.

ಮೈಸೂರು, ಅ.14– ಅರಮನೆಯಲ್ಲಿ ಭಾನುವಾರದಿಂದ ಶರನ್ನವರಾತ್ರಿ ಉತ್ಸವದ ವಿವಿಧ ಧಾರ್ಮಿಕ ವಿಧಾನಗಳೊಂದಿಗೆ ರತ್ನ ಖಚಿತ ಸಿಂಹಾಸನದಲ್ಲಿ ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಖಾಸಗಿ ದರ್ಬಾರ್ ಆರಂಭವಾಗಲಿದೆ.

ಈಗಾಗಲೇ ರತ್ನಖಚಿತ ಸಿಂಹಾಸನ ಜೋಡಣೆಯಾಗಿದ್ದು, ಭಾನುವಾರ ಬೆಳಗ್ಗೆ 6 ರಿಂದ 06.25ರ ಶುಭ ಮುಹೂರ್ತದಲ್ಲಿ ಸಿಂಹಾಸನಕ್ಕೆ ಸಿಂಹ ಜೋಡಣೆಯೊಂದಿಗೆ ಇದು ಪರಿಪೂರ್ಣಗೊಳ್ಳಲಿದೆ. ಇದೇ ವೇಳೆ ಪ್ರಮೋದಾ ದೇವಿ ಒಡೆಯರ್ ಸಮ್ಮುಖದಲ್ಲಿ ಗಣಪತಿ ಹೋಮ, ಚಾಮುಂಡಿ ಹೋಮ ಸೇರಿದಂತೆ ಹಲವು ಪೂಜಾ ಕೈಂಕರ್ಯಗಳು ಜರುಗಲಿವೆ. ಬೆಳಗ್ಗೆ 07.05ರಿಂದ 07.45ರ ನಡುವಿನ ಶುಭ ಲಗ್ನದಲ್ಲಿ ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಹಾಗೂ ರಿಶಿಕಾ ಒಡೆಯರ್ ಅವರಿಗೆ ಅರಮನೆ ಒಳಗಿನ ವಾಣಿವಿಲಾಸ ಅರಮನೆಯಲ್ಲಿ ಕಂಕಣ ಧಾರಣೆ ಮಾಡಲಾಗುತ್ತದೆ.

ಬೆಳಗ್ಗೆ 09.45 ಗಂಟೆಗೆ ಅರಮನೆಯ ಸಾವರ್ ತೊಟ್ಟಿಗೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಆಗಮಿಸಿದ ಬಳಿಕ 10.45ಕ್ಕೆ ಖಾಸಗಿ ದರ್ಬಾರ್ ಹಾಲ್‌ನಲ್ಲಿ ಕಳಶ ಪೂಜೆ, ಸಿಂಹಾಸನಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗುತ್ತದೆ. ನಂತರ ಬೆಳಗ್ಗೆ 11.30ರಿಂದ 11.50ರ ನಡುವಿನ ಶುಭಲಗ್ನದಲ್ಲಿ ಯದುವೀರ್ ಅವರು ರತ್ನಖಚಿತ ಸಿಂಹಾ ಸನವೇರಿ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಬಳಿಕ ಮಧ್ಯಾಹ್ನ 01.45ರಿಂದ 02.05 ರವರೆಗೆ ತಾಯಿ ಚಾಮುಂಡೇಶ್ವರಿ ದೇವಿಯನ್ನು ಚಾಮುಂಡಿ ತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ಕರೆದೊಯ್ಯುವುದು ಸೇರಿದಂತೆ ಹಲವು ಪೂಜಾ ಕೈಂಕರ್ಯಗಳು ನಡೆಯಲಿವೆ. ಹೀಗೆ 10 ದಿನಗಳ ಕಾಲ ರಾಜವಂಶಸ್ಥರು ಸಾಂಪ್ರದಾಯಿಕ ಪೂಜಾ ಕಾರ್ಯ ನೆರವೇರಿಸಲಿದ್ದಾರೆ.

ನಿಮ್ಮ ಪತ್ರಗಳು

ಪೋಷಕರಿಗೆ ಮಕ್ಕಳ ಬಗ್ಗೆ ಗಮನವಿರಲಿ

ಮಾನ್ಯರೆ,

ಕಾಲೇಜಿನಿಂದ ಮನೆಗೆ ತೆರಳಲು ಮೈಸೂರಿನ ಜಯನಗರ ರಸ್ತೆಯ ಬಳಿ ಬರುತ್ತಿದ್ದೆ. ಇನ್ನೇನು ರೈಲು ಬರುವ ಸೂಚನೆ ಇದ್ದುದರಿಂದ ಹಳಿ ದಾಟಬೇಡಿ ಎಂಬ ದನಿಗೆ ಅಲ್ಲೇ ಪಕ್ಕದಲ್ಲಿ ಸ್ಕೂಟಿ ನಿಲ್ಲಿಸಿದೆ, ಆನತಿ ದೂರದಲ್ಲಿದ್ದ ನನ್ನ ಬಲ ಭಾಗದ ರಸ್ತೆ ಬದಿಯಲ್ಲಿ ಸುಮಾರು 10 ವರ್ಷದ ಶಾಲಾ ಬಾಲಕರು ಆಟವಾಡುತ್ತಾ ಸಿಂಗಲ್ ಸೀಟ್ ಖಾಲಿ ಇರುವ ಗಾಡಿಗಳನ್ನು ಅಡ್ಡ ಹಾಕಲು ಯತ್ನಿಸಿ, "ನೀವು ಯಾವ ಕಡೆಗೆ ಹೋಗ್ತಿದ್ದೀರಾ....? ಸ್ವಲ್ಪ ಡ್ರಾಪ್ ಕೊಡ್ತಿರಾ....?...." ಎಂದು ಮುದ್ದು ಮುದ್ದಾಗಿ ಗೋಗರೆಯುತ್ತಿದ್ದ ದೃಶ್ಯ ಕಣ್ಣಿಗೆ ಬಿತ್ತು. ಓರ್ವ ಮಹಿಳೆ ಗಾಡಿ ನಿಲ್ಲಿಸಿ" ಎಲ್ಲಿಗೆ ಹೋಗಬೇಕು...?" ಎಂದು ಹುಡುಗನನ್ನು ವಿಚಾರಿಸಿದರು, ಹೋಗಬೇಕಾದ ದಾರಿ ತಿಳಿಸಿ ಹುಡುಗ ಗಾಡಿ ಹತ್ತಲು ಮುಂದಾದನು, ಆದರೆ, ಒಮ್ಮೆ ಹಿಂತಿರುಗಿ ನೋಡಿ ತನ್ನ ಸ್ನೇಹಿತನಿಗೆ ಇನ್ನೂ ಯಾರೂ ಡ್ರಾಪ್ ನೀಡಲು ಸಿಕ್ಕಿಲ್ಲವೆಂದು ಅರಿತವನೇ ಆ ಮಹಿಳೆಯ ಕಡೆ ತಿರುಗಿ "ಡ್ರಾಪ್ ಬೇಡ ಆಂಟಿ... ನೀವು ಹೊರಡಿ" ಎಂದು ಹೇಳುತ್ತಾ ಗಾಡಿಯಿಂದ ಇಳಿದು ಹಿಂದೆ ಸರಿದೇಬಿಟ್ಟ.....!!

ನಾನು ಡ್ರಾಪ್ ಕೊಡಲು ಗಾಡಿ ತೆಗೆಯುವಷ್ಟರಲ್ಲಿ ಹುಡುಗರಿಬ್ಬರೂ ಓಟದ ಸ್ಪರ್ಧೆಗೆ ಬಿದ್ದವರಂತೆ ಓಡುತ್ತಿದ್ದ ದೃಶ್ಯವನ್ನು ಮೂಕಳಂತೆ ನೋಡುತ್ತಾ ನಿಂತುಬಿಟ್ಟೆ.... ಡ್ರಾಪ್ ಬೇಡವೆಂದ ಮುಗ್ಧ ಹುಡುಗನ ಸ್ನೇಹ ಭಾವಕ್ಕೆ ಮನತುಂಬಿ ಬಂತು.

ಸ್ನೇಹಕ್ಕೆ ಕೊಟ್ಟ ಬೆಲೆಗೆ ಈತನನ್ನು ಕೊಂಡಾಡಬೇಕೆ? ಇಲ್ಲ ಯಾವುದೇ ಮುಂದಾಲೋಚನೆಯಿಲ್ಲದೆ ಶಾಲೆಯಿಂದ ಹೇಗೋ ಮಕ್ಕಳು ಬಂದೇ ಬರುತ್ತಾರೆ ಎಂಬ ಭಂಡ ಧೈರ್ಯವಿರುವ ತಂದೆ –ತಾಯಿಗಳ ಮೇಲೆ ಮುನಿಸಿಕೊಳ್ಳಬೇಕೆ...? ಗೊತ್ತಾಗುತ್ತಿಲ್ಲ, ಗೇಟ್ ತೆಗೆದಿದ್ದರಿಂದ ಎಲ್ಲಾ ವಾಹನಗಳು ಒಮ್ಮೆಲೇ ಹೊರಟು ನಿಂತವು.

ಇಲ್ಲಿ ನನಗೆ ಅನಿಸಿದ್ದು ಏನೆಂದರೆ, ಮಕ್ಕಳನ್ನು ಶಾಲೆಗೆ ಸೇರಿಸುವುದು ಮಾತ್ರ ಮುಖ್ಯವಲ್ಲ, ಅವರು ಶಾಲೆಯಿಂದ ಮನೆಗೆ ಹೇಗೆ ಬಂದು ಸೇರುತ್ತಾರೆ ಎನ್ನುವ ಚಿಂತನೆ ಪೋಷಕರಿಗೆ ಇರಲೇಬೇಕು. ಮನೆ ಎಲ್ಲೋ, ಶಾಲೆ ಇನ್ನೆಲ್ಲೋ ಆದಾಗ, ಸಂಚಾರಿ ವಾಹನಗಳನ್ನು ಪದೇ –ಪದೇ ಬದಲಾಯಿಸುವ ಅಗತ್ಯಗಳು ಬಿದ್ದಾಗ ಚಿಕ್ಕ ಮಕ್ಕಳು ಹೇಗೆಲ್ಲಾ ಪರಿಪಾಟಲುಗಳನ್ನು ಪಡುತ್ತಾರೆ ಎಂಬ ಪರಿಕಲ್ಪನೆ ಹೆತ್ತವರಿಗೆ ಇಲ್ಲದೇ ಹೋದರೆ ಹೇಗೆ? ಮಕ್ಕಳು ಮನೆಗೆ ಬೇಗ ಬಂದು ತಲುಪುವ ಕಾತರದಿಂದ ಕಂಡ– ಕಂಡವರನ್ನು ಹೀಗೆ ಡ್ರಾಪ್ ಕೊಡಿ ಎಂದು ಗೋಗರೆಯುವುದನ್ನು ನೋಡಲಾಗುವುದಿಲ್ಲ, ಸಹಾಯ ಯಾರಾದರೂ ಮಾಡಿಯೇ ಮಾಡುತ್ತಾರೆ ಆದರೆ, ಪ್ರತಿನಿತ್ಯ ಸಹಾಯ ಸಿಗುತ್ತದೆ ಎಂಬ ಭರವಸೆಯೇನು?

ಸಂದರ್ಭಗಳು ಯಾವಾಗಲೂ ಒಂದೇ ರೀತಿ ಇರುವುದಿಲ್ಲ, ಪೋಷಕರು ದಯಮಾಡಿ ತಮ್ಮ ಮಕ್ಕಳು ಶಾಲೆಯಿಂದ ಮನೆಗೆ, ಮನೆಯಿಂದ ಶಾಲೆಗೆ ಹೇಗೆ ಹೋಗಿ ಬರುತ್ತಿದ್ದಾರೆ ಎಂಬ ವಿಷಯದ ಮೇಲೆ ಗಮನ ವಹಿಸುವುದು ಅತ್ಯಂತ ಸೂಕ್ತ ಎಂಬುದು ನನ್ನ ಸದಭಿಪ್ರಾಯ.

ಯಾರೋ ಅಪರಿಚಿತರ ಕೈಗೆ ನಿಮ್ಮ ಮಕ್ಕಳು ಸಿಲುಕಿ, ಕೈ ತಪ್ಪಿದರೆ...??

ಹೆದರಿಸುತ್ತಿಲ್ಲ ಮನವಿ ಮಾಡಿಕೊಳ್ಳುತ್ತಿದ್ದೇನೆ, ಇಂದೇ ನಿಮ್ಮ ಮಕ್ಕಳ ಬಗ್ಗೆ ಮತ್ತು ಅವರ ಕ್ಷೇಮದ ಬಗ್ಗೆ ಹೆಚ್ಚಿನ ಗಮನ ಹಾಗೂ ಜವಾಬ್ದಾರಿಗಳನ್ನು ಅಗತ್ಯವಾಗಿ ತೆಗೆದುಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

॥ಸರ್ವೇ ಜನಾ: ಸುಖಿನೋ ಭವಂತು॥

– ಸುಶ್ಮಿತಾ ಸುಖೀಭವ, ಜೆಎಸ್‌ಎಸ್ ಕಾನೂನು ಕಾಲೇಜು

ಬಡ ಬಸ್ ನಿರ್ವಾಹಕರ ಮೇಲೆ ಏಕೀ ಕ್ರಮ

ಮಾನ್ಯರೆ,

ಇತ್ತೀಚೆಗೆ ರಾತ್ರಿ 7.30ರ ಸಮಯದಲ್ಲಿ ಮೈಸೂರು ನಗರ ಬಸ್ ನಿಲ್ದಾಣದಿಂದ ಕೆಆರ್‌ಎಸ್‌ಗೆ ಬಸ್ ಸಂಚರಿಸುತ್ತಿತ್ತು. ಶಕ್ತಿ ಯೋಜನೆಯ ಉಚಿತ ಪ್ರಯಾಣದ ಫಲಾನುಭವಿಗಳಾದ ಮಹಿಳಾ ಮಣಿಯರೇ ಪ್ರಯಾಣಿಸುತ್ತಿದ್ದರು. ಅದರಲ್ಲಿ 6–7 ಮಹಿಳೆಯರು ತಮ್ಮ ಮೊಬೈಲ್‌ನಲ್ಲಿ ಆಧಾರ್ ಕಾರ್ಡ್ ತೋರಿಸಿ ಪ್ರಯಾಣಕ್ಕೆ ಅನುಮತಿ ಕೋರಿದರು. ನಿರ್ವಾಹಕರು ಇದಕ್ಕೆ ಸಮ್ಮತಿಸದೇ ಒತ್ತಡದಿಂದ ಪ್ರಯಾಣಕ್ಕೆ ಅನುಮತಿ ನೀಡಿದರು. ಹಠಾತ್ ದಾಳಿ ನಡೆಸಿ ಪರಿಶೀಲಿಸುವಾಗ ಮಹಿಳೆಯರ ಮೊಬೈಲ್ ನಂಬರ್ ಸ್ವಿಚ್ ಆಫ್ ಆಗಿತ್ತು. ಪಾಪ ನಿರ್ವಾಹಕರ ಮೇಲೆ ಕ್ರಮವಾಯಿತು. ದಾಖಲಾತಿಗಳು ಕ್ರಮಬದ್ಧವಾಗಿರಲಿ.

– ನೊಂದ ಪ್ರಯಾಣಿಕರು, ಮೈಸೂರು.

ವೈಭವವೀ ದಸರಾ....!!



ಮತ್ತೆ ..! ಬಂದೆಯ ದಸರಾ
ಕಳೆಯಲು ನಮ್ಮಯ ಬೇಸರ
ನಿನ್ನ ಆಗಮನವೇ ನಮಗೆ ಸಂಭ್ರಮ
ಆಗುವುದು ಸಾಂಸ್ಕೃತಿಕ ಸಂಗಮ..!
ಎತ್ತ ನೋಡಿದರೂ ಬೆಳಕಿನ ಕಲರವ
ತಳಿರು ತೋರಣಗಳ ಸುಂದರ ಉತ್ಸವ ..!
ನೀತಿಯ ಸಾರುವ ಸ್ತಬ್ಧ ಚಿತ್ರಗಳು
ವೈವಿಧ್ಯಮಯ ತಿಂಡಿ ತಿನಿಸುಗಳು..!
ಕಣ್ಣ ಹಾಯಿಸಿದೆಲ್ಲೆಡೆ ಫಲಪುಷ್ಪಗಳು
ಗಾಂಭೀರ್ಯದಿ ನಡೆಯುವ ಆನೆಗಳು..!
ಮೈ ನವಿರಾಗಿಸುವ ಜಟ್ಟಿ ಕಾಳಗ
ಮೆರವಣಿಗೆಯ ಆಕರ್ಷಕ ಕರಗ
ಮರೆಯಲಾಗದ ವೀರಭದ್ರ ಕುಣಿತ
ಕಲೆಗಳ ಪ್ರದರ್ಶನ ಅಪೂರ್ವ ಅಗಣಿತ..!
ರುಚಿಯ ತಣಿಸಲು ಆಹಾರ ಮೇಳ
ಮನಸ್ಸಿಗೆ ಮುದ ನೃತ್ಯ ರೂಪಕದ ತಾಳ..!
ವರ್ಷಕ್ಕೊಮ್ಮೆ ಬರುವೆ ನೀ ದಸರಾ
ತುಂಬಲು ನಮ್ಮಲ್ಲಿ ಅನಂತನಂತ ಸಡಗರ ..!

–ಶ್ರೀಮತಿ ಸಬಿತ ಕೊಡಂದೇರ, ಆಂಗ್ಲ ಭಾಷಾ ಉಪನ್ಯಾಸಕರು, ದೇವರಾಜ ಸ,ಪ,ಪೂ,ಕಾ. ಮೈಸೂರು

ಅ.18, 19ರಂದು ಮಕ್ಕಳ ದಸರಾ

ಮೈಸೂರು, ಅ.14(ಎಸ್‌ಬಿಡಿ)– ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಅ.18 ಹಾಗೂ 19ರಂದು ಮಕ್ಕಳ ದಸರಾ ಆಯೋಜಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಆಯೋಜಿಸಲಾಗಿರುವ ಮಕ್ಕಳ ದಸರಾವನ್ನು ಅ.18 ರಂದು ಬೆಳಗ್ಗೆ 10.30ಕ್ಕೆ ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಉದ್ಘಾಟಿಸಲಿದ್ದಾರೆ.

ಬಾಲ ಪ್ರತಿಭೆಗಳು ಭಾಗಿ: ಸರಿಗಮಪ ಸೀಜನ್–19ರ ವಿಜೇತೆ ಕುಶಾಲನಗರದ ಪ್ರಗತಿ ಬಡಿಗೇರ್, ಬೆಸ್ಟ್ ಎಂಟರ್‌ಟೈನರ್ ದಿಯಾ ಹೆಗಡೆ, ರಾಜ್ಯ ಮಟ್ಟದ ಸೋಲೋ ಡ್ಯಾನ್ಸ್ ವಿಜೇತ, ತಿಲಕ್‌ನಗರ ಅಂಧ ಮಕ್ಕಳ ಸರ್ಕಾರಿ ಶಾಲೆ ವಿದ್ಯಾರ್ಥಿ ಜಿ.ಎಂ.ಗಂಗಾಧರ ಹಾಗೂ ಖೋ–ಖೋ ರಾಷ್ಟ್ರೀಯ ಕ್ರೀಡಾಪಟು, ತಿ.ನರಸೀಪುರ ತಾಲೂಕು ಕುರುಬೂರು ಶ್ರೀ ನಿರ್ವಾಣಸ್ವಾಮಿ ಗ್ರಾಮೀಣ ಪ್ರೌಢಶಾಲೆ ವಿದ್ಯಾರ್ಥಿನಿ ಮಾನಸ ವಿಶೇಷ ಆಹ್ವಾನಿ ತರಾಗಿ ಪಾಲ್ಗೊಳ್ಳಲಿದ್ದಾರೆ. ಈ ಬಾರಿ ಮಕ್ಕಳ ದಸರಾದಲ್ಲಿ ಎರಡು ದಿನ ವಿವಿಧ ಸ್ಪರ್ಧೆ, ಮನರಂಜನೆ ಜೊತೆಗೆ ಶೈಕ್ಷಣಿಕ ಅರಿವು ಮೂಡಿಸುವ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸೇರಿಸಲಾಗಿದೆ.

ಅ.18ರಂದು ಉದ್ಘಾಟನೆ ಕಾರ್ಯಕ್ರಮದ ಬಳಿಕ ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಸುಗಮ ಸಂಗೀತ, ಪ್ರಗತಿ ಬಡಿಗೇರ್ ಹಾಗೂ ದಿಯಾ ಹೆಗಡೆ ಗಾಯನ, ಇಂದೂಶ್ರೀ ಅವರಿಂದ ಮಾತನಾಡುವ ಗೊಂಬೆ, ವಿಶೇಷ ಚೇತನ ಮಕ್ಕಳ ವಿವಿಧ ವೇಷಭೂಷಣ ಸ್ಪರ್ಧೆ, ಗೋಪಾಲಸ್ವಾಮಿ ಶಿಶುವಿಹಾರ ವಿದ್ಯಾರ್ಥಿಗಳಿಂದ 'ಆರ್ಟಿಫಿಷಿಯಲ್ ಇಂಟಲಿಜೆನ್ಸ್' ಶೈಕ್ಷಣಿಕ ನಾಟಕ, ಯೋಗ ನೃತ್ಯ, ಬಹುಮಾನ ವಿತರಣೆ ನಡೆಯಲಿದೆ. ಅ.19ರಂದು ಬೆಳಗ್ಗೆ 9.30ರಿಂದ ಪೀಪಲ್ಸ್ ಪಾರ್ಕ್ ಶಾಲಾ ಮಕ್ಕಳಿಂದ ಸುಗಮ ಸಂಗೀತ, ವಿಶೇಷ ಅಗತ್ಯತೆವುಳ್ಳ ಶಾಲಾ ಮಕ್ಕಳ ಸಾಂಸ್ಕೃತಿಕ ನೃತ್ಯ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಪವಾಡ ಬಯಲು ಕಾರ್ಯಕ್ರಮ, ಪ್ರಾಯೋಜಿತ ಕಾರ್ಯಕ್ರಮ, ದಸರಾ ಗಜಪಡೆ ಮಾವುತರ ಮಕ್ಕಳಿಂದ ನೃತ್ಯ ಪ್ರದರ್ಶನದ ಬಳಿಕ ಮಕ್ಕಳ ದಸರಾ ಸಮಾರೋಪಗೊಳ್ಳಲಿದೆ.

ಶೈಕ್ಷಣಿಕ ವಸ್ತು ಪ್ರದರ್ಶನ: ಮಕ್ಕಳ ದಸರಾದಲ್ಲಿ ಎಲ್ಲಾ ಬಿಇಓಗಳ ನೇತೃತ್ವದಲ್ಲಿ ವಿವಿಧ ವಿಷಯಗಳನ್ನೊಳಗೊಂಡ ಶೈಕ್ಷಣಿಕ ವಸ್ತು ಪ್ರದರ್ಶನ ಏರ್ಪಡಿಸಲಾಗುವುದು. ಹೆಚ್.ಡಿ. ಕೋಟೆ ಬ್ಲಾಕ್‌ಗೆ ಬುಡಕಟ್ಟು ಸಂಸ್ಕೃತಿ ಮತ್ತು ಅರಣ್ಯ ಉತ್ಪನ್ನಗಳು, ಹುಣಸೂರಿಗೆ ಪರಿಸರ ಸಂರಕ್ಷಣೆ, ಕೆ.ಆರ್. ನಗರಕ್ಕೆ ಮೈಸೂರು ಪ್ರೇಕ್ಷಣೀಯ ಸ್ಥಳಗಳು, ಮೈಸೂರು ಉತ್ತರಕ್ಕೆ ಆರೋಗ್ಯ ಮತ್ತು ಪೌಷ್ಟಿಕಾಂಶ, ಮೈಸೂರು ದಕ್ಷಿಣಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಚಂದ್ರಯಾನ, ಆದಿತ್ಯ ಯಾನ, ಮೈಸೂರು ಗ್ರಾಮಾಂತರಕ್ಕೆ ಕನ್ನಡ ನಾಡು, ನುಡಿ ಮತ್ತು ಭಾಷೆ, ನಂಜನಗೂಡಿಗೆ ಶಿಕ್ಷಣ ಇಲಾಖೆ ಪ್ರೋತ್ಸಾಹದಾಯಕ ಯೋಜನೆಗಳು, ಪಿರಿಯಾಪಟ್ಟಣಕ್ಕೆ ಶಿಕ್ಷಣದಲ್ಲಿ ರಂಗಕಲೆ ಹಾಗೂ ತಿ.ನರಸೀಪುರ ಬ್ಲಾಕ್ ವಿದ್ಯಾರ್ಥಿಗಳಿಗೆ ಮೈಸೂರು ದಸರಾ ಪರಂಪರೆ ವಿಷಯ ನೀಡಲಾಗಿದೆ. ಜೊತೆಗೆ ಕರಕುಶಲ ವಸ್ತು ಪ್ರದರ್ಶನದ ಮಳಿಗೆಯೂ ಇರಲಿದೆ.

ಆಹಾರ–ಆರೋಗ್ಯ ನೆರವು: ಜೆಎಸ್‌ಎಸ್ ಮಠ ಹಾಗೂ ಇಸ್ಕಾನ್ ಅಕ್ಷಯಪಾತ್ರೆ ಫೌಂಡೇಷನ್ ವತಿಯಿಂದ ಆಹಾರ ಹಾಗೂ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣೆ ನೆರವು ದೊರೆತಿದೆ. ಅಗಸ್ತ್ಯ ಫೌಂಡೇಷನ್ ಸಂಸ್ಥೆಯಿಂದ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ ನಡೆಯಲಿದೆ.



ಮೈಸೂರು ದಸರಾ ಉದ್ಘಾಟಕರಾದ ಹಂಸಲೇಖ ಅವರು ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಸಂದರ್ಭದಲ್ಲಿ ಅವರೊಂದಿಗೆ ತಹಶೀಲ್ದಾರ್ ಗಿರೀಶ್ ಹಾಗೂ ವೀರಶೈವ ಲಿಂಗಾಯತ ಮುಖಂಡ ಗುರುಮಲ್ಲೇಶ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.10.2023 ಭಾನುವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಚಿತ್ತ ರಾಹುಕಾಲ: ಬೆಳಗ್ಗೆ 4.30ರಿಂದ ಸಂಜೆ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಪೈಲ್ಸ್, ಮೂಲವ್ಯಾಧಿ, ಫಿಸ್ತುಲ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ, ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಗಣಪತಿ ಪೂಜಾ, ಪುಣ್ಯಾವಾಚನ, ಮಹಾಸಂಕಲ್ಪ, ವಿವಿಧ ಪೂಜಾ ಕೈಂಕರ್ಯ, ಸಂಜೆ 5.30ಕ್ಕೆ ಶ್ರೀ ಮಹಾವಿಷ್ಣು ದಶಾವತಾರ ಹೋಮ, ಮಹಾ ಧನ್ವಂತರಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ವಿಕಲಚೇತನರ ಅಭ್ಯುದಯ ಸೇವಾ ಸಂಸ್ಥೆ, ಮೈಸೂರು ಮತ್ತು ಸುರಕ್ಷಾ ಫೌಂಡೇಷನ್:** ದಸರಾ ಕಪ್ 2023–ವಿಕಲಚೇತನರ ವ್ಹೀಲ್ ಛೇರ್ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಮುಡಾ ಕ್ರೀಡಾ ಮೈದಾನ, ಕನ್ನಡ ಸಾಹಿತ್ಯ ಪರಿಷತ್ ರಸ್ತೆ, ವಿಜಯನಗರ, ಬೆಳಗ್ಗೆ 9ರಿಂದ ಸಂಜೆ 6ರವರೆಗೆ.

■ **ವ್ಯವಸ್ಥಾಪಕರು :** ದಸರಾ ಪ್ರಯುಕ್ತ "ನಾನೇ ಮಾಡಿದ ಬೊಂಬೆಗಳ ಪ್ರದರ್ಶನ", 73 ವರ್ಷ ವಯಸ್ಸಿನ ರಾಘವೇಂದ್ರ ಅವರು ಕೈಯಿಂದ ಮಾಡಿದ 300ಕ್ಕೂ ಹೆಚ್ಚು (ಪೇಪರ್ ಪಲ್ಪ್‌ನಿಂದ ಮಾಡಿದ) ಶ್ರೀ ಶ್ರೀನಿವಾಸ ಕಲ್ಯಾಣ (ಶ್ರೀ ವಾದಿರಾಜ ಕೃತಿ) ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಜೀವನ ಚರಿತ್ರೆ ಬಿಂಬಿಸುವ ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, 2ನೇ ಹಂತ, ವಿಜಯನಗರ, ಬೆಳಗ್ಗೆ 11.30ಕ್ಕೆ.

■ **ನಟನ:** ನವರಾತ್ರಿ ನಾಟಕೋತ್ಸವ, ರಾಜ್ಯದ ಮೂಲೆ ಮೂಲೆಗಳಿಂದ ಬಂದ ತಂಡಗಳಿಂದ ವಿಶಿಷ್ಟ ವಸ್ತು, ಪ್ರಯೋಗ ಶೀಲತೆಯಿಂದ ಕೂಡಿದ ನಾಟಕಗಳ ಪ್ರದರ್ಶನ, ಉದ್ಘಾಟನೆ: ರಂಗ ನಿರ್ದೇಶಕಿ, ನಟಿ, ಗಾಯಕಿ, ಪದ್ಮಶ್ರೀ ಬಿ. ಜಯಶ್ರೀ, ಮುಖ್ಯ ಅತಿಥಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕ ಡಾ. ಸುದರ್ಶನ್, ಸ್ಥಳ: ನಟನ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದುಷಿ ಎಸ್. ಮಹಾಂತಿ ಅವರಿಂದ ಕರ್ನಾಟಕ ಸಂಗೀತ ಗಾಯನ, ಮ.12ಕ್ಕೆ ಅನ್ನಾರ್ಚನೆ, ಗೌರಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾ ಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಪ್ರತಿದಿನ ಬೆಳಗ್ಗೆ ಶ್ರೀ ದುರ್ಗಾ ಸಪ್ತಶತಿ ಪಾರಾಯಣ ಮತ್ತು ಹೋಮ, ಬೆಳಗ್ಗೆ 10 ಗಂಟೆಗೆ ಗಣಪತಿ ಹೋಮ ಮತ್ತು ನವಗ್ರಹ ಹೋಮ, ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮ ಮಂದಿರ, ಜಯನಗರ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ರಂಗಾಯಣ:** ನವರಾತ್ರಿ ರಂಗೋತ್ಸವ, ಸಂಜೆ 5.30ಕ್ಕೆ ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ, ದಸರಾ ಬೊಂಬೆ ಪ್ರದರ್ಶನ ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್. ಮಂಜುಳ, ಛಾಯಾಚಿತ್ರ ಪ್ರದರ್ಶನ ಉದ್ಘಾಟನೆ: ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನವರಾತ್ರಿ ರಂಗ ಗೌರವ ಸಮರ್ಪಣೆ: ಹಿರಿಯ ರಂಗಕರ್ಮಿ ಎ. ನಾರಾಯಣ ರೈ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪ ನಿರ್ದೇಶಕರಾದ ನಿರ್ಮಲಾ ಮಠಪತಿ, ಸಂಜೆ 6.30ಕ್ಕೆ ರಂಗಾಯಣದ ರೆಪರ್ಟರಿ ಕಲಾವಿದರಿಂದ ಮುಟ್ಟಿಸಿಕೊಂಡವನು ನಾಟಕ ಪ್ರದರ್ಶನ, ಕಥೆ: ಲಂಕೇಶ್, ನಿರ್ದೇಶನ: ಕೆ.ಆರ್.ನಂದಿನಿ, ಸ್ಥಳ: ಭೂಮಿಗೀತ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಪಂಚಾಮೃತ ಅಭಿಷೇಕ, ವೇದ ಪಾರಾಯಣ, ಸಂಜೆ ಉತ್ಸವ, ಸ್ಥಳ: ದೇವಸ್ಥಾನದ ಆವರಣ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 8ಕ್ಕೆ ಸ್ವಸ್ತಿವಾಚನ, ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ದೇವತಾನಾಂದಿ, ಕಲಶ ಸ್ಥಾಪನೆ, ಸ್ಥಳ: ದೇವಸ್ಥಾನ, ವಾಣಿ ವಿಲಾಸ ಮೊಹಲ್ಲಾ

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ಪೂಜ ಮಹೋತ್ಸವ, ಹಂಸವಾಹನ ಅಲಂಕಾರ, ಸಂಜೆ 5ಕ್ಕೆ ಕಳಸ ಸ್ಥಾಪನೆ, 5.30ಕ್ಕೆ ಭಜನೆ, 7.30ಕ್ಕೆ ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ಅಶೋಕ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: ಬೆಳಗ್ಗೆ 6.10 ಚಿಂತನ: ಡಾ. ಜಿ.ಎಂ. ಹೆಗಡೆ, 6.15 ದಸರಾ ವಿಶೇಷ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು: ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, ಸಂಕಲನ: ಎಸ್. ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ– ಸೈಬರ್ ಮಿತ್ರ–ಸೈಬರ್ ಸುರಕ್ಷೆ ವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಪದ ಸಂಸ್ಕೃತಿ: ಪ್ರಸ್ತುತಿ– ಡಾ. ಸಂಗಮೇಶ ಸವದತ್ತಿಮಠ್, 8.30 ಮೈಸೂರು ದಸರಾ 2023: ಒಂದು ಪೂರ್ವಾವಲೋಕನ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.05 ಮೈಸೂರು ಮಹಲುಗಳು: ರೂಪಕ ಸರಣಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.40 ನಮ್ಮ ಆರೋಗ್ಯ: ಮಕ್ಕಳಲ್ಲಿ ಮಾಲುಗಣ್ಣು ಕುರಿತು ಡಾ. ರವಿಶಂಕರ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ– "ಮಧು ಕೈಟಭ ಸಂಹಾರ", ನಡೆಸಿಕೊಡುತ್ತಾರೆ ವಿ. ಮಾಲಿನಿ, 10.30 ಮಕ್ಕಳ ಮಂಟಪ 'ನಂದಗೋಕುಲ' ಪ್ರಸ್ತುತಿ– ಕೆ.ಬಿ. ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 "ಕನಕ–ಜಾನಕಿ" ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ– ದಿವಾಕರ ಹೆಗಡೆ, ಭಾಗವತರು– ಅನಂತ ಹೆಗಡೆ, ದಂತಳಿಗೆ ಮದ್ದಳೆ ವಾದಕರು– ಅನಂತ ಪದ್ಮನಾಭ ಫಾಟಕ್, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು: ಎಸ್. ಪ್ರವೀಣ್, 3.45 ಯಕ್ಷಗಾನ ತಾಳ ಮದ್ದಲೆ ಪ್ರಸಂಗ– ವೀರವರ್ಮ ಕಾಳಗ, ಪ್ರಸ್ತುತಿ– ವೇಣೂರಿನ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಕೇಂದ್ರದ ಸದಸ್ಯರು.

ಸಂಜೆ: 6.50 ಕೃಷಿರಂಗ: ಪಶುರಂಗ– ಮೈಸೂರು ಜಿಲ್ಲಾ ಪಶುಪಾಲನಾ ಇಲಾಖೆಯ ಕಾರ್ಯಚಟುವಟಿಕೆ ಕುರಿತು ಡಾ. ನಾಗರಾಜು ಅವರೊಂದಿಗೆ ಸಂದರ್ಶನ, 8.00 ಮೈಸೂರು ದಸರಾ 2023: ಉದ್ಘಾಟನಾ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ– ಬಿ. ದಿಗ್ವಿಜಯ್, ಡಾ., ಮೈಸೂರು ಉಮೇಶ್.

ರಾತ್ರಿ: 9.30 ರಾಷ್ಟ್ರೀಯ ನಾಟಕ– ಹುಚ್ಚು ಹುಡುಗಿ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ: ಪಂಡಿತ್ ಹರೀಶ್ ತಿವಾರ್– ಗಾಯನ.

ದಸರಾ ಕಾರ್ಯಕ್ರಮಗಳು

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಿ ಸನ್ನಿಧಿ



ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ ದಸರಾ ಮಹೋತ್ಸವ ಉದ್ಘಾಟನೆ, ಉದ್ಘಾಟನೆ : ಸಿನಿಮಾ ಸಾಹಿತಿ ಹಾಗೂ ಚಲನಚಿತ್ರ ಸಂಗೀತ ನಿರ್ದೇಶಕ ನಾದಬ್ರಹ್ಮ ಡಾ.ಹಂಸಲೇಖ, ಘನ ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ವಿತ್ತ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ, ಕೌಶಲ್ಯಾಭಿವೃದ್ಧಿ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ಕೃಷಿ ಸಚಿವರಾದ ಶೋಭಾ ಕರಂದ್ಲಾಜೆ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ, ರಾಸಾಯನಿಕ, ರಸಗೊಬ್ಬರ ರಾಜ್ಯ ಸಚಿವ ಭಗವಂತ ಖೂಬಾ, ಮುಖ್ಯ ಅತಿಥಿಗಳು: ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ತಂಗಡಗಿ ಶಿವರಾಜ್ ಸಂಗಪ್ಪ, ಹೆಚ್.ಕೆ. ಪಾಟೀಲ್, ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಈಶ್ವರ್ ಖಂಡ್ರೆ, ಬಿ.ಎಸ್. ಸುರೇಶ್, ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಶಾಸಕ ಜಿ.ಟಿ. ದೇವೇಗೌಡ, ಬೆಳಗ್ಗೆ 10.15 ರಿಂದ 10.36.

■ **ಅರಮನೆ ಆವರಣ**

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು : ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ತಂಗಡಗಿ ಶಿವರಾಜ್ ಸಂಗಪ್ಪ, ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್, ಸಭಾಪತಿ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಸಂಜೆ 7ಕ್ಕೆ ನಾದಸ್ವರ ವಿದ್ವಾನ್ ಎಸ್. ಪುಟ್ಟರಾಜು ಮತ್ತು ತಂಡ ಹಾಗೂ ಯದುಕುಮಾರ್ ಮತ್ತು ತಂಡದಿಂದ ನಾದಸ್ವರ ವಾದನ, ರಾಜಪ್ಪ ಮತ್ತು ಮಲ್ಲೇಶ್ ತಂಡದಿಂದ ವೀರಭದ್ರ ಕುಣಿತ, ವಿದುಷಿ ಬಿ.ರಶ್ಮಿ ಮತ್ತು ತಂಡದಿಂದ ನಾಡಗೀತೆ ಹಾಗೂ ಆಸ್ಥಾನ ಗೀತೆ ಗಾಯನ, ಚಲನಚಿತ್ರ ನಟಿ ಭಾವನ ರಾಮಣ್ಣ ಮತ್ತು ತಂಡದಿಂದ ನೃತ್ಯ ರೂಪಕ ಶ್ರೀ ಚಾಮುಂಡೇಶ್ವರಿ ಮರ್ಧಿನಿ ಸಿಂಹವಾಹಿನಿ, ಅಜಯ್ ವಾರಿಯರ್–ಸುನಿತಾ ಮತ್ತು ತಂಡದಿಂದ ಸಂಗೀತಯಾನ.

■ **ಕರ್ನಾಟಕ ಕಲಾಮಂದಿರ**

ಚಲನಚಿತ್ರೋತ್ಸವ, ಉದ್ಘಾಟನೆ: ಬೆಳಗ್ಗೆ 10ಕ್ಕೆ ಸಾಧುಕೋಕಿಲಾ ಹಾಗೂ ತಂಡದವರಿಂದ ಸಂಗೀತ ಮತ್ತು ಮನರಂಜನಾ ಕಾರ್ಯಕ್ರಮ, ಹಾಸ್ಯ ಚಕ್ರವರ್ತಿ ನರಸಿಂಹರಾಜು ಅವರ ಪುತ್ರಿ ಸುಧಾ ನರಸಿಂಹರಾಜು ಅವರಿಗೆ ಗೌರವ ಸಮರ್ಪಣೆ. ಬೆಳಗ್ಗೆ 11.30ಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ನಾದಬ್ರಹ್ಮ ಹಂಸಲೇಖ, ತಾರಾ ದಂಪತಿ ಸುನೀಲ್ ಕುಮಾರ್ (ಡಾರ್ಲಿಂಗ್ ಕೃಷ್ಣ) ಮತ್ತು ಮಿಲನ ನಾಗರಾಜ್, ನಟಿಯರಾದ ಮಾನ್ವಿತಾ ಕಾಮತ್, ಮಯೂರಿ, ವೈಭವಿ ಶಾಂಡಿಲ್ಯ, ಬೆಳಗ್ಗೆ 11.30ಕ್ಕೆ

■ **ಕುಪ್ಪಣ್ಣ ಪಾರ್ಕ್**

ಫಲಪುಷ್ಪ ಪ್ರದರ್ಶನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಧ್ಯಾಹ್ನ 12.30ಕ್ಕೆ.

■ **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ**

ಆಹಾರ ಮೇಳ, ಉದ್ಘಾಟನೆ: ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ, ಮಧ್ಯಾಹ್ನ1ಕ್ಕೆ

■ **ಶ್ರೀದೇವರಾಜ ಅರಸು ವಿವಿದೋದ್ದೇಶ ಕ್ರೀಡಾಂಗಣ**

ದಸರಾ ಕುಸ್ತಿ ಪಂದ್ಯಾವಳಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಜೆ 4ಕ್ಕೆ

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ**

ವಸ್ತು ಪ್ರದರ್ಶನ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಜೆ 4.30ಕ್ಕೆ

■ **ಸೆನೆಟ್ ಭವನ, ಮೈಸೂರು ವಿಶ್ವವಿದ್ಯಾನಿಲಯ**

ಯೋಗ ದಸರಾ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಜೆ 5ಕ್ಕೆ.

■ **ಕರ್ನಾಟಕ ಕಲಾಮಂದಿರ**

ಅಖಿಲ ಭಾರತ ಹಾಗೂ ರಾಜ್ಯ ಮಟ್ಟದ ಚಿತ್ರಶಿಲ್ಪ ಕಲಾ ಪ್ರದರ್ಶನ, ಉದ್ಘಾಟನೆ: ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಸಂಜೆ 5ಕ್ಕೆ.

■ **ರಂಗಾಯಣ**

ನವರಾತ್ರಿ ರಂಗೋತ್ಸವ, ಉದ್ಘಾಟನೆ: ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಸಂಜೆ 5.30ಕ್ಕೆ.

ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ

ವಿದ್ಯುತ್ ದೀಪಾಲಂಕಾರ, ಉದ್ಘಾಟನೆ: ಇಂಧನ ಸಚಿವ ಕೆ.ಜೆ.ಜಾರ್ಜ್, ಸಂಜೆ 6.30ಕ್ಕೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ನಾಡಿನ ಸಮಸ್ತ ಜನತೆಗೆ ಮೈಸೂರು
ದಸರಾ
ಹಬ್ಬದ ಶುಭಾಶಯಗಳು
ಅದಿ ದೇವತೆ ತಾಯಿ ಚಾಮುಂಡೇಶ್ವರಿ ಸಕಲರಿಗೂ ಸನ್ಮಂಗಳವನ್ನುಂಟು ಮಾಡಲಿ. ನಾಡಿನ ಸಮಸ್ತರು ಸುಖವಾಗಿರಲಿ..
– ಜಿಟಿಡಿ ಕುಟುಂಬದ ಹಾರೈಕೆ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 15 ಭಾನುವಾರ 2023

ಸಂಪುಟ: 44 | ಸಂಚಿಕೆ: 180 | ಪುಟಗಳು: 12+XII

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4



ಇಂದು ದಸರಾ ಉದ್ಘಾಟನೆ

ಚಾಮುಂಡಿಬೆಟ್ಟದಲ್ಲಿ ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ ನಾದಬ್ರಹ್ಮ ಡಾ.ಹಂಸಲೇಖರಿಂದ 2023ರ ನವರಾತ್ರಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ







ಈ ಬಾರಿ ದಸರಾಗೆ ಚಾಲನೆ ನೀಡಲಿರುವ ನಾದಬ್ರಹ್ಮ ಹಂಸಲೇಖ

ವಿವಿಧ ಅಲಂಕಾರ

ದಸರಾ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಿಗೆ ಒಂಭತ್ತು ದಿನವೂ ವಿವಿಧ ಅಲಂಕಾರ ಮಾಡಲಾಗುತ್ತದೆ. ಮೊದಲ ದಿನವಾದ ನಾಳೆ(ಅ.15) ಬ್ರಾಹ್ಮೀ, ಅ.16ರಂದು ಮಹೇಶ್ವರಿ, ಅ.17ರಂದು ಕೌಮಾರಿ, ಅ.18ರಂದು ವೈಷ್ಣವಿ, ಅ.19ರಂದು ವಾರಾಹಿ, ಅ.20ರಂದು ಇಂದ್ರಾಣಿ, ಅ.21ರಂದು ಸರಸ್ವತಿ, ಅಂದು ಸಂಜೆ ಕಾಳರಾತ್ರಿ ಪೂಜೆ ನಡೆಯುತ್ತದೆ. ಅ.22ರಂದು ದುರ್ಗಾ ಅಲಂಕಾರ, ಅ.23ರಂದು ಮಹಾಲಕ್ಷ್ಮೀ, ಅ.24ರಂದು ಅಶ್ವಾರೋಹಣ ಅಲಂಕಾರದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ಮೈಸೂರು, ಅ. 14(ಆರ್‌ಕೆ,ಎಂಟಿವೈ)– ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ನಾಳೆ (ಅ. 15)ಯಿಂದ ಆರಂಭವಾಗಲಿದೆ.

ಚಾಮುಂಡಿಬೆಟ್ಟದಲ್ಲಿ ನಾಡಿನ ಅಧಿದೇವತೆ ಚಾಮುಂಡೇಶ್ವರಿಗೆ ಭಾನುವಾರ ಬೆಳಗ್ಗೆ 10.15ರಿಂದ 10.36 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಅಗ್ರಪೂಜೆ ನೆರವೇರಿಸುವ ಮೂಲಕ ಖ್ಯಾತ ಚಲನ ಚಿತ್ರ ಸಂಗೀತ ನಿರ್ದೇಶಕರಾದ ನಾದ ಬ್ರಹ್ಮ ಹಂಸಲೇಖ ಅವರು 2023ನೇ ಸಾಲಿನ ನವರಾತ್ರಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡುವರು. ದಸರಾ ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತರಿರುವರು. ಶಾಸಕ ಜಿ.ಟಿ.ದೇವೇಗೌಡರು ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಶಿ, ರಾಜೀವ್ ಚಂದ್ರಶೇಖರ್, ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ ಖೂಬಾ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ರಾಜ್ಯ ಸಚಿವರಾದ ಕೆ.ವೆಂಕಟೇಶ್, ತಂಗಡಗಿ ಶಿವರಾಜ್ ಸಂಗಪ್ಪ, ಹೆಚ್.ಕೆ.ಪಾಟೀಲ್, ರಾಮಲಿಂಗಾ ರೆಡ್ಡಿ, ಕೆ.ಜೆ.ಜಾರ್ಜ್, ಈಶ್ವರ ಖಂಡ್ರೆ, ಬಿ.ಎಸ್. ಸುರೇಶ್, ಮೇಯರ್ ಶಿವಕುಮಾರ್ ಪಾಲ್ಗೊಳ್ಳುವರು. ದಸರಾ ಉದ್ಘಾಟನೆಗಾಗಿ ಚಾಮುಂಡೇಶ್ವರಿ ಸನ್ನಿಧಿ ಸಂಪೂರ್ಣ ಸಜ್ಜುಗೊಂಡಿದ್ದು, ದೇವಸ್ಥಾನವನ್ನು ತಳಿರು–ತೋರಣ ಹಾಗೂ ಪುಷ್ಪಗಳಿಂದ ಅಲಂಕೃತಗೊಳಿಸಲಾಗಿದೆ. ಸಮಾರಂಭಕ್ಕಾಗಿ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಭವ್ಯ ವೇದಿಕೆ ಸಿದ್ಧಗೊಂಡಿದ್ದು, ಭಾರೀ ಪೊಲೀಸ್ ಭದ್ರತೆ ಒದಗಿಸಲಾಗಿದೆ.


ನಾಡಹಬ್ಬ ಉದ್ಘಾಟಕರಾದ ಹಂಸಲೇಖ ಅವರು ತಮ್ಮ ಶ್ರೀಮತಿಯೊಂದಿಗೆ ಈಗಾಗಲೇ ಇಂದು ಪುರ ಪ್ರವೇಶ ಮಾಡಿದ್ದು, ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅವರ ಸಂಪುಟ ಸಹೋದ್ಯೋಗಿಗಳೂ ಸಹ ಆಗಮಿಸಿ ವಾಸ್ತವ್ಯ ಹೂಡಿದ್ದಾರೆ. ಭಾನುವಾರ ಸಂಜೆ 7 ಗಂಟೆಗೆ ಅರಮನೆ ಆವರಣದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಲಿರುವ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ಇದೇ ವೇಳೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡುವರು. ಉಳಿದಂತೆ ಅ.15ರಂದು

▶ 8ನೇ ಪುಟಕ್ಕೆ









ಅ.21, ಅರಮನೆ ಆವರಣದ ವೇದಿಕೆಯಲ್ಲಿ ಪಂಡಿತ್ ರಾಜೀವ್ ತಾರಾನಾಥ್ ಕಾರ್ಯಕ್ರಮ ಆಯೋಜನೆ



ಸಂಭಾವನೆಯಲ್ಲಿ ಕಮಿಷನ್ ನೀಡಬೇಕೆಂಬ ವಿಷಯ ನನಗೆ ಬೇರೆ ವ್ಯಕ್ತಿಯಿಂದ ತಿಳಿಯಿತು. ಅವರ ಮೊಬೈಲ್‌ಗೆ ಈ ರೀತಿಯ ಸಂದೇಶ ಬಂದಿದೆ ಎಂಬ ಮಾಹಿತಿ ನನಗೆ ತಲುಪಿದೆಯೇ ಹೊರತು, ಯಾವುದೇ ಅಧಿಕಾರಿಯಾಗಲೀ, ಸಮಿತಿಯವರಾಗಲೀ ನನ್ನ ಬಳಿ ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಕಮಿಷನ್‌ಗಾಗಿ ಸಂದೇಶ ರವಾನಿಸಿರುವ ವ್ಯಕ್ತಿ ಯಾರೆಂಬುದನ್ನು ಪತ್ತೆ ಹಚ್ಚುವಂತೆ ಅಧಿಕಾರಿಗಳಿಗೆ ಹೇಳಿದ್ದೇನೆ. ಈ ವಿಷಯವನ್ನು ನನಗೆ ಯಾರು ಮುಟ್ಟಿಸಿದರು ಎಂಬುದನ್ನು ಕೇಳಬೇಡಿ. ಅಧಿಕಾರಿಗಳೇ ಅದನ್ನು ಕಂಡುಹಿಡಿಯಲಿ.

–ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್

ಮೈಸೂರು, ಅ.14–ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರು ಅರಮನೆ ಆವರಣದ ಸಾಂಸ್ಕೃತಿಕ ವೇದಿಕೆಯಲ್ಲಿ ಅ.21ರಂದು ಕಾರ್ಯಕ್ರಮ ನೀಡಲಿದ್ದಾರೆ ಎಂದು ದಸರಾ ಸಾಂಸ್ಕೃತಿಕ ಉಪ ಸಮಿತಿಯ ವಿಶೇಷಾಧಿಕಾರಿಯೂ ಆದ ಜಿಪಂ ಸಿಇಒ ಕೆ.ಎಂ.ಗಾಯಿತ್ರಿ ತಿಳಿಸಿದ್ದಾರೆ.

ಕಾರ್ಯಕ್ರಮದ ಸಂಭಾವನೆಯಲ್ಲಿ ಕಮಿಷನ್ ನೀಡುವಂತೆ ಬೇಡಿಕೆಯನ್ನು ಅವರ ಮುಂದಿಡಲಾಗಿತ್ತು ಎಂಬ ವಿಚಾರವಾಗಿ ಇಂದು ಉಪಸಮಿತಿ ಕಾರ್ಯಾಧ್ಯಕ್ಷ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಡಾ.ಎಂ.ಡಿ.ಸುದರ್ಶನ್ ಅವರೊಂದಿಗೆ ತಾವು ರಾಜೀವ್ ತಾರಾನಾಥ್ ಅವರ ನಿವಾಸಕ್ಕೆ ತೆರಳಿ, ಅವರೊಂದಿಗೆ ಸಮಾಲೋಚನೆ ನಡೆಸಿದ್ದಾಗಿ ತಿಳಿಸಿದರು.

ಯಾವುದೇ ಅಧಿಕಾರಿ ಅಥವಾ ಸಮಿತಿ ಸಂಬಂಧಪಟ್ಟವರು ತಮ್ಮ ಬಳಿ ಕಮಿಷನ್ ಬೇಡಿಕೆ ಇಟ್ಟಿಲ್ಲ. ಹಾಗೂ ತಾವು ಈ ಸಂಬಂಧ ಯಾವುದೇ ಪತ್ರಿಕಾ ಹೇಳಿಕೆ ನೀಡಿಲ್ಲ ಎಂದು ರಾಜೀವ್ ತಾರಾನಾಥ್ ತಮಗೆ ಸ್ಪಷ್ಟಪಡಿಸಿದರು ಎಂದ ಅವರು, ರಾಜೀವ್ ತಾರಾನಾಥ್ ಅವರು ಕಾರ್ಯಕ್ರಮ ನೀಡುವ ವಿಚಾರದಲ್ಲಿ ಈ ಹಿಂದೆ ಸಮಿತಿಯು ನೇರವಾಗಿ ಸಂಪರ್ಕಿಸಿತ್ತು. ಆದರೆ ಅವರ ಆರೋಗ್ಯದಲ್ಲಿ ವ್ಯತ್ಯಾಸವಿದೆ ಎಂಬ ಕಾರಣದಿಂದ ಕಾರ್ಯಕ್ರಮ ನಿಗದಿಪಡಿಸಿರಲಿಲ್ಲ. ಈಗ ಅವರ ಆರೋಗ್ಯ ಸುಧಾರಣೆ ಆಗಿದ್ದು, ಅ.21 ರಂದು 1 ಗಂಟೆ ಕಾಲ ಸರೋದ್ ವಾದನ ಪ್ರಸ್ತುತಪಡಿಸಲು ಅವರು ಒಪ್ಪಿಗೆ ಸೂಚಿಸಿದ್ದಾರೆ ಎಂದು ಗಾಯಿತ್ರಿ ತಿಳಿಸಿದರು.

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕಲಾವಿದರು ಹಾಗೂ ಕಲಾ ತಂಡದವರಿಗೆ ಯಾವುದೇ ವ್ಯಕ್ತಿ ನೇರವಾಗಿ ಅಥವಾ ದೂರವಾಣಿ ಮೂಲಕ ಕಮಿಷನ್‌ಗೆ ಬೇಡಿಕೆ ಇಟ್ಟಲ್ಲಿ ಕೆ.ಎಂ. ಗಾಯಿತ್ರಿ (9480873000), ಟಿ.ಎಸ್.ಸುಬ್ರಹ್ಮಣ್ಯ (9448882766), ವಿ.ಎನ್.ಮಲ್ಲಿಕಾರ್ಜುನಸ್ವಾಮಿ (9916600027), ಡಾ. ಸುದರ್ಶನ್ (9448244340) ಅವರಿಗೆ ದೂರು ಸಲ್ಲಿಸುವಂತೆ ಗಾಯಿತ್ರಿ ತಿಳಿಸಿದರು.

ದಸರಾದಲ್ಲಿ ಸಂಗೀತ ಕಾರ್ಯಕ್ರಮದ ಕಮಿಷನ್ ಕಹಳೆ! ಕನ್ನಡ–ಸಂಸ್ಕೃತಿ ಇಲಾಖೆಯಿಂದ ದೂರು: ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಅ.14–ಅರಮನೆ ಆವರಣದ ದಸರಾ ಸಾಂಸ್ಕೃತಿಕ ವೇದಿಕೆಯಲ್ಲಿ ಸಂಗೀತ ಕಾರ್ಯಕ್ರಮದ ಸಂಭಾವನೆಯಲ್ಲಿ ಕಮಿಷನ್ ನೀಡಬೇಕೆಂದು ಅನಾಮಧೇಯ ವ್ಯಕ್ತಿ ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರಿಗೆ ಬೇಡಿಕೆ ಇಟ್ಟಿದ್ದ ಎಂದು ದಸರಾ ಸಾಂಸ್ಕೃತಿಕ ಉಪ ಸಮಿತಿ ಕಾರ್ಯದರ್ಶಿಯೂ ಆದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಜಯಲಕ್ಷ್ಮೀಪುರಂ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಇಂದು ಅಧಿಕಾರಿಗಳು ರಾಜೀವ್ ತಾರಾನಾಥ್ ಅವರ ನಿವಾಸಕ್ಕೆ ಭೇಟಿ ನೀಡಿದಾಗ ಅವರು, 'ಯಾವುದೇ ಅಧಿಕಾರಿಯಾಗಲೀ, ಸಮಿತಿಯವರಾಗಲೀ ನನ್ನನ್ನು ಭೇಟಿಯಾಗಿರಲಿಲ್ಲ. ಆದರೆ ನಾಲ್ಕೈದು ದಿನದ ಹಿಂದೆ ಅನಾಮಧೇಯ ವ್ಯಕ್ತಿಯೋರ್ವ ದೂರವಾಣಿ ಕರೆ ಮಾಡಿ ಸಂಭಾವನೆಯಲ್ಲಿ ಕಮಿಷನ್ ನೀಡುವಂತೆ ಕೇಳಿದ್ದ' ಎಂದು ಅಧಿಕಾರಿಗಳಿಗೆ ತಿಳಿಸಿದರು ಎಂದು ದೂರಿನಲ್ಲಿ ಹೇಳಲಾಗಿದೆ.

ತನ್ನ ಬಳಿ ಕಮಿಷನ್ ಕೇಳಿದ ವ್ಯಕ್ತಿ ಸರ್ಕಾರಿ ಅಧಿಕಾರಿಯೋ ಅಥವಾ ಖಾಸಗಿ ವ್ಯಕ್ತಿಯೋ ಎಂಬುದು ತಮಗೆ ತಿಳಿದಿಲ್ಲ ಎಂದು ರಾಜೀವ್ ತಾರಾನಾಥ್ ತಿಳಿಸಿದ್ದಾರೆ.

ಹೀಗಾಗಿ ರಾಜೀವ್ ತಾರಾನಾಥ್ ಅವರ ಬಳಿ ಕಮಿಷನ್‌ಗೆ ಬೇಡಿಕೆ ಇಟ್ಟಿರುವ ವ್ಯಕ್ತಿಯ ಬಗ್ಗೆ ತನಿಖೆ ನಡೆಸಿ, ಕಾನೂನು ರೀತಿ ಕ್ರಮ ಕೈಗೊಳ್ಳಬೇಕು ಎಂದು ಸುದರ್ಶನ್ ನೀಡಿದ ದೂರಿನನ್ವಯ ಜಯಲಕ್ಷ್ಮೀಪುರಂ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆರ್.ಪ್ರಭುರಾಜ್, ಭಾರತೀಯ ದಂಡ ಸಂಹಿತೆ 384, 420, 511ರಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಿದ್ದಾರೆ.

ಇಂದಿನಿಂದ ಮಡಿಕೇರಿ ದಸರಾ



ಮಡಿಕೇರಿ,ಅ.14– ಐತಿಹಾಸಿಕ ಮಡಿಕೇರಿ ದಸರಾ ಆಚರಣೆಗೆ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಮಡಿಕೇರಿ ನಗರ ದಸರಾ ಸಮಿತಿ ಅಧ್ಯಕ್ಷೆ ಅನಿತಾ ಪೂವಯ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅ.15ರಂದು ನಗರದ ಪಂಪಿನ ಕೆರೆಯಲ್ಲಿ 4 ಶಕ್ತಿ ದೇವತೆಗಳಿಗೆ ಪೂಜೆ ಸಲ್ಲಿಸಿ ಕರಗ ಹೊರಡಿಸುವ ಮೂಲಕ ಉತ್ಸವ ಆರಂಭವಾಗಲಿದ್ದು, ನವ ದಿನಗಳೂ ಕರಗಗಳು ನಗರ ಪ್ರದಕ್ಷಿಣೆ ತೆರಳಲಿವೆ ಎಂದರು.

ನಗರದ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ನವ ದಿನಗಳ ಕಾಲ ಕ್ರೀಡಾಕೂಟಗಳು, ಮಕ್ಕಳ ದಸರಾದ ಮಕ್ಕಳ ಸಂತೆ, ಮಹಿಳಾ ದಸರಾ, ಜನಪದ ದಸರಾ, ಕವಿಗೋಷ್ಠಿ ಸೇರಿದಂತೆ ಅ.24 ನಡುರಾತ್ರಿಯೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಖ್ಯಾತ ಸಂಗೀತಗಾರ ವಿಜಯ್ ಪ್ರಕಾಶ್ ಮತ್ತವರ ತಂಡ ಅ.22ರ ಮಹಿಳಾ ದಸರಾದಂದು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದೆ. ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ನಗರ ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ಬಿ.ವೈ.ರಾಜೇಶ್, ಉಪಾಧ್ಯಕ್ಷ ಜೀವನ್, ದಸರಾ ಸಮಿತಿ ಪ್ರಮುಖರಾದ ರಾಜೇಶ್, ಅಲಂಕಾರ ಸಮಿತಿಯ ಲೋಕೇಶ್ ಹಾಜರಿದ್ದರು.

ಏಳನೇ ಪುಟದಿಂದ

ಇಂದು ದಸರಾ ಉದ್ಘಾಟನೆ

ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದಲ್ಲಿ ದಸರಾ ಚಲನಚಿತ್ರೋತ್ಸವ, ಮಧ್ಯಾಹ್ನ 12.30 ಗಂಟೆಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನ, ಮಧ್ಯಾಹ್ನ 1 ಗಂಟೆಗೆ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಆಹಾರ ಮೇಳ, ಸಂಜೆ 4 ಗಂಟೆಗೆ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಕುಸ್ತಿ ಪಂದ್ಯಾವಳಿ, ಸಂಜೆ 4.30 ಗಂಟೆಗೆ ದಸರಾ ವಸ್ತುಪ್ರದರ್ಶನ, ಸಂಜೆ 5 ಗಂಟೆಗೆ ಸೆನೆಟ್ ಭವನದಲ್ಲಿ ಯೋಗ ದಸರಾ, ಕಲಾಮಂದಿರದಲ್ಲಿ ಚಿತ್ರ ಶಿಲ್ಪಕಲಾ ಪ್ರದರ್ಶನ, ಸಂಜೆ 5.30 ಗಂಟೆಗೆ ರಂಗಾಯಣದಲ್ಲಿ ನವರಾತ್ರಿ ರಂಗೋತ್ಸವ ಹಾಗೂ ಸಂಜೆ 6.30 ಗಂಟೆಗೆ ಸಯ್ಯಾಜಿರಾವ್ ರಸ್ತೆಯ ಕೆ.ಆರ್. ಆಸ್ಪತ್ರೆ ಎದುರು ಹಸಿರು ಮಂಟಪದಲ್ಲಿ ದಸರಾ ವಿದ್ಯುತ್ ದೀಪಾಲಂಕಾರವನ್ನು ವಿವಿಧ ಗಣ್ಯರು ಉದ್ಘಾಟಿಸುವರು.

ಈ ಮೂಲಕ ನಾಡಹಬ್ಬದ ಎಲ್ಲಾ ಕಾರ್ಯಕ್ರಮಗಳೂ ಆರಂಭವಾಗಲಿದ್ದು, ಅಕ್ಟೋಬರ್ 16ರಂದು ಬೆಳಗ್ಗೆ 6.30 ಗಂಟೆಗೆ ನಂಜನಗೂಡಿನ ಶ್ರೀ ನಂಜುಡೇಶ್ವರ ದೇವಸ್ಥಾನದ ಆವರಣದಲ್ಲಿ ಗ್ರಾಮೀಣ ಯೋಗ, ಬೆಳಗ್ಗೆ 9.30 ಗಂಟೆಗೆ ಮೈಸೂರಿನ ಅರಮನೆ ಮುಂಭಾಗ ರಂಗೋಲಿ ಸ್ಪರ್ಧೆ, ಬೆಳಗ್ಗೆ 11 ಗಂಟೆಗೆ ಜೆಕೆ ಮೈದಾನದಲ್ಲಿ ಮಹಿಳಾ ದಸರಾ ಉದ್ಘಾಟನೆಗೊಳ್ಳಲಿದೆ. ಅಕ್ಟೋಬರ್ 22ರವರೆಗೆ ಮಕ್ಕಳ ಚಿತ್ರ ಬಿಡಿಸುವ ಸ್ಪರ್ಧೆ, ಕಾವ್ಯ ಸಂಭ್ರಮ, ಕವಿಗೋಷ್ಠಿ, ಮಕ್ಕಳ ದಸರಾ, ಯುವ ದಸರಾ ಸೇರಿದಂತೆ ಹತ್ತುಹಲವು ಕಾರ್ಯಕ್ರಮಗಳು ನಡೆಯಲಿವೆ.

ಸರ್ವ ಸಿದ್ಧತೆ: ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೆ ವಾಟರ್‌ಪ್ರೂಫ್ ಶಾಮಿಯಾನ ಬಳಸಿ ವೇದಿಕೆ ನಿರ್ಮಿಸಲಾಗಿದ್ದು, ವೇದಿಕೆ ಹಿಂಭಾಗ ಬೃಹತ್ ಎಲ್‌ಇಡಿ ಪರದೆ ಅಳವಡಿಸಲಾಗಿದೆ. ಮುಖ್ಯ ವೇದಿಕೆಯಲ್ಲಿ 30ರಿಂದ 40 ಮಂದಿ ಗಣ್ಯರಿಗೆ ಆಸನದ ವ್ಯವಸ್ಥೆ ಮಾಡಲಾಗಿದ್ದು, ಕಾರ್ಯಕ್ರಮ ವೀಕ್ಷಣೆಗೆ ವಿಶೇಷ ಆಹ್ವಾನಿತರು ಸೇರಿದಂತೆ 800 ರಿಂದ ಒಂದು ಸಾವಿರ ಮಂದಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ದಸರಾ ಮಹೋತ್ಸವದ ಚಾಲನೆ ಹಿನ್ನೆಲೆಯಲ್ಲಿ ಶನಿವಾರವೇ ಚಾಮುಂಡಿಬೆಟ್ಟದಲ್ಲಿ ಅಗತ್ಯ ಸಿದ್ಧತಾ ಕಾರ್ಯ ಪೂರ್ಣಗೊಂಡಿದ್ದು, ಪೊಲೀಸರು ವೇದಿಕೆಯನ್ನು ತಪಾಸಣೆ ಮಾಡಿ, ಭದ್ರತೆಗೆ ಕ್ರಮ ಕೈಗೊಂಡಿದ್ದಾರೆ. ದಸರಾ ಉದ್ಘಾಟನಾ ಕಾರ್ಯಕ್ರಮದ ಸಿದ್ಧತೆಯನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಇಂದು ಬೆಳಗ್ಗೆ ಪರಿಶೀಲಿಸಿದರು. ದಸರಾ ಉದ್ಘಾಟನೆಗಾಗಿ ಇಂದು ಬೆಳ್ಳಿರಥವನ್ನು ತೊಳೆದು ಸ್ವಚ್ಛಗೊಳಿಸಿ, ಅಲ್ಲದೆ, ವೇದಿಕೆ ಮೇಲೆ ಬೆಳ್ಳಿ ರಥ ನಿಲ್ಲಿಸಲಾಗಿದ್ದು, ನಾಳೆ ಬೆಳಗ್ಗೆ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಆ ನಂತರ ನಿಗದಿತ ಸಮಯದಲ್ಲಿ ಪುಷ್ಪಾರ್ಚನೆ ಮಾಡಲಾಗುತ್ತದೆ.

ಸ್ವಾಗತ ಕಮಾನು, ಕಲಾತಂಡಗಳ ಪ್ರದರ್ಶನ: ದಸರಾ ಮಹೋತ್ಸವದ ಉದ್ಘಾಟನೆಗೆ ಆಗಮಿಸುವ ಗಣ್ಯರಿಗೆ ಸ್ವಾಗತ ಕೋರಲು ಬೆಟ್ಟದಲ್ಲಿರುವ ಪೊಲೀಸ್ ಉಪಠಾಣೆಯ ಬಳಿ ಸ್ವಾಗತ ಕಮಾನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ದೇವಾಲಯದವರೆಗೂ ಗಣ್ಯರನ್ನು, ಕರೆತರಲು ವಿವಿಧ ಜಾನಪದ ಕಲಾತಂಡಗಳನ್ನು ನಿಯೋಜಿಸಲಾಗಿದೆ.

ಪ್ರೊ. ಭಗವಾನ್ ಮನೆಗೆ ಒಕ್ಕಲಿಗರ ಮುತ್ತಿಗೆ

ಪೊಲೀಸರು ದೂರು ದಾಖಲಿಸದಿದ್ದರೆ ಸಿದ್ದರಾಮಯ್ಯಗೆ ಪ್ರತಿಭಟನೆ ಎಚ್ಚರಿಕೆ

- ಭಗವಾನ್ ಫೋಟೋಗೆ ಎಳ್ಳು–ನೀರು
- ತಳ್ಳಾಟ ನೂಕಾಟದಲ್ಲಿ ಒಬ್ಬರಿಗೆ ಗಾಯ
- ಬಿಗುವಿನ ಪರಿಸ್ಥಿತಿ, ಹಲವರು ಪೊಲೀಸರ ವಶಕ್ಕೆ
- ಪ್ರೊಫೆಸರ್ ಮನೆಗೆ ಮತ್ತಷ್ಟು ಭದ್ರತೆ



ಮೈಸೂರು, ಅ.14(ಬಿಎಲ್‌ಯು)– ಒಕ್ಕಲಿಗರು ಸಂಸ್ಕೃತಿ ಹೀನರು, ಪಶುಗಳು ಎಂದು ಬಹಿರಂಗವಾಗಿಯೇ ಹೇಳಿಕೆ ನೀಡಿದ್ದ ವಿಚಾರವಾದಿ ಪ್ರೊ. ಭಗವಾನ್ ಮನೆಗೆ ಭಾರಿ ಸಂಖ್ಯೆಯ ಒಕ್ಕಲಿಗರು, ಒಕ್ಕಲಿಗರ ಸಂಘದ ಆಶ್ರಯದಲ್ಲಿ ಇಂದು ಮುತ್ತಿಗೆ ಹಾಕಿ, ಆಕ್ರೋಶ ವ್ಯಕ್ತಪಡಿಸಿದರು. ಸಮುದಾಯದ ಬಗ್ಗೆ ಕೀಳಾಗಿ ಮಾತನಾಡಿರುವ ಪ್ರೊ.ಭಗವಾನ್ ವಿರುದ್ಧ ಪೊಲೀಸರು ಕೂಡಲೇ ಪ್ರಕರಣ ದಾಖಲಿಸಬೇಕು. ತಪ್ಪಿದರೆ ದಸರಾ ಉದ್ಘಾಟನೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯರ ಮುಂದೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸುತ್ತೇವೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಪ್ರೊ.ಭಗವಾನ್ ಮನೆಗೆ ಮುತ್ತಿಗೆ ಹಾಕಿದ ಒಕ್ಕಲಿಗರು, ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ನಮಗೆ ಸಂಸ್ಕೃತಿ ಇಲ್ಲ ಎಂದು ಹೇಳಿರುವ ಭಗವಾನ್ ಈಗ ಇಲ್ಲೇ ನಮಗೆ ಸಂಸ್ಕೃತಿ ಪಾಠ ಹೇಳಿಕೊಡಬೇಕು ಎಂದು ಒತ್ತಾಯಿಸಿದರು. ನಮ್ಮ ಸಮುದಾಯದ ಬಗ್ಗೆ ಅಗೌರವವಾಗಿ ಮಾತನಾಡಿರುವ ಪ್ರೊ. ಭಗವಾನ್ ಅವರನ್ನು ಕೂಡಲೇ ಗಡೀಪಾರು ಮಾಡಬೇಕು ಎಂದು ಪಟ್ಟು ಹಿಡಿದರು. ಜಾತಿ–ಜಾತಿ ನಡುವೆ ವಿಷ ಬೀಜ ಬಿತ್ತುತ್ತಿರುವ ಭಗವಾನ್ ವಿರುದ್ಧ ಧಿಕ್ಕಾರದ ಘೋಷಣಾ ಫಲಕ ಹಿಡಿದಿದ್ದ ಒಕ್ಕಲಿಗ ಸಂಘದವರು ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸಿದರು. ಇದರಿಂದ ಕುವೆಂಪುನಗರ ಕಾಂಪ್ಲೆಕ್ಸ್ ಬಳಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಪ್ರೊ.ಭಗವಾನ್ ಭಾವಚಿತ್ರಕ್ಕೆ ಎಳ್ಳು–ನೀರು ಬಿಟ್ಟು ವಿನೂತನವಾಗಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಒಕ್ಕಲಿಗ ಸಮುದಾಯದ ವಿರುದ್ಧ ಮಾತನಾಡಿರುವ ಪ್ರೊ.ಭಗವಾನ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಬೇಕು. ಇಲ್ಲದಿದ್ದರೆ ದಸರಾ ಉದ್ಘಾಟನೆಗೆ ಆಗಮಿಸುವ ಸಿಎಂ ಸಿದ್ದರಾಮಯ್ಯ ಮುಂದೆ ಕಪ್ಪುಪಟ್ಟಿ ಪ್ರದರ್ಶಿಸಿ, ಪ್ರತಿಭಟನೆ ನಡೆಸುತ್ತೇವೆ ಎಂದು ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಸತೀಶ್‌ಗೌಡ ಎಚ್ಚರಿಕೆ ನೀಡಿದರು.

ಮನೆಗೆ ನುಗ್ಗಲು ಯತ್ನ: ಪ್ರತಿಭಟನೆ ವೇಳೆ ಒಕ್ಕಲಿಗರು ಏಕಾಏಕಿ ಪ್ರೊ. ಭಗವಾನ್ ಮನೆಯೊಳಗೆ ನುಗ್ಗಲು ಯತ್ನಿಸಿದರು. ಆದರೆ ಅವರ ಮನೆ ಗೇಟ್ ಬಳಿ ಬ್ಯಾರಿಕೇಡ್ ಅಳವಡಿಸಿ ಪೊಲೀಸ್ ಸರ್ಪಗಾವಲು ಹಾಕಿ, ಬಿಗಿ ಬಂದೋಬಸ್ತ್ ಮಾಡಿದ್ದರಿಂದ ಒಳಗೆ ನುಗ್ಗಲು ಯಾರಿಗೂ ಸಾಧ್ಯವಾಗಲಿಲ್ಲ. ಆದರೂ ಬ್ಯಾರಿಕೇಡ್ ತಳ್ಳಿ ಒಳಗೆ ನುಗ್ಗಲು ಮುಂದಾದರು. ಕೆಲ ಸಮಯ ತಳ್ಳಾಟ, ನೂಕಾಟವಾಗಿ ಗಿರೀಶ್ ಎಂಬುವರ ತಲೆಗೆ ಪೆಟ್ಟು ಬಿದ್ದು ರಕ್ತ ಚಿಮ್ಮಿತು. ಈ ವೇಳೆ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಉದ್ವಿಗ್ನ ಪರಿಸ್ಥಿತಿ ಉಂಟಾಗುತ್ತಿರುವುದನ್ನು ಅರಿತ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು, ಕುವೆಂಪುನಗರ ಪೊಲೀಸ್ ಠಾಣೆಗೆ ಕರೆದೊಯ್ದರು. ನಂತರ ಪರಿಸ್ಥಿತಿ ತಿಳಿಯಾಯಿತು.

ಕೆಎಸ್‌ಆರ್‌ಪಿ, ಸಿಎಆರ್ ಹಾಗೂ ಸ್ಥಳೀಯ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಪ್ರತಿಭಟನಾಕಾರರಿಗಿಂತ ಪೊಲೀಸರ ಸಂಖ್ಯೆಯೇ ಹೆಚ್ಚಾಗಿತ್ತು. ಭಗವಾನ್ ಮನೆಯ ಪ್ರವೇಶ ದ್ವಾರವಲ್ಲದೆ ಸಂಪರ್ಕ ರಸ್ತೆಯಲ್ಲಿ ಬ್ಯಾರಿಕೇಡ್ ಹಾಕಿ ಯಾರೂ ಅವರ ಮನೆಯತ್ತ ಹೋಗದಂತೆ ಪೊಲೀಸರು ಹದ್ದಿನಕಣ್ಣಿಟ್ಟಿದ್ದಾರೆ.

ಹಾಗಾಗಿ ಇಂತಹ ವಿವಾದಿತ ಹೇಳಿಕೆ ನೀಡುವ ಪ್ರೊ.ಭಗವಾನ್ ಮನೆಗೆ ಈ ಮೊದಲೇ ಗನ್‌ಮನ್, ಇತರೆ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಆದರೆ ಈಗ ಒಕ್ಕಲಿಗ ಸಮುದಾಯದ ಬಗ್ಗೆ ಮತ್ತೊಮ್ಮೆ ವಿವಾದಿತ ಹೇಳಿಕೆ ನೀಡಿರುವ ಭಗವಾನ್ ಮನೆಗೆ ಮತ್ತಷ್ಟು ಭದ್ರತೆಯನ್ನು ಕಲ್ಪಿಸಲಾಗಿದೆ. ಒಕ್ಕಲಿಗ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್, ಪಿ.ಪ್ರಶಾಂತ್ ಗೌಡ, ಮುಖಂಡರಾದ ರವಿ, ಗಿರೀಶ್, ಬೀಡನಹಳ್ಳಿ ಸತೀಶ್ ಗೌಡ, ಕೃಷ್ಣೇಗೌಡ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಆನೆ ಸಾಗುವಾಗ ನಾಯಿ ಬೊಗಳುತ್ತವೆ...

ಪ್ರೊ.ಭಗವಾನ್‌ಗೆ ತಿರುಗೇಟು ನೀಡಿದ ಶಾಸಕ ಜಿ.ಟಿ.ದೇವೇಗೌಡರು



ಮೈಸೂರು, ಅ.14(ಬಿಎಲ್‌ಯು)–ಒಕ್ಕಲಿಗರು ಸಂಸ್ಕೃತಿ ಹೀನರು ಎಂದು ಹೇಳಿಕೆ ನೀಡಿರುವ ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ಕಿಡಿಕಾರಿರುವ ಶಾಸಕ ಜಿ.ಟಿ.ದೇವೇಗೌಡರು, ಆನೆ ಹೋಗುವಾಗ ನಾಯಿ ಬೊಗಳುತ್ತವೆ ಎಂದು ತಿರುಗೇಟು ನೀಡಿದ್ದಾರೆ. ಪ್ರೊ.ಭಗವಾನ್ ಮೆಂಟಲ್ ಗಿರಾಕಿ. ಮತಿಭ್ರಮಣೆಗೊಳಗಾದವರಂತೆ ಮಾತನಾಡುತ್ತಿರುವ ಅವರಿಗೆ ಕೂಡಲೇ ವೈದ್ಯಕೀಯ ಪರೀಕ್ಷೆಗೊಳಪಡಿಸಿ ಚಿಕಿತ್ಸೆ ಕೊಡಿಸಬೇಕು. ತಾನು ಹಾಗೂ ಕುವೆಂಪುರವರು ಯಾವ ಸಮುದಾಯದವರು ಎಂದು ಅರ್ಥ ಮಾಡಿಕೊಂಡು ಭಗವಾನ್ ಮಾತನಾಡಬೇಕಿತ್ತು. ಇಂತಹ ಅಗೌರವದ ಹೇಳಿಕೆ ನೀಡುವ ಮೂಲಕ ತಮ್ಮನ್ನು ತಾವೇ ಅಪಮಾನಿಸಿಕೊಂಡಿದ್ದಾರೆ. ಜೊತೆಗೆ ಪ್ರೊಫೆಸರ್ ಹುದ್ದೆಗಿರುವ ಮಹತ್ವವನ್ನು ಕಳೆದಿದ್ದಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು. ಸಂಸ್ಕೃತಿ ಇಲ್ಲದವರು ಸಂಸ್ಕೃತಿ ಬಗ್ಗೆ ಮಾತನಾಡುತ್ತಾರೆ. ಹಾಗೆಯೇ ಪ್ರೊ.ಭಗವಾನ್ ಇಂತಹ ಹೇಳಿಕೆ ನೀಡಿದ್ದಾರೆ. ತಮ್ಮ ಜೊತೆಗಿರುವ ಕೆಲವರನ್ನು ಅಪ್ಪಿಕೊಳ್ಳಲು ಇಂತಹ ಹೇಳಿಕೆ ನೀಡುತ್ತಿದ್ದು, ಸಮಾಜದ ಬಗ್ಗೆ ಅರಿವು ಕಳೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಕುವೆಂಪುಗೂ ಅಪಮಾನ ಮಾಡಿದ್ದಾರೆ



ಒಕ್ಕಲಿಗರು ಸಂಸ್ಕೃತಿ ಹೀನರು ಎಂದು ಹೇಳಿಕೆ ನೀಡುವ ಮೂಲಕ ಪ್ರೊ.ಭಗವಾನ್ ಕುವೆಂಪು ಅವರನ್ನು ಈ ವಿಚಾರಕ್ಕೆ ಎಳೆದು ತಂದು ಅವರಿಗೂ ಅಪಮಾನ ಮಾಡಿದ್ದಾರೆ ಎಂದು ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಕಿಡಿಕಾರಿದ್ದಾರೆ. ರೈತ ಗೀತೆ ಬರೆಯುವ ಮೂಲಕ ಕುವೆಂಪುರವರು ಒಕ್ಕಲಿಗರ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದಿದ್ದಾರೆ. ಒಕ್ಕಲಿಗ ಸಮಾಜದ ಬಗ್ಗೆ ಗೌರವ ಹೊಂದಿದ್ದ ಕುವೆಂಪು ಈ ಮಾತು ಹೇಳಿರಲು ಸಾಧ್ಯವೇ ಇಲ್ಲ. ಆಗೊಮ್ಮೆ ಹೇಳಿದ್ದರೆಂದರೆ ಭಗವಾನ್‌ನಂತಹ ಒಕ್ಕಲಿಗ ನೋಡಿಯೇ ಹೇಳಿರಬೇಕು ಎಂದು ತಿಳಿಸಿದ್ದಾರೆ. ಒಕ್ಕಲಿಗರ ಬಗ್ಗೆ ಹೇಳಿಕೆ ನೀಡಲು ಪ್ರೊ.ಭಗವಾನ್‌ಗೆ ಯೋಗ್ಯತೆ ಇಲ್ಲ. ತಲೆ ಕೆಟ್ಟಿರುವ ಪ್ರೊ.ಭಗವಾನ್‌ಗೆ ಒಳ್ಳೆ ವೈದ್ಯರಿಂದ ಚಿಕಿತ್ಸೆ ಕೊಡಿಸಬೇಕು ಎಂದು ಬಸವೇಗೌಡರು ಕಿಡಿಕಾರಿದರು.

ಪ್ರೊ. ಭಗವಾನ್ ಬಹಿಷ್ಕರಿಸಬೇಕು

ಮೈಸೂರು ನಗರ ಸಾಹಿತ್ಯ, ಸಂಸ್ಕೃತಿಗೆ ಹೆಸರಾದ ಊರು. ಮುಂದಿನ ದಿನಗಳಲ್ಲಿ ಪ್ರೊ.ಭಗವಾನ್ ಅವರನ್ನು ಯಾವುದೇ ಕಾರ್ಯಕ್ರಮಕ್ಕೂ ಯಾರೂ ಆಹ್ವಾನಿಸದೆ ಬಹಿಷ್ಕರಿಸಬೇಕು. ನಮ್ಮ ಎಚ್ಚರಿಕೆ ಮೀರಿ ಆಹ್ವಾನ ನೀಡಿದರೆ ಅಂತಹ ಸಂಘಟನೆ ವಿರುದ್ಧ ಕೂಡ ಪ್ರತಿಭಟನೆ ನಡೆಸುತ್ತೇವೆ ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಜಿ.ಗಂಗಾಧರ್ ಎಚ್ಚರಿಕೆ ನೀಡಿದ್ದಾರೆ.



ಬಿಜೆಪಿ ಮುಖಂಡ ಕವೀಶ್‌ಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆ 'ನಮ್ಮೂರು ನಮ್ಮೋರು' ಸಮಾಜ ಸೇವಾ ಟ್ರಸ್ಟ್‌ನಿಂದ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಉಪಾಧ್ಯಕ್ಷ ಕುಮಾರ್‌ಗೌಡ, ಅಭಿಗೌಡ, ನಂದನ್ ಇದ್ದರು.

ದಸರಾ ವಸ್ತುಪ್ರದರ್ಶನಕ್ಕೆ ಕ್ಷಣಗಣನೆ: 10ಕ್ಕೂ ಹೆಚ್ಚು ಸರ್ಕಾರಿ ಮಳಿಗೆ ಸಜ್ಜು

ದಸರಾ ವಸ್ತುಪ್ರದರ್ಶನಕ್ಕೆ ಈ ವರ್ಷ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಫುಡ್ ಕೋರ್ಟ್, ವಾಣಿಜ್ಯ ಮಳಿಗೆಗಳು, ಅಮ್ಯೂಸ್ಮೆಂಟ್ ಪಾರ್ಕ್ ಜೊತೆಗೆ ಸರ್ಕಾರಿ ಮಳಿಗೆಗಳು ವಿಶೇಷ ಆಕರ್ಷಣೆಯಾಗಿವೆ. 90 ದಿನಗಳ ವಸ್ತುಪ್ರದರ್ಶನ ಹಲವು ವಿಶೇಷತೆಗಳಿಂದ ಕೂಡಿದ್ದು, ಪ್ರವಾಸಿಗರನ್ನು ಸ್ವಾಗತಿಸುತ್ತಿದೆ.

–ರಾಜೇಶ್ ಜಿ.ಗೌಡ, ಸಿಇಓ, ವಸ್ತು ಪ್ರದರ್ಶನ ಪ್ರಾಧಿಕಾರ

ಮೈಸೂರು, ಅ.14(ಎಂಕೆ)– ದಸರಾ ವಸ್ತುಪ್ರದರ್ಶನ ಉದ್ಘಾಟನೆಯಾದರೂ ಸರ್ಕಾರಿ ಮಳಿಗೆಗಳ ಉದ್ಘಾಟನೆಗೆ ತಿಂಗಳುಗಟ್ಟಲೇ ಕಾಯಬೇಕಾಗಿತ್ತು. ಆದರೆ ಈ ಬಾರಿ 10ಕ್ಕೂ ಹೆಚ್ಚು ಮಳಿಗೆಗಳು ಉದ್ಘಾಟನೆಗೆ ಸಿದ್ಧವಾಗಿವೆ.

ಈ ಹಿಂದಿನ ವರ್ಷಗಳಲ್ಲಿ ವಸ್ತು ಪ್ರದರ್ಶನ ಉದ್ಘಾಟನೆ ದಿನ ಒಂದು ಅಥವಾ ಎರಡು ಮಳಿಗೆ ಮಾತ್ರ ಉದ್ಘಾಟನೆ ಯಾಗುವುದು ಪರಿಪಾಠ ವಾಗಿತ್ತು. ಪ್ರವಾಸೋದ್ಯಮ ಇಲಾಖೆಯಿಂದ ಬೇಲೂರು ದೇವಸ್ಥಾನ ಮಾದರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಿಳಾ ಅಭಿವೃದ್ಧಿ ನಿಗಮ, ಖಾದಿ ಗ್ರಾಮೋದ್ಯೋಗ ಮೈಸೂರು ಹಾಗೂ ಮಂಡ್ಯ, ಚೆಸ್ಕಾಂ, ಜಿಲ್ಲಾ ಕೈಗಾರಿಕಾ ಕೇಂದ್ರ ಸೇರಿದಂತೆ 10ಕ್ಕೂ ಹೆಚ್ಚು ಮಳಿಗೆಗಳು ಉದ್ಘಾಟನೆ ಹಂತದಲ್ಲಿವೆ.



ವಾರದಲ್ಲಿ ಬಹುತೇಕ ಪೂರ್ಣ: ವಸ್ತು ಪ್ರದರ್ಶನದಲ್ಲಿ 36 ಸರ್ಕಾರಿ ಮಳಿಗೆಗಳಿದ್ದು, ಈಗಾಗಲೇ 10ಕ್ಕೂ ಹೆಚ್ಚು ಮಳಿಗೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಸುಮಾರು 15 ಮಳಿಗೆಗಳ ನಿರ್ಮಾಣ ಬಹುತೇಕ ಮುಕ್ತಾಯದ ಹಂತದಲ್ಲಿದ್ದು, ಒಂದು ವಾರದ ಅವಧಿಯಲ್ಲಿ ಬಹುತೇಕ ಎಲ್ಲಾ ಸರ್ಕಾರಿ ಮಳಿಗೆಗಳು ಪ್ರವಾಸಿಗರಿಗೆ ತೆರೆದಿರಲಿವೆ ಎಂದು ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಜಿ.ಗೌಡ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಸೆಲ್ಫಿ ಸ್ಪಾಟ್: ದಸರಾ ವಸ್ತು ಪ್ರದರ್ಶನದ ಎದುರು 'I LOVE MYSURU DASARA EXPO'(ಐ ಲವ್ ಮೈಸೂರು ದಸರಾ ವಸ್ತುಪ್ರದರ್ಶನ್ ಸೆಲ್ಫಿ ಸ್ಪಾಟ್ ಅನ್ನು ಸುಮಾರು 4 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವ ಪ್ರವಾಸಿಗರ ವಿಶೇಷ ಆಕರ್ಷಣೆ ಈ ಸೆಲ್ಫಿ ಸ್ಪಾಟ್ ಆಗಿರಲಿದೆ. ಮೈಸೂರು ರೈಲ್ವೆ ನಿಲ್ದಾಣ ಹಾಗೂ ಯಾದವಗಿರಿಯಲ್ಲಿ ಆಕಾಶವಾಣಿ ಬಳಿ ಪಾಲಿಕೆ ವಲಯ ಕಚೇರಿ ಮುಂದಿರುವ ಸೆಲ್ಫಿ ಸ್ಪಾಟ್‌ನಂತೆಯೇ ಸೆಲ್ಫಿ ಪ್ರಿಯರನ್ನು ಸೆಳೆಯಲಿದೆ ಎಂದು ತಿಳಿಸಿದರು.

ಲಗೇಜ್ ರೂಂ: ಹಲವು ಆಕರ್ಷಣೆಗಳಿಂದ ಕೂಡಿರುವ ವಸ್ತುಪ್ರದರ್ಶನಕ್ಕೆ ಈ ವರ್ಷ ಅಪಾರ ಪ್ರವಾಸಿಗರು ಆಗಮಿಸುವ ನಿಟ್ಟಿನಲ್ಲಿ ಮೊದಲ ಬಾರಿಗೆ ಲಗೇಜ್ ರೂಂ ವ್ಯವಸ್ಥೆ ಮಾಡಲಾಗಿದೆ ಶಕ್ತಿ ಯೋಜನೆ ಹಿನ್ನೆಲೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಾಧ್ಯತೆಯಿಂದಾಗಿ ಸುಮಾರು 1000ಕ್ಕೂ ಹೆಚ್ಚು ಬ್ಯಾಗ್‌ಗಳನ್ನಿಡಲು ಲಗೇಜ್ ರೂಂನಲ್ಲಿ ಸ್ಥಳಾವಕಾಶ ಮಾಡಿಕೊಡ ಲಾಗಿದೆ ಎಂದು ಹೇಳಿದರು.

ಸೈಕಲ್ ಪ್ಯೂರ್ ಅಗರ್‌ಬತ್ತಿಗೆ ದಸರಾ ಪ್ಲಾಟಿನಂ ಪ್ರಾಯೋಜಕತ್ವ



ಮೈಸೂರು,ಅ.14–ಮೈಸೂರಿನ ಸೈಕಲ್ ಪ್ಯೂರ್ ಅಗರ್‌ಬತ್ತಿ ಸಂಸ್ಥೆಯು ಈ ಬಾರಿಯ ದಸರಾ ಪ್ಲಾಟಿನಂ ಪ್ರಾಯೋಜಕತ್ವವನ್ನು ಪಡೆದಿದ್ದು, ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಮತ್ತು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ನೂತನ ಲೋಗೋ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಸೈಕಲ್ ಪ್ಯೂರ್ ಅಗರ್‌ಬತ್ತಿಯಂತಹ ಸ್ವದೇಶಿ ಬ್ರಾಂಡ್‌ನೊಂದಿಗಿನ ಈ ಸಹಯೋಗ ತಮಗೆ ಆನಂದವನ್ನುಂಟು ಮಾಡಿದ್ದು, ತನ್ನ ಪರಂಪರೆಗೆ ಹೆಸರುವಾಸಿಯಾಗಿರುವ ಈ ಬ್ರಾಂಡ್ ಈ ವರ್ಷ ಎಂದೂ ಮರೆಯಲಾಗದ ಉತ್ಸವವನ್ನು ಸೃಷ್ಟಿಸಲು ಮುಂದಾಗಿದೆ. ಈ ಪಾಲುಗಾರಿಕೆಯು ಸ್ಥಳೀಯ ವ್ಯವಹಾರಗಳು ನಮ್ಮ ಸಮುದಾಯದಲ್ಲಿ ಶಾಶ್ವತವಾದ ಪ್ರಭಾವ ಬೀರಲು ಮತ್ತು ನಿವಾಸಿಗಳ ಜೀವನಕ್ಕೆ ಸಂತೋಷ ತರುವಂತಹ ಸಾಮರ್ಥ್ಯವನ್ನು ನಿರ್ದೇಶಿಸುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಸೈಕಲ್ ಪ್ಯೂರ್ ಅಗರ್‌ಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಮಾತನಾಡಿ, ಕಳೆದ 75 ವರ್ಷಗಳಿಂದ ಮೈಸೂರಿನ ಪರಿಮಳವನ್ನು ಜಗತ್ತಿನಾದ್ಯಂತ ಕೊಂಡೊಯ್ಯುತ್ತಿದ್ದೇವೆ. ಇದೀಗ ಜಗತ್ತಿಗೆ ಮೈಸೂರಿನ ಸಂಸ್ಕೃತಿಯ ಅನುಭವವನ್ನು ನೀಡಲು ಅವಕಾಶ ದೊರೆತಿರುವುದು ನಮಗೆ ಗೌರವ ತಂದಿದೆ. ಸೈಕಲ್ ಪ್ಯೂರ್ ಅಗರ್‌ಬತ್ತಿಯು ರಾಜನಗರದ ಸಾಂಸ್ಕೃತಿಕ ಮತ್ತು ಇತಿಹಾಸದ ಭಾಗವಾಗಲು ಹೆಮ್ಮೆಪಡುತ್ತಿದೆ. ದಸರಾ ಆಚರಣೆಯನ್ನು ಸ್ಮರಣೀಯ ಮತ್ತು ಭವ್ಯವಾಗಿಸಲು ಸರ್ಕಾರದೊಂದಿಗೆ ಕೆಲಸ ಮಾಡುವ ಅವಕಾಶಕ್ಕಾಗಿ ಕೃತಜ್ಞರಾಗಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ ಸಿ.ಎನ್. ಮಂಜೇಗೌಡ, ಮೇಯರ್ ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಎನ್.ಆರ್.ಕ್ಷೇತ್ರದಲ್ಲಿ ಪ್ಲಾಸ್ಟಿಕ್ ಮಾರಾಟವಿದ್ದರೂ ಅಧಿಕಾರಿಗಳ ಮೌನವೇಕೆ...?

ಮೈಸೂರು,14(ಬಿಎಲ್‌ಯು)– ಮೈಸೂರಿನ ಎನ್.ಆರ್.ಮೊಹಲ್ಲಾ, ಮಂಡಿ ಮೊಹಲ್ಲಾ, ಮೀನಾ ಬಜಾರ್ ಸೇರಿದಂತೆ ಹಲವೆಡೆ ಪ್ಲಾಸ್ಟಿಕ್ ಮಾರಾಟ ಮಾಡುತ್ತಿದ್ದರೂ ಮೂಕ ಪ್ರೇಕ್ಷಕರಾಗಿರುವ ನಗರ ಪಾಲಿಕೆ ಅಧಿಕಾರಿಗಳು, ಬಿಜೆಪಿಗೆ ಹೆಚ್ಚು ಮತ ಹಾಕಿರುವ ಕಡೆ ದಾಳಿ ಮಾಡುತ್ತಿದ್ದಾರೆ ಎಂದು ಮಾಜಿ ಶಾಸಕ ಎಲ್. ನಾಗೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಶಿವರಾಂಪೇಟೆಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದ

ಮಾಜಿ ಶಾಸಕ ನಾಗೇಂದ್ರರ ಪ್ರಶ್ನೆ

ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ಪ್ಲಾಸ್ಟಿಕ್ ನಿಷೇಧದ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ಇದೇ ವಿಚಾರ ಮುಂದಿಟ್ಟುಕೊಂಡು ಕೆಲವು ಉದ್ಯಮಿಗಳನ್ನು ಟಾರ್ಗೆಟ್ ಮಾಡುತ್ತಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಸಂಘದ ಅಧ್ಯಕ್ಷರೂ ಆದ ಮಾಜಿ ಪಾಲಿಕೆ ಸದಸ್ಯ ಪ್ರಶಾಂತ್‌ಗೌಡ, ಮೈಸೂರು ದಸರಾಗೆ ರಾಜವಂಶಸ್ಥರನ್ನು ಆಹ್ವಾನಿಸುವಾಗ ಪ್ಲಾಸ್ಟಿಕ್ ಹಣ್ಣಿನ ಬುಟ್ಟಿ ನೀಡಿದ್ದಾರೆ. ಮೊದಲು ಇವರು ಕಾನೂನು ಪಾಲನೆ ಮಾಡಲಿ. ಅದು ಬಿಟ್ಟು ಜನರ ಮೇಲೆ ಒತ್ತಡ ಹೇರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರಲ್ಲದೆ, ಅಧಿಕಾರಿಗಳು ವಿನಾಕಾರಣ ತೊಂದರೆ ಕೊಟ್ಟರೆ ಸಹಿಸುವುದಿಲ್ಲ ಎಂದು ಎಚ್ಚರಿಸಿದರು. ಮಾಜಿ ಮೇಯರ್ ಎಂ.ಜೆ. ರವಿಕುಮಾರ್, ನಗರ ಪಾಲಿಕೆ ಸದಸ್ಯ ಪ್ರಮೀಳಾ ಭರತ್ ಸೇರಿದಂತೆ ಹಲವರು ಸಭೆಯಲ್ಲಿ ಉಪಸ್ಥಿತರಿದ್ದರು.



ಮಹಾಲಯ ಅಮಾವಾಸ್ಯೆ ದಿನವಾದ ಶನಿವಾರ ವೀರನಗೆರೆಯಲ್ಲಿ ವೀರಗಲ್ಲುಗಳ ಸ್ಮರಣೆ ಹಾಗೂ ಪಾಳೆಯಗಾರ ಕಾರ್ಗಳ್ಳಿ ಮಾರನಾಯಕರ ಮಹೋತ್ಸವ ಕಾರ್ಯಕ್ರಮ ನಡೆಯಿತು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ವೀರನಗೆರೆಯ ಮಹದೇವಮ್ಮ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ದೇವರಾಜು, ಮುಖಂಡರಾದ ಸ್ವಾಮಿ, ಶ್ರೀನಿವಾಸ್, ದೇವಪ್ಪನಾಯಕ, ಭಾಸ್ಕರ, ಶಿವಕುಮಾರ್, ಅರ್ಜುನ್, ಮಹದೇವ, ಶಿವರಾಮ್ ಮತ್ತಿತರರಿದ್ದರು.

ಇಂದು ಮುಖ್ಯಮಂತ್ರಿಗಳಿಂದ ದಸರಾ ನಾಡಕುಸ್ತಿ ಪಂದ್ಯಾವಳಿ ಉದ್ಘಾಟನೆ



ಮೈಸೂರು,ಅ.14(ಎಂಕೆ)–ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲೊಂದಾದ ದಸರಾ ನಾಡಕುಸ್ತಿ ಪಂದ್ಯಾವಳಿಯನ್ನು ನಾಳೆ(ಅ.15) ಸಂಜೆ 4 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ ಎಂದು ಕುಸ್ತಿ ಪಂದ್ಯಾವಳಿ ಉಪಸಮಿತಿ ಉಪ ವಿಶೇಷಾಧಿಕಾರಿ ಡಾ.ಬಿ.ಎನ್.ನಂದಿನಿ ತಿಳಿಸಿದರು.

ದಸರಾ ವಸ್ತುಪ್ರದರ್ಶನದ ಬಳಿ ಇರುವ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಾಡಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಮೊದಲ ದಿನ 30 ಜೋಡಿಗಳು ಸೆಣಸಲಿವೆ. ಮುಖ್ಯಮಂತ್ರಿಗಳ ಜೊತೆಗೆ ಡಿಸಿಎಂ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಸ್ಥಳೀಯ ಶಾಸಕರು, ಸಂಸದರು ಹಾಗೂ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಪ್ರಮುಖ ಆಕರ್ಷಣೆ ಪಂದ್ಯಗಳು: ಕುಸ್ತಿ ಪಂದ್ಯಾವಳಿ ಆರಂಭದಲ್ಲಿ ದಾವಣಗೆರೆ ಪೈಲ್ವಾನ್ ಕಾರ್ತಿಕ್ ಕಾಟೆ ವಿರುದ್ಧ ದೆಹಲಿ ಪೈಲ್ವಾನ್ ವಿಕ್ಕಿ, ಬೆಳಗಾಂ ಪೈಲ್ವಾನ್ ಸುನೀಲ್ ಪಡತಾರೆ ವಿರುದ್ಧ ಹರಿಯಾಣ ಪೈಲ್ವಾನ್ ರಾಹುಲ್ ರಾಟಿ ಹಾಗೂ ಬಾಲಕಿಯರ ವಿಭಾಗದಲ್ಲಿ ಬನ್ನೂರಿನ ಪೈಲ್ವಾನ್ ಜಾಹ್ನವಿ ವಿರುದ್ಧ ಮಂಡ್ಯದ ಪೈಲ್ವಾನ್ ಸ್ಫೂರ್ತಿ, ರಮ್ಮನಹಳ್ಳಿ ಪೈಲ್ವಾನ್ ಸಿಂಚನ ವಿರುದ್ಧ ಮಂಡ್ಯದ ಪೈಲ್ವಾನ್ ಅಮೂಲ್ಯ ಸೆಣಸಲಿದ್ದಾರೆ.

ದಸರಾ ಕಿಶೋರ: 57ರಿಂದ 65 ಕೆ.ಜಿ ವಿಭಾಗದ ದಸರಾ ಕಿಶೋರ ವಿಜೇತರಿಗೆ ಪ್ರಥಮ ಬಹುಮಾನ ಅರ್ಧ ಕೆ.ಜಿ ಬೆಳ್ಳಿ ಗದೆ ಹಾಗೂ 10 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ದ್ವಿತೀಯ ಬಹುಮಾನ 8 ಸಾವಿರ ರೂ., ತೃತೀಯ ಬಹುಮಾನ (ಇಬ್ಬರಿಗೆ) ಒಬ್ಬರಿಗೆ 5,500 ರೂ, ಮತ್ತೊಬ್ಬರಿಗೆ 5 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು.

ದಸರಾ ಕೇಸರಿ: 74ರಿಂದ 86 ಕೆ.ಜಿ ವಿಭಾಗದ ದಸರಾ ಕೇಸರಿ ವಿಜೇತರಿಗೆ ಪ್ರಥಮ ಬಹುಮಾನ 1 ಕೆ.ಜಿ ಬೆಳ್ಳಿ ಗದೆ ಹಾಗೂ 12,500 ರೂ., ನಗದು ಬಹುಮಾನ ನೀಡಲಾಗುವುದು. ದ್ವಿತೀಯ ಬಹುಮಾನ 10,500 ರೂ., ತೃತೀಯ ಬಹುಮಾನ ಒಬ್ಬರಿಗೆ 8 ಸಾವಿರ ರೂ. ಹಾಗೂ ಮತ್ತೊಬ್ಬರಿಗೆ 7,500 ರೂ., ನಗದು ಬಹುಮಾನ ನೀಡಲಾಗುವುದು.

ದಸರಾ ಕಂಠೀರವ: 86 ಕೆ.ಜಿಗಿಂತಲೂ ಮೇಲ್ಪಟ್ಟ ವಿಭಾಗದ ದಸರಾ ಕಂಠೀರವ ವಿಜೇತರಿಗೆ ಪ್ರಥಮ ಬಹುಮಾನ ಒಂದು ಕಾಲು ಕೆ.ಜಿ ಬೆಳ್ಳಿ ಗದೆ ಹಾಗೂ 15,000 ರೂ. ನಗದು ಬಹುಮಾನ ನೀಡಲಾಗುವುದು. ದ್ವಿತೀಯ ಬಹುಮಾನ 12,500 ರೂ., ತೃತೀಯ ಬಹುಮಾನ ಒಬ್ಬರಿಗೆ 10,500 ರೂ. ಹಾಗೂ ಮತ್ತೊಬ್ಬರಿಗೆ 10,000 ರೂ. ನಗದು ಬಹುಮಾನ ನೀಡಲಾಗುವುದು.

ದಸರಾ ಕಿಶೋರಿ: 57ರಿಂದ 62 ಕೆ.ಜಿ ವಿಭಾಗದ ದಸರಾ ಕಿಶೋರಿ ವಿಜೇತರಿಗೆ ಪ್ರಥಮ ಬಹುಮಾನ ಅರ್ಧ ಕೆ.ಜಿ ಬೆಳ್ಳಿ ಗದೆ ಹಾಗೂ 10,000 ರೂ., ನಗದು ಬಹುಮಾನ ನೀಡಲಾಗುವುದು. ದ್ವಿತೀಯ ಬಹುಮಾನ 8,000 ರೂ., ತೃತೀಯ ಬಹುಮಾನ ಒಬ್ಬರಿಗೆ 5,500 ರೂ. ಹಾಗೂ ಮತ್ತೊಬ್ಬರಿಗೆ 5,000 ರೂ., ನಗದು ಬಹುಮಾನ ನೀಡಲಾಗುವುದು.


ಮೈಸೂರು ದಸರಾ ಕುಮಾರ್: ಮೈಸೂರು ವಿಭಾಗ ಮಟ್ಟದ(74 ಕೆ.ಜಿ ಮೇಲ್ಪಟ್ಟು) ಮೈಸೂರು ದಸರಾ ಕುಮಾರ್ ವಿಜೇತರಿಗೆ ಮುಕ್ಕಾಲು ಕೆ.ಜಿ ಬೆಳ್ಳಿ ಗದೆ ಮತ್ತು 10,000 ರೂ. ನಗದು, ದ್ವಿತೀಯ ಬಹುಮಾನ 8,000 ರೂ. ತೃತೀಯ ಬಹುಮಾನ ಒಬ್ಬರಿಗೆ 5,500 ರೂ. ಹಾಗೂ ಮತ್ತೊಬ್ಬರಿಗೆ 5,000 ರೂ., ನಗದು ಬಹುಮಾನ ನೀಡಲಾಗುವುದು ಎಂದರು. ಇದೇ ವೇಳೆ ಮೊದಲ ದಿನ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆ ಮಾಡಲಾಯಿತು. ದಸರಾ ಕುಸ್ತಿ ಉಪ ಸಮಿತಿ ಅಧ್ಯಕ್ಷ ಶಂಕರ್, ಉಪಾಧ್ಯಕ್ಷರಾದ ಕಷ್ಣ, ನಾಗರಾಜ್, ಪ್ರವೇಶ್ ಮತ್ತು ಪ್ರಸನ್ನ ಉಪಸ್ಥಿತರಿದ್ದರು.



ನಾಡಿನ ಸಮಸ್ತ ಜನತೆಗೆ ನಾಡಹಬ್ಬ

ದಸರಾ

ಹಬ್ಬದ ಶುಭಾಶಯಗಳು



ಪ್ರೊ ಭಾಷ್ಯಂ ಸ್ವಾಮೀಜಿ
ಸಂಸ್ಥಾಪಕರು, ಶ್ರೀ ಯೋಗ ನರಸಿಂಹ ಸ್ವಾಮಿ ದೇವಸ್ಥಾನ

ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆಯು ಜನಸಾಮಾನ್ಯರ ಕೈಗೆ ಎಟುಕುವ ದರದಲ್ಲಿ ದೊರೆಯುತ್ತದೆ ಮತ್ತು ಮತ್ತು ಆಸ್ಪತ್ರೆಗೆ ಬರುವ ರೋಗಿಗಳು ಶೀಘ್ರ ಗುಣಮುಖರಾಗುತ್ತಾರೆ.





ಬಡ ಕೃಷಿ ಕುಟುಂಬದಿಂದ ಬಂದ
ಕೆ.ಬಿ.ಕುಮಾರ್ ಅವರ ನಿಸ್ವಾರ್ಥ ಸೇವೆ

ಬಡರೋಗಿಗಳಿಗೆ ಸಂಜೀವಿನಿ
ನಯನಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಆಸ್ಪತ್ರೆಯಲ್ಲಿನ ಸೌಲಭ್ಯಗಳು

- General Medicine
- Trauma & Emergency Care
- Cardilogy
- Medical Gastroenterolgy
- Surgical Gastroenterolgy
- General Surgery & ENT
- Obstetrics and Gynecology
- Ophthalmology
- Pediatrics
- Plastic Surgery
- Thoracic Surgery
- Urology
- Physiotherapy
- Oncology
- Nephrology
- Neurology
- Dermatology
- Anesthesiology
- Radiology -X-Ray & CT
- Laboratory
- Skin disease STD and Venereal disease

FACILITY

24 x 7 Trauma and Emergency Day Care Services | 24 x 7 Pharmacy
24 x 7 Laboratory | 24 x 7 Radiology CT Scan | Computerized Radiography System
Ultrasound | Doppler Studies | 2D Echo | Corporate and family health packages
SICU | HDU | NICU | MICU State of the art Modular Operation Theaters
Advanced CSSD | Major TPA Empanelments Dialysis Centre | Endoscopy
Colonoscopy | Nutrition and Dietetics Round the clock Patient Support Department

ಸಾರ್ವಜನಿಕರಿಗೆ, ಮಧ್ಯಮ ವರ್ಗದವರಿಗೆ ಸೇರಿದಂತೆ ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸೇವೆ ದೊರಕಬೇಕೆಂಬ ಸೇವಾ ಮನೋಭಾವದಿಂದ ಆಸ್ಪತ್ರೆಯನ್ನು ಪ್ರಾರಂಭಿಸಿದ್ದೇನೆ. ಯಾವುದೇ ಲಾಭದ ಆಕಾಂಕ್ಷೆ ಇಲ್ಲದೆ ನಡೆಯುತ್ತಿದೆ. ಒಂದು ವರ್ಷದ ಯಶಸ್ಸಿಗೆ ಶ್ರಮಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತಿದ್ದೇನೆ. ನಮ್ಮ ಆಸ್ಪತ್ರೆಯಲ್ಲಿ ಕಡಿಮೆ ದರದಲ್ಲಿ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಸೌಲಭ್ಯ ಇರುವುದರಿಂದ ಸಾರ್ವಜನಿಕರು ಬಳಸಿಕೊಳ್ಳಬೇಕು. ಸಾರ್ವಜನಿಕರಿಗಾಗಿಯೇ ನಿರ್ಮಿಸಿರುವ ಆಸ್ಪತ್ರೆಯು ಸದಾ ಅಶಕ್ತ ಜನರಿಗೆ ಚಿಕಿತ್ಸೆ ಸಿಗುವಂತೆ ನಡೆಸುತ್ತಿದ್ದೇವೆ. ಸಾರ್ವಜನಿಕರು ಇದರ ಪ್ರಯೋಜನ ಪಡೆಯಬೇಕು.

– ಕೆ.ಬಿ.ಕುಮಾರ್, ಆಸ್ಪತ್ರೆ ಛೇರ್ಮನ್

ಚಿಕಿತ್ಸಾ ಸೇವೆಯಲ್ಲಿ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಸೌಲಭ್ಯ, ಇಎಸ್‌ಐ ಸೌಲಭ್ಯ ಹಾಗೂ ಎಲ್ಲಾ ರೀತಿಯ ಸರ್ಕಾರಿ ಮತ್ತು ಖಾಸಗಿ ವಿಮೆ ಸೌಲಭ್ಯಗಳು ದೊರೆಯುತ್ತವೆ. ನಮ್ಮಲ್ಲಿ 900ಕ್ಕೂ ಹೆಚ್ಚು ಯಶಸ್ವಿ ಶಸ್ತ್ರ ಚಿಕಿತ್ಸೆಗಳು ಜರುಗಿದ್ದು, ರೋಗಿಗಳು ಸಂಪೂರ್ಣ ಗುಣಮುಖರಾಗಿದ್ದಾರೆ. ಉನ್ನತ ಗುಣಮಟ್ಟದ ಚಿಕಿತ್ಸೆಯು ಅತೀ ಕಡಿಮೆ ಬೆಲೆಯಲ್ಲಿ ಜನಸಾಮಾನ್ಯರ ಕೈಗೆಟುಕುವ ದರದಲ್ಲಿ ನೀಡಲಾಗುತ್ತಿದೆ. ಇದಲ್ಲದೆ ನುರಿತ ವೈದ್ಯಕೀಯ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಜೊತೆಗೆ ಸುಸಜ್ಜಿತ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಹೊಂದಿದ್ದು, ಯಾವುದೇ ದುಬಾರಿ ಚಿಕಿತ್ಸೆಗಳು ಕಡಿಮೆ ದರದಲ್ಲಿ ಒದಗಿಸುತ್ತಿರುವುದರಿಂದ ಅನೇಕರು ಈ ಸದುಪಯೋಗವನ್ನು ಈಗಾಗಲೇ ಪಡೆದುಕೊಂಡಿದ್ದಾರೆ.

ಮೈಸೂರು ಮಿತ್ರ

ಭಾರತಕ್ಕೆ ಹ್ಯಾಟ್ರಿಕ್ ಗೆಲುವು, ಅಂಕಪಟ್ಟಿಯಲ್ಲಿ ಅಗ್ರಸ್ಥಾನ

ಭಾರತದ ಬೌಲಿಂಗ್ ದಾಳಿಗೆ ತತ್ತರಿಸಿದ ಪಾಕ್‌ಗೆ ಸೋಲು



ಅಹಮದಾಬಾದ್, ಅ. 14– ಜಸ್ಪ್ರೀತ್ ಬೂಮ್ರಾ, ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜಾ ಅವರುಗಳ ಉತ್ತಮ ಬೌಲಿಂಗ್, ನಾಯಕ ರೋಹಿತ್ ಶರ್ಮ ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಭಾರತ ತನ್ನ ಸಾಂಪ್ರದಾಯಿಕ ಎದುರಾಳಿ ಪಾಕ್ ತಂಡವನ್ನು ಮತ್ತೊಮ್ಮೆ ಸೋಲಿಸುವ ಮೂಲಕ ವಿಶ್ವಕಪ್‌ನಲ್ಲಿ ಸತತ 3ನೇ ಗೆಲುವು ಸಾಧಿಸಿದೆ.

ಇಂದಿನ ಗೆಲುವಿನೊಂದಿಗೆ ಭಾರತ ಪಾಕಿಸ್ತಾನದ ವಿರುದ್ಧ ವಿಶ್ವಕಪ್‌ನಲ್ಲಿ 8ನೇ ಬಾರಿ ಗೆಲುವು ಸಾಧಿಸುವ ಮೂಲಕ ದಾಖಲೆ ನಿರ್ಮಿಸಿದೆ. ಇದರೊಂದಿಗೆ ಭಾರತ ವಿಶ್ವಕಪ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದರೆ, ನ್ಯೂಜಿಲ್ಯಾಂಡ್ 2ನೇ, ದಕ್ಷಿಣ ಆಫ್ರಿಕಾ 3ನೇ ಹಾಗೂ ಪಾಕಿಸ್ತಾನ 4ನೇ ಸ್ಥಾನಕ್ಕೇರಿದೆ.

ಪಾಕಿಸ್ತಾನ ನೀಡಿದ 192 ರನ್ನುಗಳ ಸಾಧಾರಣ ಮೊತ್ತವನ್ನು ಬೆನ್ನಟ್ಟಿದ ಭಾರತ 30.3 ಓವರುಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಭರ್ಜರಿ ಗೆಲುವು ಸಾಧಿಸಿತು. ಈ ಪಂದ್ಯದಲ್ಲಿ ನಾಯಕ ರೋಹಿತ್ ಶರ್ಮಾ ಭರ್ಜರಿ ಬ್ಯಾಟಿಂಗ್ ಮಾಡುವ ಮೂಲಕ ಪಂದ್ಯದ ಗೆಲುವಿನ ಪ್ರಮುಖ ರುವಾರಿಯಾದರು.

ಪಾಕ್ ನೀಡಿದ ಸುಲಭ ಗುರಿ ಬೆನ್ನಟ್ಟಿದ ಭಾರತಕ್ಕೆ ಆರಂಭದಲ್ಲಿ ಕೊಂಚ ಹಿನ್ನಡೆಯಾದರೂ ರೋಹಿತ್ ಅಬ್ಬರದ ಮುಂದೆ ಯಾವುದೂ ಲೆಕ್ಕಕ್ಕೆ ಬಾರದಂತಾಯಿತು. ಡೆಂಗ್ಯೂ ಜ್ವರದ ಬಳಿಕ ಚೇತರಿಸಿಕೊಂಡು ಕಣಕ್ಕಿಳಿದ ಶುಭ್‌ಮನ್ ಗಿಲ್ 16 ರನ್ ಮತ್ತು ವಿರಾಟ್ ಕೊಹ್ಲಿ 16 ರನ್ ಗಳಿಸಿದರು. ಆದರೆ ಒಂದೆಡೆ ರೋಹಿತ್ ಶರ್ಮಾ ಅಬ್ಬರಿಸುವ ಮೂಲಕ ಭಾರತದ ಗೆಲುವನ್ನು ಖಚಿತಪಡಿಸಿದರು. ಅಂತಿಮವಾಗಿ ಹಿಟ್‌ಮ್ಯಾನ್ ರೋಹಿತ್ 63 ಎಸೆತದಲ್ಲಿ 6 ಸಿಕ್ಸ್ ಮತ್ತು 6 ಬೌಂಡರಿ ಮೂಲಕ 86 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಶ್ರೇಯಸ್ ಅಯ್ಯರ್ ಸಹ 53 ರನ್ ಗಳ ಮೂಲಕ ಅರ್ಧಶತಕ ಸಿಡಿಸಿದರೆ, ಕೆಎಲ್ ರಾಹುಲ್ 19 ರನ್ ಗಳಿಸಿದರು.

ಬೌಲಿಂಗ್ ಅಬ್ಬರಿಸಿದ ಭಾರತೀಯರು: ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡ ಪಾಕ್ ವಿರುದ್ಧ ಭರ್ಜರಿ ಬೌಲಿಂಗ್ ದಾಳಿ ನಡೆಸುವ ಮೂಲಕ ಪಾಕ್ ಆಟಗಾರರನ್ನು ಕಟ್ಟಿ ಹಾಕಿತು. ಈ ವೇಳೆ ಭಾರತದ ಪರ ಕುಲ್‌ದೀಪ್ ಯಾದವ್ 10 ಓವರ್‌ಗೆ 35 ರನ್ ನೀಡಿ 2 ವಿಕೆಟ್, ಜಸ್ಪ್ರೀತ್ ಬುಮ್ರಾ 2 ವಿಕೆಟ್, ಮೊಹಮ್ಮದ್ ಸಿರಾಜ್ 2 ವಿಕೆಟ್, ಹಾರ್ದಿಕ್ ಪಾಂಡ್ಯ 2 ವಿಕೆಟ್ ಮತ್ತು ರವೀಂದ್ರ ಜಡೇಜಾ 2 ವಿಕೆಟ್ ಪಡೆದು ಪಾಕ್ ಕುಸಿತಕ್ಕೆ ಕಾರಣರಾದರು.

ಬ್ಯಾಟಿಂಗ್‌ನಲ್ಲಿ ಎಡವಿದ ಪಾಕ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡವು ಭಾರತೀಯ ಬೌಲರ್‌ಗಳ ದಾಳಿಗೆ ತತ್ತರಿಸಿ ಹೋಯಿತು. ಪಾಕ್ ಮೊದಲ 10 ಓವರ್‌ನಲ್ಲಿ ಅಬ್ಬರಿಸುವ ಸೂಚನೆ ನೀಡಿತು. ಆದರೆ ಮೊಹಮ್ಮದ್ ಸಿರಾಜ್ ಮೊದಲ ವಿಕೆಟ್ ತೆಗೆಯುವ ಮೂಲಕ ಪಾಕ್‌ಗೆ ಆರಂಭಿಕ ಆಘಾತ ನೀಡಿದರು. ಆದರೂ ಬಾಬರ್ ಮತ್ತು ರಿಜ್ವಾನ್ ಉತ್ತಮ ಬ್ಯಾಟಿಂಗ್ ಮಾಡಿದರು. ಆದರೆ ಬಾಬರ್ ವಿಕೆಟ್ ಉರುಳುತ್ತಿದ್ದಂತೆ ಪಾಕ್ ಪೆವಿಲಿಯನ್ ಪೆರೇಡ್ ನಡೆಸಿತು. ಅಂತಿಮವಾಗಿ ಪಾಕಿಸ್ತಾನ ತಂಡದ ಪರ ಅಬ್ದುಲ್ಲಾ ಶಫೀಕ್ 20 ರನ್, ಇಮಾಮ್–ಉಲ್–ಹಕ್ 36 ರನ್, ಬಾಬರ್ ಆ 58 ಎಸೆತದಲ್ಲಿ 7 ಬೌಂಡರಿ ಮೂಲಕ 50 ರನ್ ಮತ್ತು ಮೊಹಮ್ಮದ್ ರಿಜ್ವಾನ್ 49 ರನ್ ಗಳಿಸಿದರು. ಉಳಿದಂತೆ ಸೌದ್ ಶಕೀಲ್ 6 ರನ್, ಇಫ್ತಿಕರ್ ಅಹ್ಮದ್ 4 ರನ್, ಶಾದಾಬ್ ಖಾನ್ 2 ರನ್, ಮೊಹಮ್ಮದ್ ನವಾಝ್ 4 ರನ್ ಮತ್ತು ಹಸನ್ ಅಲಿ 12 ರನ್ ಗಳಿಸಿದರು. ಏಕದಿನ ವಿಶ್ವಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಭಾರತಕ್ಕೆ ಇದು 8ನೇ ಜಯವಾಗಿದೆ. ಇದಕ್ಕೂ ಮುನ್ನ ಭಾರತ 1992, 1996, 1999, 2003, 2011, 2015, 2019ರಲ್ಲಿ ಸಾಂಪ್ರದಾಯಿಕ ಎದುರಾಳಿ ವಿರುದ್ಧ ಜಯ ದಾಖಲಿಸಿತ್ತು.

ಪಾಕ್ ವಿರುದ್ಧ ಭಾರತ ಜಯ ಗಳಿಸುತ್ತಿದ್ದಂತೆ ದೇಶದಾದ್ಯಂತ ಭಾರತೀಯರು ಅಭೂತಪೂರ್ವ ವಿಜಯೋತ್ಸವ ಆಚರಿಸಿದರು. ಎಲ್ಲಿ ನೋಡಿದರೂ ಸಿಹಿ ಹಂಚಿ, ಪಟಾಕಿ ಸಿಡಿಸಿ, ದಾರಿ ದಾರಿಯಲ್ಲಿ ಡ್ಯಾನ್ಸ್ ಮಾಡುತ್ತಿರುವುದು ಕಂಡುಬಂದಿತು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತ; ಒಂದೆಡೆ ಮೂವರು ಸಾವು

ಹಲವು ವಾಹನಗಳು ಜಖಂ



ಮಂಡ್ಯ, ಅ.14– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತ ಸಂಭವಿಸಿ ಮಂಡ್ಯ ಎಸ್ಪಿ ಎನ್. ಯತೀಶ್ ಕಾರು ಸೇರಿದಂತೆ ಹಲವು ಕಾರುಗಳು ಜಖಂಗೊಂಡರೆ, ಒಂದು ಕಾರು ಮಾತ್ರ ಹೊತ್ತಿ ಉರಿದಿದೆ. ಈ ಘಟನೆ ಶ್ರೀರಂಗಪಟ್ಟಣ ತಾಲೂಕಿನ ಟಿ.ಎಂ. ಹೊಸೂರು ಬಳಿ ಸಂಭವಿಸಿದೆ. ಮತ್ತೊಂದೆಡೆ ರಾಮನಗರದ ಕೆಂಪೇಗೌಡನ ದೊಡ್ಡಿ ಬಳಿ ಲಾರಿಗೆ ಮಾರುತಿ ವ್ಯಾನ್ ಡಿಕ್ಕಿ ಹೊಡೆದ ಪರಿಣಾಮ ಮೂವರು ಬಲಿಯಾಗಿದ್ದಾರೆ.

ದಸರಾ ಹಾಗೂ ಸಾಲು ಸಾಲು ರಜೆ ಹಿನ್ನೆಲೆಯಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಇಂದು ವಾಹನ ಸಂಚಾರ ದಟ್ಟಣೆ ಹೆಚ್ಚಾಗಿತ್ತು. ಶನಿವಾರ ಬೆಳಿಗ್ಗೆ 9.30ರ ಸಮಯದಲ್ಲಿ ಬೆಂಗಳೂರಿನಿಂದ ಮೈಸೂರಿನ ಕಡೆಗೆ ತೆರಳುತ್ತಿದ್ದ ಲಾರಿ ಕಾರೊಂದಕ್ಕೆ ಡಿಕ್ಕಿ ಹೊಡೆದ ಪರಿಣಾಮ ಆ ಕಾರು ಮುಂದೆ ಚಲಿಸುತ್ತಿದ್ದ ನಾಲ್ಕೈದು ಕಾರುಗಳಿಗೆ ಅಪ್ಪಳಿಸಿದೆ. ಇದರ ಪರಿಣಾಮ ನಾಲ್ಕೈದು ಕಾರುಗಳು ಜಖಂ ಆಗಿವೆ. ಇದೇ ಅಪಘಾತದಲ್ಲಿ ಕಾರೊಂದಕ್ಕೆ ಬೆಂಕಿ ಹೊತ್ತಿಕೊಂಡು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಈ ಸರಣಿ ಅಪಘಾತದಲ್ಲಿ ಶ್ರೀರಂಗಪಟ್ಟಣ ದಸರಾ ಸಿದ್ಧತೆ ಪರಿಶೀಲಿಸಲು ಮಂಡ್ಯದಿಂದ ಶ್ರೀರಂಗಪಟ್ಟಣದತ್ತ ಹೋಗುತ್ತಿದ್ದ ಮಂಡ್ಯ ಎಸ್ಪಿ ಎನ್. ಯತೀಶ್ ಕಾರು ಸಹ ನಜ್ಜುಗುಜ್ಜಾಗಿದೆ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮನಗರ ವರದಿ: ಲಾರಿಗೆ ಮಾರುತಿ ವ್ಯಾನ್ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಮೂವರು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನ ಕೆಂಪೇಗೌಡನ ದೊಡ್ಡಿ ಗ್ರಾಮದ ಬಳಿ ಶನಿವಾರ ಮುಂಜಾನೆ ಬಲಿಯಾಗಿದ್ದಾರೆ.

ಬೆಂಗಳೂರಿನ ಪೀಣ್ಯ ಮೂಲದ ರಾಜೇಶ್, ಆತನ ಪತ್ನಿ ಉಮಾ ಹಾಗೂ ಮತ್ತೋರ್ವರು ಸ್ಥಳದಲ್ಲೇ ಮೃತಪಟ್ಟಿದ್ದು, ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡು, ರಾಮನಗರ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಪಘಾತದ ಹಿನ್ನೆಲೆಯಲ್ಲಿ ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ಎಕ್ಸ್‌ಪ್ರೆಸ್ ವೇನಲ್ಲಿ ಟ್ರಾಫಿಕ್ ಜಾಮ್ ಆಗಿತ್ತು. ಘಟನೆ ಸಂಬಂಧ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರಾಜಮಾರ್ತಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಚಂದ್ರಮುಖಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಂತಿರಾಂ ಚಾಪ್ಟರ್–1 (ತೆ)	4 ಪ್ರದರ್ಶನಗಳು
ಸಂಗಂ	
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕಂದ (ತೆ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಎಗ್ಸಾರ್‌ಸಿಸ್ಟ್ ಬಿಲಿವರ್ (ಇಂ): ಬೆ.10.50ಕ್ಕೆ, ರಾ.10ಕ್ಕೆ, 800 (ತ): ಮ.1.15ಕ್ಕೆ, ಅಭಿರಾಮಚಂದ್ರ (ಕ): ಸಂ.4.25ಕ್ಕೆ, ದಿ ವ್ಯಾಕ್ಸಿನ್ ವಾರ್ (ಹಿಂ): ಸಂ.6.50ಕ್ಕೆ.
ಸ್ಕ್ರೀನ್ 2	ಕನ್ನೂರ ಸ್ಕ್ವಾಡ್ (ಮ): ಬೆ.10.40ಕ್ಕೆ, ರಥಂ (ತ): ಮ.1.45ಕ್ಕೆ, ರೂಲ್ಸ್ ರಂಜನ್ (ತೆ): ಸಂ.4.10ಕ್ಕೆ, ಮಿಷನ್ ರಾಣಿಗಂಜ್ (ಹಿಂ): ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ರಾಜಮಾರ್ತಾಂಡ (ಕ): ಬೆ.10.55ಕ್ಕೆ, ತೋತಾಪುರಿ 2 (ಕ): ಮ.1.35ಕ್ಕೆ, ಜವಾನ್ (ಹಿಂ): ಸಂ.4.05ಕ್ಕೆ, ಥ್ಯಾಂಕ್ಯೂ ಫಾರ್ ಕಮಿಂಗ್ (ಹಿಂ): ರಾ.7.25ಕ್ಕೆ, ಚಾವರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (ಕ): ಬೆ.10.40ಕ್ಕೆ, ಬಾನ ದಾರಿಯಲ್ಲಿ (ಕ): ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮ್ಯಾಡ್ 2023 (ತೆ): ಸಂ.4.20ಕ್ಕೆ.

INOX LIVE THE MOVIE — ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬಾನ ದಾರಿಯಲ್ಲಿ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45, ರಾ.9ಕ್ಕೆ.
ಸ್ಕ್ರೀನ್ 2	ಪಾವ್ ಪಟ್ರೋಲ್ (ಇಂ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ರಾ.8.15ಕ್ಕೆ, ಮಿಷನ್ ರಾಣಿಗಂಜ್ (ಹಿಂ): ಸಂ.5.15ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.11.55ಕ್ಕೆ, ಪಾವ್ ಪಟ್ರೋಲ್ (ಇಂ): ಮ.3.20ಕ್ಕೆ, ಸಂ.5.40ಕ್ಕೆ, ರಾ.8ಕ್ಕೆ,
ಸ್ಕ್ರೀನ್ 4	ಮಿಷನ್ ರಾಣಿಗಂಜ್ (ಹಿಂ): ಬೆ.11ಕ್ಕೆ, ಮಾರಕಾಸ್ತ್ರ (ಕ): ಮ.3ಕ್ಕೆ, ಅಭಿರಾಮಚಂದ್ರ (ಕ): ಸಂ.6.20ಕ್ಕೆ, ಮ್ಯಾಡ್ (ತೆ): ರಾ.9ಕ್ಕೆ

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

PVR CINEMAS — ಪಿವಿಆರ್ ಸಿನಿಮಾಸ್
ಮೊ.ನಂ: 8951357139


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ದಸರಾ ಉದ್ಘಾಟಕರಾದ ಸಂಗೀತ ನಿರ್ದೇಶಕ ಡಾ.ಹಂಸಲೇಖ

ಸುತ್ತೂರು ಮಠಕ್ಕೆ ಕುಟುಂಬ ಸಮೇತ ಡಾ.ಹಂಸಲೇಖ ಭೇಟಿ



ಮೈಸೂರು, ಅ.14(ಪಿಎಂ)– ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ದಸರಾ ಉದ್ಘಾಟಕರಾದ ಖ್ಯಾತ ಚಿತ್ರ ಸಾಹಿತಿ, ಚಲನಚಿತ್ರ ಸಂಗೀತ ನಿರ್ದೇಶಕ ನಾದಬ್ರಹ್ಮ ಡಾ.ಹಂಸಲೇಖ ಶನಿವಾರ ಮೈಸೂರಿಗೆ ಆಗಮಿಸಿದರು.

ಇಂದು ಸಂಜೆ ಬೆಂಗಳೂರಿನಿಂದ ರಸ್ತೆ ಮೂಲಕ ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಿದರು. ಮೈಸೂರಿನಲ್ಲಿ ವಾಸ್ತವ್ಯ ಹೂಡಿರುವ ಅವರು, ನಾಳೆ (ಅ.15) ದಸರಾ ಉದ್ಘಾಟನಾ ಸಮಾರಂಭದ ಘನ ಉಪಸ್ಥಿತಿ ವಹಿಸಲಿದ್ದಾರೆ. ಬಳಿಕ ದಸರಾದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿರುವ ಅವರು, ಅ.16ರಂದು ನಗರದಲ್ಲಿ ನಾನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಅಂತೆಯೇ ನಂಜನಗೂಡು ತಾಲೂಕು ಸುತ್ತೂರು ಮಠಕ್ಕೆ ಹಂಸಲೇಖ ಅವರು ಕುಟುಂಬ ಸಮೇತ ಇಂದು ಮಧ್ಯಾಹ್ನ ಭೇಟಿ ನೀಡಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಪತ್ನಿ ಲತಾ ಹಂಸಲೇಖ ಮತ್ತು ಕುಟುಂಬದೊಂದಿಗೆ ಮಠದ ಗದ್ದುಗೆಗೆ ತೆರಳಿ ದರ್ಶನ ಪಡೆದ ಹಂಸಲೇಖ, ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಶ್ರೀಗಳ ಆಶೀರ್ವಾದ ಪಡೆದರು. ಇದೇ ವೇಳೆ ಶ್ರೀಗಳ ಸಮ್ಮುಖದಲ್ಲಿ ಲತಾ ಹಂಸಲೇಖ ಅವರು ಗಾಯನ ಸಾದರಪಡಿಸಿದರೆ, ಹಂಸಲೇಖ ಕೀ–ಬೋರ್ಡ್ ನುಡಿಸಿದರು.

'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ, ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ, ಪ್ರಪಂಚಿನ ಡಂಬಿನಲ್ಲಿ ಎನ್ನ ನೊಂದು ರೂಪುಮಾಡಿ ನೀವಿರಿಸಿದಿರಿ ಕೂಡಲ ಸಂಗಮದೇವ...' ಎಂಬ ಬಸವಣ್ಣನವರ ವಚನವನ್ನು ಗಾಯನವಾಗಿ ಹಂಸಲೇಖರ ಪತ್ನಿ ಪ್ರಸ್ತುತಪಡಿಸಿದರು.

ಅಲ್ಲದೆ, 'ಅವನೇ ನನ್ನ ಗಂಡ' ಚಿತ್ರದ 'ಹಸಿರು ಗಾಜಿನ ಬಳೆಗಳೇ... ಸ್ತ್ರೀ ಕುಲದ ಶುಭ ಸ್ವರಗಳೇ...' ಗೀತೆಯನ್ನೂ ಲತಾ ಹಂಸಲೇಖ ಹಾಡಿದರು. ವಿಶೇಷವೆಂದರೆ ಈ ಹಾಡಿನ ಗಾಯಕಿ ಅವರೇ ಆಗಿದ್ದು, ಹಂಸಲೇಖ ಅವರದ್ದೇ ಸಾಹಿತ್ಯ ಸಂಗೀತದಲ್ಲಿ ಈ ಗೀತೆ ಚಿತ್ರದಲ್ಲಿ ಮೂಡಿಬಂದಿದೆ.

ಇದಕ್ಕೂ ಮುನ್ನ ಶ್ರೀ ಮಠದ ವತಿಯಿಂದ ಹಂಸಲೇಖ ಮತ್ತು ಅವರ ಕುಟುಂಬಕ್ಕೆ ಮಂಗಳವಾದ್ಯದೊಂದಿಗೆ ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿಗಳು ಆತ್ಮೀಯ ಸ್ವಾಗತ ಕೋರಿದರು. ಇದೇ ವೇಳೆ ಹಂಸಲೇಖ ಅವರ ಶಿಷ್ಯ ಎಸ್.ರಾಕೇಶ್ ಸಹ ಹಾಜರಿದ್ದರು. ಬಳಿಕ ಮೈಸೂರು ನಗರಕ್ಕೆ ಆಗಮಿಸಿದ ಹಂಸಲೇಖ ಮತ್ತು ಅವರ ಕುಟುಂಬದವರು ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ.

ವಾದ್ಯ ಸಂಗೀತ ತರಬೇತಿ

ಮೈಸೂರು, ಅ. 14– ಮೈಸೂರಿನ ಶಕ್ತಿನಗರದ ಶ್ರೀನಿಕೇತನ ಸಂಗೀತ ಸಂಸ್ಥೆ ವತಿಯಿಂದ ಅ. 16 ರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ಕೀಬೋರ್ಡ್, ಮ್ಯಾಂಡೋಲಿನ್ ಮತ್ತು ಗಿಟಾರ್ ವಾದ್ಯ ಸಂಗೀತ ತರಬೇತಿ ಹಮ್ಮಿಕೊಳ್ಳಲಾಗಿದೆ. ಸಂಗೀತ ತರಬೇತಿ ವಾರದಲ್ಲಿ ಎರಡು ದಿನ ಸಂಜೆ 6 ರಿಂದ 7 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 7892498367 ಸಂಪರ್ಕಿಸಬಹುದು.



ಬೆಂಕಿಗೆ ಮನೆ ಸಂಪೂರ್ಣ ಹಾನಿ



ಹೆಚ್.ಡಿ.ಕೋಟೆ, ಅ.14– ತಾಲೂಕಿನ ಗುಜಪ್ಪನಹುಂಡಿ ಗ್ರಾಮದಲ್ಲಿ ಶನಿವಾರ ಸಂಜೆ ಆಕಸ್ಮಿಕ ಬೆಂಕಿ ಬಿದ್ದು ಮನೆಯೊಂದು ಸಂಪೂರ್ಣವಾಗಿ ಹಾನಿಯಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಗ್ರಾಮದ ಮಂಜುಳಾ ಅವರ ಮನೆಗೆ ಬೆಂಕಿ ಬಿದ್ದಿದೆ. ಮನೆಯ ಹಿಂಭಾಗದಲ್ಲಿ ನೀರು ಕಾಯಿಸಲು ಒಲೆಗೆ ಬೆಂಕಿ ಹಾಕಿದಾಗ ಪಕ್ಕದಲ್ಲಿದ್ದ ಪೆಟ್ರೋಲ್ ಹಾಗೂ ಗ್ಯಾಸ್ ಸಿಲೆಂಡರ್ ಹೊತ್ತಿ ಉರಿದಿದೆ. ಪರಿಣಾಮ ಮನೆಗೆಲ್ಲಾ ಬೆಂಕಿಯ ಜ್ವಾಲೆ ಆವರಿಸಿ, ಮನೆಗೆ ಹಾನಿಯಾಗಿದೆ.


ತಕ್ಷಣ ಅಕ್ಕಪಕ್ಕದ ನಿವಾಸಿಗಳು ಅಗ್ನಿಶಾಮಕ ದಳಕ್ಕೆ ವಿಷಯ ತಿಳಿಸಿದ್ದಾರೆ. ನಂತರ ಅಗ್ನಿಶಾಮಕ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದ್ದಾರೆ. ಹೆಚ್ಚಿನ ಅನಾಹುತ ತಪ್ಪಿಸಿದರು.


ದಾಸನೂರು ಮಲ್ಲಣ್ಣ ನಿಧನ




ಸುತ್ತೂರು, ಅ.14–ನಂಜನಗೂಡು ತಾಲೂಕಿನ ದಾಸನೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಲ್ಲಣ್ಣ (65) ಶನಿವಾರ ನಿಧನರಾದರು. ಮೃತರ ಸ್ವಗ್ರಾಮ ದಾಸನೂರಿನಲ್ಲಿ ಭಾನುವಾರ (ನಾಳೆ) ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.










ನಾಡಿನ ಸಮಸ್ತರಿಗೂ
ದಸರಾ
ಹಬ್ಬದ ಶುಭಾಶಯಗಳು
ಹೋಟೆಲ್
ವಿಷ್ಣು ಭವನ್®
ಸಸ್ಯಹಾರಿ ಫ್ಯಾಮಿಲಿ ರೆಸ್ಟೋರೆಂಟ್
Hotel
Vishnu Bhavan®
Pure Veg Family Restaurants
WE UNDERTAKE OUTDOOR CATERING
OPP. KSRTC BUS STAND, B.N. ROAD, BELOW BHIMA JEWELLERS & GIRIYAS


Indian Handicrafts
ODOP
my GOV
Khadi India
ರಾಷ್ಟ್ರಕ್ಕಾಗಿ ಖಾದಿ, ಫ್ಯಾಷನ್‌ಗಾಗಿ ಖಾದಿ
ಖಾದಿ ಮಹೋತ್ಸವ
ಅಕ್ಟೋಬರ್ 2 ರಿಂದ 31, 2023
ಖಾದಿ ಖರೀದಿಸಿ, ಖಾದಿ ಧರಿಸಿ
ಸ್ಥಳೀಯರಿಗೆ ಧ್ವನಿಯಾಗಿರಿ
ವಿದ್ಯಾರ್ಥಿಗಳು ಮತ್ತು ಯುವಕರಿಗೆ ವಿಶೇಷ ಆಕರ್ಷಣೆ
• ಕ್ವಿಝ್ ಸ್ಪರ್ಧೆ
• ಸೃಜನಾತ್ಮಕ ಚಿತ್ರ ಸ್ಪರ್ಧೆ
• ಭಾಷಣ ಸ್ಪರ್ಧೆ
• ಬೀದಿ ನಾಟಕ ಸ್ಪರ್ಧೆ
• ಪ್ರಬಂಧ ಬರೆಯುವ ಸ್ಪರ್ಧೆ
• ಜಿಂಗಲ್ ಮಾಡುವ ಸ್ಪರ್ಧೆ
• ವೀಡಿಯೋ ಗೇಮ್ ಮಾಡುವ ಸ್ಪರ್ಧೆ
• ಸ್ಲೋಗನ್ ಬರೆಯುವ ಸ್ಪರ್ಧೆ
• ಇ-ಪ್ಲೆಡ್ಜ್
• ಖಾದಿಯೊಂದಿಗೆ ಸೆಲ್ಫಿ
ಪಾಲ್ಗೊಳ್ಳಿ ಮತ್ತು ಗೆಲ್ಲಿ, ಹೋಗಿ ಇಲ್ಲವೇ my GOV ಸ್ಕ್ಯಾನ್ ಮಾಡಿ
मेरी सरकार
SALE
ಖಾದಿ ಮಹೋತ್ಸವದ ಅಂಗವಾಗಿ ಆಯ್ದ ಮಾರಾಟ ಮಳಿಗೆಗಳಲ್ಲಿ ಖಾದಿ ಉತ್ಪನ್ನಗಳ ಮೇಲೆ
ಶೇ.20 ರಿಯಾಯ್ತಿ ಮತ್ತು ಗ್ರಾಮೀಣ ಉತ್ಪನ್ನಗಳ ಮೇಲೆ ಶೇ.10 ರಿಯಾಯ್ತಿ
CBC 25133/15/0004/2324


ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಸಾಂಸ್ಕೃತಿಕ ಮೇರು... ಪರಂಪರೆಯ ತೇರು...
ನಾಡಹಬ್ಬ
ಮೈಸೂರು ದಸರಾ
ಉದ್ಘಾಟನಾ ಸಮಾರಂಭ
ಮೈಸೂರು ದಸರಾ
ಉದ್ಘಾಟನೆ
ನಾದಬ್ರಹ್ಮ ಶ್ರೀ ಹಂಸಲೇಖ
ಖ್ಯಾತ ಸಿನಿಮಾ ಸಾಹಿತಿ ಹಾಗೂ ಸಂಗೀತ ನಿರ್ದೇಶಕರು
ದಿನಾಂಕ: 15.10.2023, ಬೆಳಗ್ಗೆ 10.15 ರಿಂದ 10.36 ರೊಳಗೆ
ಸ್ಥಳ: ಚಾಮುಂಡಿ ಬೆಟ್ಟ
ಈ ವರ್ಷ 413ನೇ ಮೈಸೂರು ದಸರಾ ಉತ್ಸವ
ನಂದಿ ಧ್ವಜ ಪೂಜೆ, ಆಯುಧ ಪೂಜೆ, ಬನ್ನಿಮರದ ಪೂಜೆಯಂತಹ ವಿವಿಧ ಧಾರ್ಮಿಕ-ಸಾಂಸ್ಕೃತಿಕ ಚಟುವಟಿಕೆಗಳು
ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುವ ಅರಮನೆ ನಗರಿ
ರೋಮಾಂಚನಕಾರಿ ಕುಸ್ತಿ-ಕಾಳಗ
ಮನೋಲ್ಲಾಸಯುತ ಯುವ ದಸರಾ, ರೈತ ದಸರಾ, ಮಹಿಳಾ ದಸರಾ
ಅತ್ಯಾಕರ್ಷಕ ಹಾಗೂ ವರ್ಣನಾತೀತ ಜಂಬೂಸವಾರಿ
ಬನ್ನಿ, ನಾವೆಲ್ಲರೂ ಸೇರಿ ನಾಡ ಹಬ್ಬ
ದಸರಾವನ್ನು ಸಂಭ್ರಮಿಸೋಣ... ಆಚರಿಸೋಣ!
"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" - ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಕರ್ನಾಟಕ ವಾರ್ತೆ


ಮೈಸೂರು ಮಿತ್ರ

ಮೈಸೂರು ದಸರಾ-2023

ವಿಶೇಷಾಂಕ

ಭಾನುವಾರ 15 ಅಕ್ಟೋಬರ್ 2023

ವನ್ಯಜೀವಿಗಳು ನಮ್ಮಂತಲ್ಲಾ... ಅನಾಥ ಆನೆ ಮರಿಗಳಿಗೆ ಬೊಮ್ಮ-ಬೆಳ್ಳಿ ಮಾತೃ ವಾತ್ಸಲ್ಯ




ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬೊಮ್ಮ-ಬೆಳ್ಳಿ ದಂಪತಿ 'ಮೈಸೂರು ಮಿತ್ರ'ನೊಂದಿಗೆ ಮುಕ್ತವಾಗಿ ಮಾತನಾಡಿದ ಕ್ಷಣ.

■ ಎಂ.ಬಿ.ಪವನ್‌ಮೂರ್ತಿ ಮೊ.9738845134

ಆನೆ ಮತ್ತು ಮಾನವನ ನಡುವಿನ ಬಾಂಧವ್ಯದ ಭಾವನಾತ್ಮಕ ಲೋಕ ಅನಾವರಣಗೊಂಡ ಸಾಕ್ಷ್ಯಚಿತ್ರ 'ದಿ ಎಲಿಫೆಂಟ್ ವಿಸ್ಪರರ್ಸ್'. ಬೊಮ್ಮ ಮತ್ತು ಬೆಳ್ಳಿ ದಂಪತಿ ಅನಾಥ ಆನೆ ಮರಿಗಳಿಗೆ ತೋರಿದ ಮಾತೃವಾತ್ಸಲ್ಯ ಈ ಚಿತ್ರದ ಕೇಂದ್ರಬಿಂದು. ಕಾರ್ತಿಕಿ ಗೊನ್ಸಾಲ್ವಿಸ್ ನಿರ್ದೇಶನದಲ್ಲಿ ಈ ಸಾಕ್ಷ್ಯಚಿತ್ರ ಮೂಡಿಬಂದು, ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಮುಡಿಗೇರಿಸಿಕೊಂಡು ಇದೀಗ ವಿಶ್ವಪ್ರಸಿದ್ಧಿ ಗಳಿಸಿದೆ. ತಮಿಳುನಾಡಿನ ಮಧುಮಲೈ ಹುಲಿಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರದಲ್ಲಿ ತಮಿಳುನಾಡಿನ ಅರಣ್ಯ ಇಲಾಖೆಯ ನೌಕರರಾಗಿ ಕಾರ್ಯನಿರ್ವಹಿಸುವ ಈ ದಂಪತಿ, ಶಿಬಿರದಲ್ಲಿ ಮಾತೃ ಹೃದಯದಿಂದ ರಘು ಮತ್ತು ಅಮ್ಮು ಆನೆ ಮರಿಗಳನ್ನು ಸಾಕಿ ಸಲುಹಿದ ಭಾವನಾತ್ಮಕ ಲೋಕವು ಈ ಸಾಕ್ಷ್ಯಚಿತ್ರದಲ್ಲಿ ಮೂಡಿಬಂದಿದೆ. ಸಾಮಾನ್ಯ ಚಿಕಿತ್ಸೆ ಹಾಗೂ ಕಾರ್ಯನಿಮಿತ್ತ ಇತ್ತೀಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಬೊಮ್ಮ (ಕೆ.ಬೊಮ್ಮನ್) ಮತ್ತು ಬೆಳ್ಳಿ ದಂಪತಿ ಅನಾಥ ಆನೆ ಮರಿಗಳಾದ ರಘು ಮತ್ತು ಅಮ್ಮು ಆರೈಕೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಬಗೆ, ತೆಪ್ಪಕಾಡಿನ ಪ್ರಕೃತಿ ಮಡಿಲಲ್ಲಿನ ತಮ್ಮ ಬದುಕಿನ ಚಿತ್ರಣವನ್ನು 'ಮೈಸೂರು ಮಿತ್ರ'ನಲ್ಲಿ ಹಂಚಿಕೊಂಡರು. ಮೈಸೂರು ದಸರಾ ಹಿನ್ನೆಲೆಯಲ್ಲಿ ಇಲ್ಲಿನ ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆ ನೋಡಿ ಹರ್ಷಗೊಂಡಿರುವ ಇವರು, ಒಮ್ಮೆಯಾದರೂ ಜಂಬೂಸವಾರಿ ಕಣ್ತುಂಬಿಕೊಳ್ಳುವ ಬಯಕೆಯನ್ನು ಹೊಂದಿದ್ದು, ತಾವು ತಂಗಿದ್ದ ಖಾಸಗಿ ಹೋಟೆಲ್ ಒಂದರಲ್ಲಿ 'ಮೈಸೂರು ಮಿತ್ರ'ನಲ್ಲಿ ಮುಕ್ತವಾಗಿ ಮಾತನಾಡಿದರು.

ಮೈಸೂರು ಮಿತ್ರ: ***ನೀವು ಮೈಸೂರು ದಸರಾ ಗಜಪಡೆ ನೋಡಿದ್ದೀರಿ. ಆನೆ ಪಾಲಕರಾಗಿ ಈ ದಸರಾ ಗಜಪಡೆ ಬಗ್ಗೆ ನಿಮ್ಮ ಅಭಿಪ್ರಾಯವೇನು?***

ಬೊಮ್ಮ: ಇಲ್ಲಿನ ಆನೆಗಳನ್ನು ನೋಡಲೇ ಒಂದು ಖುಷಿ. ತುಂಬಾ ಚೆನ್ನಾಗಿ ಆರೈಕೆ ಮಾಡುತ್ತಿದ್ದಾರೆ. ಅವುಗಳನ್ನು ನೋಡಿದರೆ ಅದು ಗೊತ್ತಾಗುತ್ತದೆ. ದಸರಾ ಗಜಪಡೆ ಬಲಿಷ್ಠವಾಗಿದೆ. ಅವುಗಳ ಮೇಲೆ ಸವಾರಿ ಮಾಡುವಾಸೆಯೂ ಆಗುತ್ತದೆ. ಈ ಗಜಪಡೆಯೊಂದಿಗೆ ಬಂದಿರುವ ಕಾವಾಡಿ ಮತ್ತು ಮಾವುತರಲ್ಲಿ ಕೆಲವರು ನಮಗೆ ಗೊತ್ತಿರುವವರೂ ಇದ್ದಾರೆ. ಅವರನ್ನೂ ಮಾತನಾಡಿಸಿಕೊಂಡು ಬಂದೆವು.

ಮಿತ್ರ: ***ಮೈಸೂರು ದಸರಾ, ಜಂಬೂಸವಾರಿ ಬಗ್ಗೆ ನಿಮ್ಮ ಅನಿಸಿಕೆ ಏನು?***

ಬೊಮ್ಮ: ನಾನಾಗಲೀ, ನನ್ನ ಪತ್ನಿಯಾಗಲೀ ಈವರೆಗೆ ಜಂಬೂಸವಾರಿ ನೋಡಿಲ್ಲ. ಮೈಸೂರು ದಸರಾ ವೈಭವವನ್ನು ಕೇಳಿ ತಿಳಿದಿದ್ದೇವೆ. ಟಿವಿಯಲ್ಲಿ ಜಂಬೂಸವಾರಿ ನೋಡಿದ್ದೇವೆ. ಈ ಬಾರಿ ನೋಡಬೇಕೆಂದು ಅಂದುಕೊಂಡಿದ್ದೇವೆ. ನೋಡಲು ಅವಕಾಶ ಕಲ್ಪಿಸುತ್ತೇವೆ ಎಂದು ಹಲವರು ಆಹ್ವಾನಿಸಿದ್ದಾರೆ. ರಜೆ ಸಿಗುತ್ತದೋ ಏನೋ ಗೊತ್ತಿಲ್ಲ. ಹಾಗಾಗಿ ಏನಾಗುತ್ತದೋ ನೋಡಬೇಕು.

ಮಿತ್ರ ***ಮೈಸೂರು ದಸರಾ ಗಜಪಡೆಯ ಸಂಯಮ, ಅವುಗಳ ಪಾಲಿನ ಯಶಸ್ವಿ ಜವಾಬ್ದಾರಿ ನಿರ್ವಹಣೆ ಬಗ್ಗೆ ತಮ್ಮ ಅಭಿಪ್ರಾಯ?***

ಬೊಮ್ಮ: ವನ್ಯಜೀವಿಗಳು ನಮ್ಮಂತೆಯೇ ಆಗಿವೆ. ಅವುಗಳನ್ನು ನೋಡಿಕೊಳ್ಳುವ ಹಾಗೂ ಆರೈಕೆ ಮಾಡುವ ವಿಧಾನದ ಮೇಲೆ ಎಲ್ಲವೂ ಅವಲಂಭಿತವಾಗಿದೆ. ನಾವು ಅವುಗಳಿಗೆ ಪ್ರೀತಿ ತೋರಿ, ಅವುಗಳ ಸ್ವಭಾವ ಅರಿತು ನಡೆದುಕೊಂಡರೆ, ಅವುಗಳಿಂದ ಯಾವುದೇ ಅನಾಹುತ ಸಂಭವಿಸುವುದಿಲ್ಲ.

ಮಿತ್ರ: ***ತಮ್ಮ ಸಾಕ್ಷ್ಯಚಿತ್ರಕ್ಕೆ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಸಂದಿದೆ. ಇದರ ಬಗ್ಗೆ ಏನನ್ನಿಸುತ್ತದೆ?***

ಬೊಮ್ಮ: ನಿಜಕ್ಕೂ ಸಂತೋಷವೇ. ಆದರೆ ಚಿತ್ರ ತಂಡದವರು ನಮಗೇನೂ ಕೊಟ್ಟಿಲ್ಲ. ಆದರೂ ಏನೇನೋ ಸೌಲಭ್ಯ ಕಲ್ಪಿಸಿಕೊಟ್ಟಿರುವುದಾಗಿ ಮಾಧ್ಯಮಗಳ ಮುಂದೆ ಹೇಳಿಕೊಂಡಿದ್ದಾರೆ. ಮನೆ ನಿರ್ಮಿಸಿಕೊಟ್ಟಿದ್ದೇವೆ. ಕಾರು ಮತ್ತು ಹಣ ಕೊಟ್ಟಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಏನೂ ಮಾಡದೇ ಹೀಗೆ ಹೇಳಿಕೊಂಡಿರುವುದು ಗೊತ್ತಾದ ಮೇಲೆ ನಮಗೆ ತುಂಬಾ ಬೇಸರವಾಯಿತು. ಅವರ ಹೇಳಿಕೆ ಹಿನ್ನೆಲೆಯಲ್ಲಿ ಹಲವರು ಮನೆ ಎಲ್ಲಿ, ಕಾರು ಎಲ್ಲಿ ಎಂದು ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ನಮ್ಮ ಅಧಿಕಾರಿಗಳು ನಮ್ಮಗಳ ಬ್ಯಾಂಕ್ ಖಾತೆ ಪರಿಶೀಲಿಸಿದ್ದರು. ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ನಮ್ಮದೇ ನಾಲ್ಕು ಲಕ್ಷ ರೂ. ವೆಚ್ಚವಾಗಿದೆ. ಅದನ್ನೂ ನಮಗೆ ವಾಪಸ್ಸು ಕೊಟ್ಟಿಲ್ಲ. ಅವರಿಗೆ ಫೋನ್ ಮಾಡಿದರೆ ತೆಗೆಯುವುದಿಲ್ಲ. ನಮ್ಮ ಕೈಯಿಂದ ಖರ್ಚು ಮಾಡಿಸಿದ್ದನ್ನಾದರೂ ಕೊಡುವುದು ಬೇಡವೇ? ಅದೂ ಕೊಟ್ಟಿಲ್ಲ.

ಬೆಳ್ಳಿ ಭಾವುಕ ನುಡಿ

ಮಿತ್ರ: ***ತಾವು ಸಾಕಿದ ಆನೆ ಮರಿಗಳ ಬಗ್ಗೆ ಏನು ಹೇಳುವಿರಾ?***

ಬೆಳ್ಳಿ: ರಘು ದೊಡ್ಡದಾದ ಮೇಲೆ ಅಮ್ಮು ಆನೆ ಕೊಟ್ಟರು. 9 ವರ್ಷಗಳ ಕಾಲ ಶಿಬಿರದಲ್ಲಿ ಇಟ್ಟುಕೊಂಡು ಎರಡನ್ನೂ ಬೆಳೆಸಿ ದೊಡ್ಡದು ಮಾಡಿದೆವು. ಅವು ಈಗಲೂ ನಮ್ಮನ್ನು ನೋಡಿದರೆ ಓಡಿ ಹತ್ತಿರ ಬರುತ್ತವೆ. ಹಣ್ಣು ಕೊಟ್ಟು ತಿನ್ನಿಸಿ ಬರುತ್ತೇವೆ.

ಮಿತ್ರ: ***ರಘು ಆನೆ ನಿಮಗೆ ಸಿಕ್ಕಿದ್ದು ಹೇಗೆ?***

ಬೊಮ್ಮ: ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಐಯೂರ್ ಮೀಸಲು ಅರಣ್ಯ ಪ್ರದೇಶದಲ್ಲಿ ರಘುವಿನ ತಾಯಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಅದು ಅನಾಥವಾಗಿತ್ತು. ಇಲ್ಲಿಗೆ ಸಮೀಪದ ಊರಿಗೆ ದಾರಿ ತಪ್ಪಿ ಬಂದಿದ್ದ ರಘುವಿನ ಮೇಲೆ ಬೀದಿ ನಾಯಿಗಳು ದಾಳಿ ಮಾಡಿ ತೀವ್ರವಾಗಿ ಗಾಯಗೊಳಿಸಿದ್ದವು. ಅರಣ್ಯ ಇಲಾಖೆಯಿಂದ ನನ್ನನ್ನು ಅಲ್ಲಿಗೆ ಕಳುಹಿಸಿ ಅದರ ಆರೈಕೆ ಜವಾಬ್ದಾರಿ ನೀಡಿದ್ದರು. ವೈದ್ಯರು ಸಾಕಷ್ಟು ಚಿಕಿತ್ಸೆ ನೀಡಿದರೂ ಅದು ಚೇತರಿಸಿಕೊಳ್ಳುವಂತೆ ಕಾಣುತ್ತಿರಲಿಲ್ಲ. ಒಂದೂವರೆ ತಿಂಗಳು ಅಲ್ಲೇ ಅದರ ಲಾಲನೆ ಪಾಲನೆ ಮಾಡಿದ ನಾನು, ಇಲಾಖೆ ಸೂಚನೆ ಮೇರೆಗೆ ತೆಪ್ಪಕಾಡು ಶಿಬಿರಕ್ಕೆ ಕರೆತಂದೆ. ಬಳಿಕ ಪತ್ನಿ ಬೆಳ್ಳಿ ಮತ್ತು ನಾನು ಇಬ್ಬರೂ ಅದಕ್ಕೆ ಚಿಕಿತ್ಸೆ ಕೊಡಿಸಿ ಆರೈಕೆ ಮಾಡಿದೆವು. ಸಾಕ್ಷ್ಯಚಿತ್ರದಲ್ಲಿ ಅದೇ ಆನೆ ಕೇಂದ್ರಬಿಂದುವಾಗಿದೆ.

ಮಿತ್ರ: ***ಈಗ ರಘು ಆನೆ ಹೇಗಿದ್ದಾನೆ. ಅವನಿಗೆ ಈಗ ಎಷ್ಟು ವಯಸ್ಸು?***

ಬೊಮ್ಮ: ಚಿಕಿತ್ಸೆ ಮತ್ತು ಆರೈಕೆಯಿಂದ ಚೇತರಿಸಿಕೊಂಡಿದ್ದಾನೆ. ರಘು ಆನೆ ಈಗ ನಮ್ಮ ಬಳಿ ಇಲ್ಲ. ನನಗೆ ನೌಕರಿ ಖಾಯಂ ಆಗದ ಕಾಲದಲ್ಲಿ ಬರುತ್ತಿದ್ದ ಕಡಿಮೆ ಸಂಬಳದಲ್ಲೇ ದನಗಳ ಫಾರಂನಿಂದ ಹುಲ್ಲು ತಂದು ಅದಕ್ಕೆ ಕೊಡುತ್ತಿದ್ದೆ. ನಾನು ಈಗ ಕೃಷ್ಣ ಎಂಬ ದೊಡ್ಡ ಆನೆ ನೋಡಿಕೊಳ್ಳುತ್ತೇನೆ.

ಮಿತ್ರ: ***ಇಷ್ಟು ವರ್ಷ ಕಾಲ ನಿಮ್ಮ ಆರೈಕೆಯಲ್ಲಿದ್ದ ರಘು ಆನೆ ಈಗ ಬೇರೆಯವರ ಬಳಿ ಹೋದರೆ, ಅದರ ವರ್ತನೆಯಲ್ಲಿ ಏನಾದರೂ ವ್ಯತ್ಯಾಸ ಉಂಟಾಗಿದೆಯೇ?***

ಬೊಮ್ಮ: ಹೌದು, ಸಾಕಷ್ಟು ಬದಲಾಗಿದ್ದಾನೆ. ಅದನ್ನು ಈಗ ಎಲ್ಲರೂ ಮುಟ್ಟಲು ಸಾಧ್ಯವಿಲ್ಲ. ಅವನಿಗೆ 6 ವರ್ಷ ವಯಸ್ಸು. ನಾವು ಅದನ್ನು ಸಾಕಲು ಆರಂಭಿಸಿದಾಗ, ಇನ್ನು ಸಣ್ಣ ಮರಿ. ಆಗ ಯಾರೇ ಅದರ ಬಳಿಗೆ ಹೋದರೂ ಏನು ಮಾಡುತ್ತಿರಲಿಲ್ಲ. ನಾವೇ ಕೆಳಗೆ ಬಿದ್ದರೂ ಅದೇ ಎತ್ತಿ ನಿಲ್ಲಿಸುತ್ತಿತ್ತು.

ಮಿತ್ರ: ***ರಘು ಆನೆ ಈಗ ನಿಮ್ಮನ್ನು ನೋಡಿದರೆ ಹೇಗೆ ವರ್ತಿಸುತ್ತದೆ. ಗುರುತಿಸುತ್ತದೆಯೇ?***

ಬೊಮ್ಮ: ಈಗಲೂ ನಮ್ಮನ್ನು ಮರೆತಿಲ್ಲ. ಗುರುತಿಸುವುದು ಮಾತ್ರವಲ್ಲ, ಬಾಯಿ ಚಪ್ಪರಿಸುತ್ತದೆ. ನಮ್ಮ ಬಳಿ ಇದ್ದಾಗ, ಹಾಲು, ಬಿಸ್ಕತ್ ಕೊಡುತ್ತಿದ್ದೆವು. ಹಾಗಾಗಿ ನಾವು ಹತ್ತಿರ ಹೋಗುತ್ತಿದ್ದಂತೆ ಬಾಯಿ ಚಪ್ಪರಿಸುತ್ತದೆ. ನಾವು ಆಗಾಗ ಹೋಗಿ ನೋಡುತ್ತೇವೆ. ಹಣ್ಣು, ಬಿಸ್ಕತ್ ಕೊಟ್ಟು ಬರುತ್ತೇವೆ.

ಮಿತ್ರ: ***ರಘುವನ್ನು ನಾವೇ ನೋಡಿಕೊಳ್ಳುತ್ತೇವೆ ಎಂದು ಬೇಡಿಕೆ ಇಟ್ಟಿಲ್ಲವೇ?***

ಬೊಮ್ಮ: ರಘುವನ್ನು ಚಿಕ್ಕ ವಯಸ್ಸಿನಿಂದ ಮಗುವಿನಂತೆ ಸಾಕಿದ್ದೆವು. ನಾವೇ ನೋಡಿಕೊಳ್ಳುತ್ತೇವೆ, ನಮಗೇ ಕೊಡಿ ಎಂದು ನಾವು ಎಷ್ಟೋ ಕೇಳಿಕೊಂಡೆವು. ಆದರೆ ಸಾಧ್ಯವಿಲ್ಲವೆಂದು ಕೃಷ್ಣ ಎಂಬ ದೊಡ್ಡ ಆನೆ ನೋಡಿ ಕೊಳ್ಳುವ ಜವಾಬ್ದಾರಿ ಕೊಟ್ಟರು. ಕೃಷ್ಣ ಆನೆಗೆ ಸುಮಾರು 12 ವರ್ಷ ವಯಸ್ಸು.

ಮಿತ್ರ: ***ಸಾಕಷ್ಟು ವರ್ಷಗಳಿಂದ ಆನೆಗಳ ಪಾಲನೆ ಮಾಡಿದ್ದೀರಿ. ಆನೆಗಳ ಸ್ವಭಾವದ ಬಗ್ಗೆ ನಿಮಗೇನು ಅನ್ನಿಸುತ್ತದೆ?***

ಬೊಮ್ಮ: ಆನೆಗಳನ್ನು ನಾವು ಆತ್ಮೀಯವಾಗಿ ನೋಡಿಕೊಂಡರೆ, ಅವುಗಳು ನಮ್ಮ ಒಡನಾಟ ಬೆಳೆಸಿಕೊಳ್ಳುತ್ತವೆ. ನಾವು ತೊಂದರೆ ಕೊಡದಿದ್ದರೆ, ಅವುಗಳಿಂದ ನಮಗೆ ಯಾವುದೇ ತೊಂದರೆಯಾಗದು. ಚೆನ್ನಾಗಿ ನೋಡಿಕೊಂಡರೆ, ಅವುಗಳೂ ನಮ್ಮೊಂದಿಗೆ ಉತ್ತಮವಾದ ಬಾಂಧವ್ಯ ಹೊಂದುತ್ತವೆ.

ಮಿತ್ರ: ***ಆನೆಗಳನ್ನು ಬಿಟ್ಟರೆ ಬೇರೆ ಕಾಡು ಪ್ರಾಣಿಗಳೊಂದಿಗೆ ಒಡನಾಟ ಇದೆಯೇ?***

ಬೊಮ್ಮ: ಇಲ್ಲ. ಆನೆಗಳು ಮಾತ್ರ ಆದರೆ ಕಾಡಿನಲ್ಲಿ ಜೀವನ ಮಾಡಬೇಕಾದರೆ ಎಲ್ಲಾ ಕಾಡುಪ್ರಾಣಿಗಳ ಪರಿಚಯ ಇರಲೇಬೇಕಾಗುತ್ತದೆ. ಕಾಡಿನ ಪ್ರಕೃತಿ, ಅಲ್ಲಿನ ಜೀವಿಗಳೆಂದರೆ ನಮಗೆ ಅತ್ಯಂತ ಪ್ರೀತಿ-ಕಾಳಜಿ ಇದೆ.

ಮಿತ್ರ: ***ತಾವು ಅರಣ್ಯ ಇಲಾಖೆ ಸೇವೆಗೆ ಸೇರಿದ್ದು ಹೇಗೆ?***

ಬೊಮ್ಮ: ನಾನು ಹುಟ್ಟಿ ಬೆಳೆದಿದ್ದು ಮಧುಮಲೈ ಅರಣ್ಯ ಪ್ರದೇಶದಲ್ಲೇ. ಇಲ್ಲಿ ನಮ್ಮ ಅಪ್ಪ ಕಂಜು ಕಾವಾಡಿ ಮತ್ತು ಮಾವುತರಾಗಿ ಕೆಲಸ ಮಾಡುತ್ತಿದ್ದರು. ಅವರು ನಿಧನ ಹೊಂದಿದ ಮೇಲೆ ನನಗೆ ಅನುಕಂಪದ ಆಧಾರದಲ್ಲಿ ಕೆಲಸ ಸಿಕ್ಕಿತು. ನಾನು 2ನೇ ತರಗತಿ ಓದಿದ್ದೇನೆ. ನನ್ನ 18ನೇ ವಯಸ್ಸಲ್ಲಿ ಅರಣ್ಯ ಇಲಾಖೆಯಲ್ಲಿ ಕೆಲಸ ದೊರೆಯಿತು.

ಮಿತ್ರ: ***ಆನೆಗಳ ಸೆರೆ ಹಿಡಿಯುವ ವಿಧಾನ ದಲ್ಲಿ ಹಿಂದೆ ಮತ್ತು ಈಗ ಯಾವ ರೀತಿ ಇದೆ?***

ಬೊಮ್ಮ: ಈಗ ಆನೆ ಹಿಡಿಯುವುದು ಸರಳ. ಆಗ ಖೆಡ್ಡಾ ತೆಗೆದು ಹಿಡಿಯಬೇಕಿತ್ತು. ಚಿಕ್ಕ ವಯಸ್ಸಿನಲ್ಲಿ ಇಂತಹ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದೆ. ಖೆಡ್ಡಾದೊಳಗೆ ಮಾವುತರು ಇಳಿದು ಸೆರೆ ಸಿಕ್ಕ ಆನೆಗೆ ಹಗ್ಗದಿಂದ ಬಿಗಿಯಬೇಕಿತ್ತು. ಆಗ ಭಯಂಕರ ಕಷ್ಟ, ನಮ್ಮ ಜೀವ ನಮ್ಮ ಕೈಯ್ಯಲ್ಲಿ ಇರುತ್ತಿರಲಿಲ್ಲ. ಈಗ ಅಂತಹ ಸನ್ನಿವೇಶವಿಲ್ಲ. ಅರಿವಳಿಕೆ ಮದ್ದು ನೀಡಿ ಸುಲಭವಾಗಿ ಸೆರೆ ಹಿಡಿಯಲಾಗುತ್ತದೆ.

ಮಿತ್ರ: ***ದೇಶದ ಪ್ರಧಾನಿ ನರೇಂದ್ರ ಮೋದಿಯವರು ತೆಪ್ಪಕಾಡು ಆನೆ ಶಿಬಿರಕ್ಕೆ ಭೇಟಿ ನೀಡಿ, ನಿಮ್ಮೊಂದಿಗೆ ಕಾಲ ಕಳೆದಿದ್ದರ ಬಗ್ಗೆ ನಿಮ್ಮ ಅನಿಸಿಕೆ?***

ಬೊಮ್ಮ: ಗಣ್ಯರು ನಮ್ಮನ್ನು ಭೇಟಿ ಮಾಡುತ್ತಿರುವುದು ನಮಗೆ ಹೊಸದು. ಹಾಗಾಗಿ ಅತ್ಯಂತ ಸಂತೋಷವಾಯಿತು. ದೇಶಕ್ಕೆ ಕೀರ್ತಿ ತಂದಿದ್ದೀರಿ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ನಿಮ್ಮ ಸೇವೆ ಹೀಗೆಯೇ ಮುಂದುವರೆಯಲಿ ಎಂದು ಆತ್ಮೀಯವಾಗಿ ನುಡಿದರು.

ಮಿತ್ರ: ***ಆನೆಗಳ ಬಗ್ಗೆ ತಮ್ಮ ಭಾವುಕ ಮಾತೇನು?***

ಬೊಮ್ಮ: ಆನೆಗಳೊಂದಿಗೆ ನಮ್ಮ ದಿನನಿತ್ಯ ಬದುಕು ಸಾಗುತ್ತದೆ. ಆನೆಗಳು ಎಂದರೆ ನಮಗೆ ನಮ್ಮ ಮಕ್ಕಳು ಮತ್ತು ನಮ್ಮ ದೇವರು ಇದ್ದಂತೆ. ಕಾಡಿನೊಳಗೆ ನಮಗೆ ಆಪತ್ತು ಬಂದರೆ ಅವು ನಮ್ಮನ್ನು ಕಾಪಾಡುತ್ತವೆ.

ನಾದಬ್ರಹ್ಮ ತಂಡದಿಂದ 'ಜಯಹೇ ನಾಲ್ವಡಿ...'

ಅರಮನೆ ಅಂಗಳದ ಸಾಂಸ್ಕೃತಿಕ ವೇದಿಕೆಯಲ್ಲಿ ಅ.22ರಂದು ನನ್ನ ನೇತೃತ್ವದ ತಂಡದಿಂದ 'ಜಯಹೇ ನಾಲ್ವಡಿ' ಬೃಹತ್ ಆರ್ಕೆಸ್ಟ್ರಾ ನಡೆಯಲಿದೆ. ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಸಚಿವ ಹೆಚ್.ಸಿ. ಮಹದೇವಪ್ಪನವರು ನನಗೆ ಒಂದು ಮಾತನ್ನೇಳಿದರು. 'ಎಲ್ಲರೂ ಸಿನಿಮಾ ಹಾಡುಗಳನ್ನು ಹಾಡುತ್ತಾರೆ. ಆದರೆ ಈ ನಾಲ್ವಡಿ ಅವರ ಬಗ್ಗೆ ಏನೂ ಮಾಡಲ್ವಾ' ಎಂದು. ಆಗ ನನಗೆ ನಿಜವಾಗಲೂ ರೋಮಾಂಚನವಾಯಿತು. ಅವರು ಭಾಷಣ ಮುಗಿಸಿ ಬರುವಷ್ಟರಲ್ಲಿ ಕಾರ್ಯಕ್ರಮದ ಯೋಜನೆ ನನಗೆ ಹೊಳೆದಿತ್ತು. 'ಜಯಹೇ ನಾಲ್ವಡಿ...' ಶೀರ್ಷಿಕೆಯಡಿ ನನ್ನ ಜನಪ್ರಿಯ ಗೀತೆಗಳಿಗೆ ನಾಲ್ವಡಿ... ಅವರ ಸಾಹಸ, ಕೊಡುಗೆಗಳನ್ನು ಬೆರೆಸೋಣ ಎಂದು ಹೇಳಿದೆ ಹೇಗೆಂದರೆ, ನಾನೇ ಬರೆದ ಒಂದು ಹಾಡು; 'ಬೊಂಬೆ... ಬೊಂಬೆ... ಬೊಂಬೆ..., ಬೊಂಬೆ... ಬೊಂಬೆ... ಬೊಂಬೇ...ಹೀಗಿದೆ. ಇದನ್ನೇ ನಾನು ಬೊಂಬೆ... ಬೊಂಬೆ ಬೊಂಬೆ..., ಬೊಂಬೆ... ಬೊಂಬೆ... ಬೊಂಬೇ.... ನಾನು ಮೈಸೂರು ದಸರಾ ಬೊಂಬೆ...' ಹೀಗೆ ನಾಲ್ವಡಿ ಅವರ ಗುಣಗಾನ ಮಾಡಲು ತೀರ್ಮಾನಿಸಿದ್ದೇನೆ. ಅಂತೆಯೇ ಅ.22ರಂದು ಒಂದು ಅತೀ ದೊಡ್ಡ ಆರ್ಕೆಸ್ಟ್ರಾ. 100 ಜನ ವಾದ್ಯಗಾರರು, 180 ನೃತ್ಯಗಾರರು, 20 ಕಲಾವಿದರು ಹಾಗೂ ತಂತ್ರಜ್ಞರು ಸೇರುವ ಒಂದು ಮೆಗಾ ಇವೆಂಟ್. ಹೀಗೆ ಉದ್ಘಾಟನೆ ಮತ್ತು ಸಮಾರೋಪ ಒಬ್ಬನೇ ಮಾಡಿದ್ದು ಇತಿಹಾಸದಲ್ಲೇ ಇಲ್ಲ. –ಹಂಸಲೇಖಾ

ದಸರಾ

■ ಎಸ್.ಬಿ.ದೇವರಾಜ
ಮೊ.9844472701

ಒಂದು ಜೀವಂತ ಮಹಾ ಕಾವ್ಯ...





ಮಂಡ್ಯದಿಂದ ಹೊರಹೊಮ್ಮಿದ ಸಂಗೀತನಾದವಿದು...!

ನಾದಬ್ರಹ್ಮ ಹಂಸಲೇಖ ಅವರು ಮೂಲತಃ ಮಂಡ್ಯ ಜಿಲ್ಲೆಯವರು. ಬೆಂಗಳೂರಿನ ಅಕ್ಕಿಪೇಟೆಯಲ್ಲಿರುವ ತುಳಸೀ ಕಟ್ಟೆ ಪ್ರದೇಶದಲ್ಲಿ ವಾಸವಿದ್ದ ಹೆಚ್.ಕೆ. ಗೋವಿಂದರಾಜು ಮತ್ತು ರಾಮವ್ವ ದಂಪತಿಯ ಪುತ್ರ. 1951ರ ಜೂನ್ 23 ರಂದು ಜನನ. ಮೂಲ ಹೆಸರು ಗಂಗರಾಜು. ತಂದೆಯ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಇವರಿಗೆ ಸಹೋದರ ಬಾಲಕೃಷ್ಣ ಅವರ ಆರ್ಕೆಸ್ಟ್ರಾ ಗ್ರೂಪ್‌ನಲ್ಲಿ ಹಾಡುವುದು ಹಾಗೂ ಕೆಲವು ವಾದ್ಯ ಪರಿಕರಗಳನ್ನು ನುಡಿಸುವುದು ಹವ್ಯಾಸವಾಗಿತ್ತು. ಗುರುಗಳಾದ ಲಾವಣಿ ನೀಲಕಂಠಪ್ಪ, ಇವರಿಗೆ 'ಹಂಸಲೇಖ' ಎಂದು ಮರು ನಾಮಕರಣ ಮಾಡಿದರು. ಅದೇ ಹೆಸರಿನಲ್ಲಿ 1973ರಲ್ಲಿ ಉದಯಕುಮಾರ್ ನಾಯಕನಾಗಿ ನಟಿಸಿದ್ದ, ಎಂ.ಎನ್. ಪ್ರಸಾದ್ ನಿರ್ದೇಶಿಸಿದ್ದ 'ತ್ರಿವೇಣಿ' ಚಿತ್ರದಲ್ಲಿ 'ನೀನೇ ಭಾಗ್ಯವಂತ' ಹಾಡನ್ನು ರಚಿಸುವ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಹಂಸಲೇಖ, ಚಿತ್ರಕಥೆ, ಸಂಭಾಷಣೆ ಹಾಗೂ ಸಂಗೀತ ರಚನೆಯಲ್ಲಿ ತೊಡಗಿಸಿಕೊಂಡಿದ್ದರು. 1985 ರಲ್ಲಿ ಬಿಡುಗಡೆಯಾದ 'ನಾನು ನನ್ನ ಹೆಂಡ್ತಿ' ಚಿತ್ರ ಇವರಿಗೆ ಬಾರೀ ದೊಡ್ಡ ಹೆಸರು ತಂದುಕೊಟ್ಟಿತು. 1987ರಲ್ಲಿ ಬಿಡುಗಡೆಯಾದ ರವಿಚಂದ್ರನ್ ನಿರ್ದೇಶಿಸಿ, ನಾಯಕ ನಟನಾಗಿ ನಟಿಸಿದ 'ಪ್ರೇಮಲೋಕ'ವಂತೂ ಇವರನ್ನು ಚಿತ್ರರಂಗದಲ್ಲಿ ಉತ್ತುಂಗಕ್ಕೆ ಕೊಂಡೊಯ್ಯಿತು. ಸುದೀರ್ಘ 12 ವರ್ಷಗಳ ಕಾಲ ಹಂಸಲೇಖ–ರವಿಚಂದ್ರನ್ ಜೋಡಿ ಚಿತ್ರರಂಗದಲ್ಲಿ ತನ್ನದೇ ಛಾಪನ್ನು ಮೂಡಿಸಿತು. ಆರು ಫಿಲಂಫೇರ್ ಪ್ರಶಸ್ತಿ ಪಡೆದಿರುವ ಹಂಸಲೇಖ ಅವರಿಗೆ ಅತ್ಯುತ್ತಮ ಸಂಗೀತ ನಿರ್ದೇಶನಕ್ಕಾಗಿ 3 ರಾಜ್ಯ ಪ್ರಶಸ್ತಿಗಳು ಲಭಿಸಿವೆ. 2005ರಲ್ಲಿ ಹಂಸಲೇಖ, ರಾಜ್ಯ ಸರ್ಕಾರದಿಂದ ಸುವರ್ಣ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕನ್ನಡ ಮಾತ್ರವಲ್ಲದೆ, ತಮಿಳು ಮತ್ತು ತೆಲುಗು ಚಿತ್ರಗಳಿಗೂ ಸಂಗೀತ ನಿರ್ದೇಶನ ಮಾಡಿರುವ ಹಂಸಲೇಖ, ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. 1990ರಲ್ಲಿ ಹಿನ್ನೆಲೆ ಗಾಯಕಿ ಲತಾ ಅವರನ್ನು ವಿವಾಹವಾದರು. ಈ ದಂಪತಿಗೆ 'ಅಲಂಕಾರ್'–ಪುತ್ರ ಹಾಗೂ ತೇಜಸ್ವಿನಿ ಮತ್ತು ನಂದಿನಿ–ಪುತ್ರಿಯರಿದ್ದಾರೆ.

ದಸರಾ ಎನ್ನುವುದು ಒಂದು ಜೀವಂತ ಮಹಾಕಾವ್ಯ. ಈ ಅವಕಾಶ ಅನಿರೀಕ್ಷಿತ. ಆದರೆ ಒಂದು ರೀತಿ ಸಾಮಾಜಿಕ ನ್ಯಾಯವನ್ನು ಸಾಧಿಸುವ ಚಕ್ರದಲ್ಲಿ ಇದು ನಿರೀಕ್ಷಿತ. ನಮ್ಮ ಚಂದನವನದ, ಚಿತ್ರರಂಗದ ಬರಹಗಾರರು, ಎಲ್ಲಾ ರೈಟರ್ಸ್ ಸಂಕುಲಕ್ಕೆ ನನ್ನ ಈ ಅವಕಾಶವನ್ನು ಸಮರ್ಪಣೆ ಮಾಡುತ್ತಿದ್ದೇನೆ. ಇದು ಚಂದನವನಕ್ಕೆ ಸಂದ ದೊಡ್ಡ ಕೊಡುಗೆ. ನನ್ನ ವೃತ್ತಿ ಜೀವನದಲ್ಲಿ ಇದೊಂದು ಪರಿಪೂರ್ಣವಾದ ಪ್ರಯಾಣ. ದಸರಾ ಎನ್ನುವುದು ನಾಡಿನ ಸಾಂಸ್ಕೃತಿಕ ಅಸ್ಮಿತೆ ಎನ್ನುತ್ತಾರೆ. ಆದರೆ, ನಾನು ಬೇರೆ ರೀತಿಯೇ ಕರೆಯುತ್ತೇನೆ. ದಸರಾ ಎನ್ನುವುದು ಒಂದು ಜೀವಂತ ಮಹಾಕಾವ್ಯ. ಅದು ಬದುಕಿರುವ ಮಹಾಕಾವ್ಯ. ಅದು ನಮ್ಮ ಕಣ್ಮುಂದೆ ಇದೆ. ಆದರೆ ಅದನ್ನು ಮಹಾಕಾವ್ಯವಾಗಿ ಯಾರೂ ಯಾಕೋ ಬರೆದಿಲ್ಲ. ಈ ಮಹಾಕಾವ್ಯದ ಕಥಾದ್ರವ್ಯ ನಮ್ಮ ವೀರ ತೆಂಕಣದ ಬದುಕು. ಸುಮಾರು 375 ವರ್ಷಗಳ ಕಾಲ ಹಿಂದೂ ಸಾಮ್ರಾಜ್ಯವನ್ನು ದಕ್ಷಿಣ ಭಾರತದಲ್ಲಿ ಸ್ಥಾಪನೆ ಮಾಡಿದ್ದು ವಿಜಯನಗರ. ಆ ಕಾಲವನ್ನು ನಮ್ಮ ದೊಡ್ಡ ಹಿರಣ್ಣಯ್ಯನವರು 'ಮೂರು ಮಕ್ಕಾಲುಗಳಿಗೆ ಚಿನ್ನದ ಮಳೆ ಸುರಿಸಿದ ಕಾಲ' ಎಂದು ವರ್ಣಿಸಿದ್ದಾರೆ. ಅಂತಾ ಕಾಲದ ಕಥಾದ್ರವ್ಯ ಯಾವಾಗಲೋ ಒಂದು ಮಹಾಕಾವ್ಯ ಆಗಬೇಕಿತ್ತು. ಯಾರು, ಯಾಕೋ ಅದರ ಕಡೆ ಗಮನ ಕೊಟ್ಟಿಲ್ಲ. ಆ ಕಥಾದ್ರವ್ಯ ಇಂದು ದಸರೆಯಾಗಿ ಜೀವಂತ ಮಹಾಕಾವ್ಯವಾಗಿದೆ. ಇದರ ಒಂದು ವರ್ಷದ ಉದ್ಘಾಟನೆ ನಾನು ಮಾಡುವುದರ ಜೊತೆಗೆ ಅದರ ಸಮಾರೋಪಕ್ಕೆ ನನ್ನ ಸಂಗೀತ ಕಾರ್ಯಕ್ರಮ ನೀಡಲು ಅವಕಾಶ ಸಿಕ್ಕಿರುವುದು ವೃತ್ತಿ ಜೀವನದ ಪರಿಪೂರ್ಣವಾದ ವೃತ್ತ. –ಮೈಸೂರು ದಸರಾ ಉದ್ಘಾಟಕರಾದ ನಾದಬ್ರಹ್ಮ ಹಂಸಲೇಖ ಬಣ್ಣನೆ

ರಾಜವಂಶದ ದಸರಾಕ್ಕೆ 613 ವರ್ಷಗಳ ಹಿನ್ನೆಲೆ ಇರುವುದನ್ನು ನಾವು ನೆನೆಸಬೇಕು. ಅಷ್ಟೇ ಅಲ್ಲ. ಅದು ವಿಜಯನಗರದ ಬಳುವಳಿಯೂ ಆಗಿ ಬಂದಿದೆ ಎಂಬುದನ್ನು ಮರೆಯಬಾರದು. 1610ರಲ್ಲಿ ರಾಜ ಒಡೆಯರು ಪ್ರಥಮ ಬಾರಿಗೆ ನವರಾತ್ರಿ ಪ್ರಾರಂಭಿಸುವ ಮೂಲಕ ಮೈಸೂರಿನ ಕೀರ್ತಿಯನ್ನು ಬೆಳಗಿದರು. ವಿಜಯ ಸಂಕೇತ ಸಾರಿದರು. ಮೈಸೂರಿನಲ್ಲಿ ದಸರಾ ಪ್ರಾರಂಭವಾದದ್ದು ಅವರಿಂದ. ಅದೇ ಇಂದಿನ ದಸರಾಗೂ ಮೂಲ ಎಂಬುದನ್ನು ನಾವು ಸ್ಮರಿಸಬೇಕು. ಈ ಆರು ಶತಮಾನಗಳ ಅವಧಿಯಲ್ಲಿ, ಮಹಾರಾಜ ಜಯಚಾಮರಾಜ ಒಡೆಯರ ಅವಧಿಯವರೆಗೆ ಮೈಸೂರು, ಅಷ್ಟೇ ಏಕೆ ಕರ್ನಾಟಕದ ಸಂಸ್ಕೃತಿ, ಸಂಪ್ರದಾಯಗಳನ್ನು ಬೆಳೆಸಿ, ಪೋಷಿಸಿಕೊಂಡು ಬಂದು ಮರೆಯಲಾಗದ ಕಾಣಿಕೆ ನೀಡಿದ್ದಾರೆ








ದಸರಾ ಉತ್ಸವ

ಹಿಂದೆ ಧಾರ್ಮಿಕ ಆಚರಣೆ...

ಇಂದು ವಾಣಿಜ್ಯೀಕರಣ...




■ ಗೌರಿ ಸತ್ಯ
ಹಿರಿಯ ಪತ್ರಕರ್ತ
ಮೊ.8762788685

ದಸರಾದ ಒಂಬತ್ತು ದಿನಗಳು ನವರಾತ್ರಿ. ಹತ್ತನೆಯ ದಿನ ವಿಜೃಂಭಣೆಯ ವಿಜಯಾಚರಣೆಯ ವಿಜಯ ದಶಮಿ. ಆಶ್ವಯುಜ ಶುದ್ಧ ಮಾಸದಲ್ಲಿ ಬರುವ ಮಂಗಳಕರ ಹತ್ತು ದಿನಗಳಲ್ಲಿ ಜನ ಶ್ರದ್ಧಾಭಕ್ತಿಯಿಂದ ಆಚರಿಸುವ ಈ ಹಬ್ಬ ಪ್ರಮುಖ ಹಬ್ಬಗಳಲ್ಲಿ ಒಂದು. ಒಂಬತ್ತು ರಾತ್ರಿಗಳೂ ದೇವಿಯ ಆರಾಧನೆಗೆ ಮೀಸಲು. ದೇವಿಯ ಒಂದೊಂದೂ ಸ್ವರೂಪಕ್ಕೂ ಪೂಜೆ, ಪುನಸ್ಕಾರ. ಜನರ ಒಳಿತಿಗಾಗಿ ಪ್ರಾರ್ಥನೆ.

ನವರಾತ್ರಿಗಳನ್ನು ಮೂರು ದಿನಗಳ ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. **ಮೊದಲ ಮೂರು** ರಾತ್ರಿಗಳು **ಮಹಾಕಾಳಿಯ** ಆರಾಧನೆ. ರೋಗ, ದಾರಿದ್ರ್ಯ ಮತ್ತು ನೋವನ್ನು ಹೋಗಲಾಡಿಸುವಂತೆ ಅವಳನ್ನು ಅನನ್ಯ ಭಕ್ತಿಯಿಂದ ಬೇಡಿಕೊಂಡು ತೃಪ್ತಿಪಡಿಸುವುದು. ಇದು ಅತೀ ಹೆಚ್ಚಿನ ಕಠಿಣ, ನಿಯಮಬದ್ಧ ಆರಾಧನೆ. **ಎರಡನೆಯ ಮೂರು** ರಾತ್ರಿಗಳು ದೇವಿಯ **ಮಹಾಲಕ್ಷ್ಮಿ** ರೂಪದ ಆರಾಧನೆ. ಸಂಪತ್ತು, ಸಮೃದ್ಧಿ ಮತ್ತು ಸಂತೋಷವನ್ನು ತರುವಂತೆ ಕೋರಿಕೊಳ್ಳುವುದು. **ಮೂರನೆಯ ಮೂರು** ರಾತ್ರಿಗಳು ದೇವಿಯ ಮಹಾಸರಸ್ವತಿ ಅವತಾರಕ್ಕೆ ಭಕ್ತಿಪೂರಕ ಪೂಜೆಗಳು. ಮನಸ್ಸಿಗೆ ಶುದ್ಧತೆ, ಬೌದ್ಧಿಕ ಶ್ರೇಷ್ಟತೆ ಹಾಗೂ ಆಧ್ಯಾತ್ಮಿಕ ಆನಂದ ಉಂಟು ಮಾಡುವಂತೆ ಬೇಡಿಕೊಳ್ಳುವುದು.

ನವರಾತ್ರಿಯ ಒಂಬತ್ತು ದಿನಗಳೂ ದೇವಿಯನ್ನು ಆರಾಧಿಸುವ ಆರಾಧಕ ಕೇವಲ ತನಗಾಗಿ ಬೇಡಿಕೊಳ್ಳುವುದಿಲ್ಲ. ಇಡೀ ದೇಶಕ್ಕೆ ಸುಬಿಕ್ಷೆ ನೀಡುವಂತೆ ಕೋರಿಕೊಳ್ಳುತ್ತಾನೆ. ಎಲ್ಲ ಜನರಿಗೂ ಈ ಸುಖ-ಶಾಂತಿಗಳನ್ನು ನೀಡುವಂತೆ ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ದೇವಿಯನ್ನು ಒಲಿಸಿಕೊಳ್ಳುತ್ತಾನೆ. ಹಾಗೆ ಅವನು ಕೋರಿಕೊಳ್ಳುವಾಗ ಅವನಿಗೆ ಜಾತಿ-ಮತಗಳ ಭೇದವಿಲ್ಲ. ಅಂತಸ್ತು-ಅಧಿಕಾರದ ವ್ಯತ್ಯಾಸವಿಲ್ಲ. ಎಲ್ಲ ಜನ ಸಮಾನರೇ.

ದೇವಿಯನ್ನು ತೃಪ್ತಿಪಡಿಸಿ, ಎಲ್ಲ ವಿಧದ ರಕ್ಷಣೆ ಕೇಳಿಕೊಂಡ ಮೇಲೆ ಹತ್ತನೆಯ ದಿನ ವಿಜಯ ದಶಮಿ. ದುಷ್ಟ ಶಕ್ತಿಗಳ ದಮನದ ವಿಜಯಾಚರಣೆ. ಜನರ ಮೇಲೆ ಅವುಗಳ ಕಾಟ, ಉಪಟಳಗಳು ಮೇಲೇಳದಂತೆ ದಮನಿಸಿದ ವಿಜಯದ ಸಾಧನೆ.

ಹಿಂದೆ ರಾಜನಾದವನು ಒಂಬತ್ತು ರಾತ್ರಿಗಳೂ ತನ್ನ ಪ್ರಜೆಗಳ ಶ್ರೇಯಸ್ಸಿಗಾಗಿ ತನ್ನ ಅರಮನೆಯಲ್ಲಿ ದುರ್ಗಿಯ ಪೂಜೆ ತಪ್ಪದೆ ಮಾಡುತ್ತಿದ್ದ. ಕಂಕಣ ಬದ್ಧನಾಗಿ ಪ್ರಜೆಗಳ ಹಿತ ಕಾಪಾಡಲು ಉಪವಾಸ-ಕಟ್ಟುಪಾಡುಗಳಿಂದ ಆರಾಧಿಸುತ್ತಿದ್ದ. ವಿಜಯದ ಸಂಕೇತವಾಗಿ ಉತ್ಸವ ಹೋಗಿ ಶಮೀವೃಕ್ಷದ ಪೂಜೆ ಮಾಡಿ, ಅರಮನೆಗೆ ಬಂದು ತನ್ನ ಹತ್ತು ದಿನಗಳ ಕಠಿಣ ಪೂಜೆ-ಪುನಸ್ಕಾರಗಳ ನಂತರ ಕಂಕಣ ವಿಸರ್ಜಿಸುತ್ತಿದ್ದ. ಇಲ್ಲಿ ವಿಜೃಂಭಣೆಗಿಂತ ಭಕ್ತಿ ಭಾವಗಳಿಗೆ, ಪೂಜೆ-ಆರಾಧನೆಗಳಿಗೆ ಮಹತ್ವ. ವಿಜೃಂಭಣೆ ಏನಿದ್ದರೂ ಹತ್ತನೆಯ ದಿನಕ್ಕೆ ಮೀಸಲು. ಅದೂ ಭಕ್ತಿಭಾವದ್ದೇ. ಜಾತ್ರೆ-ಮೋಜಿನದ್ದಲ್ಲ. ಇದು ದಸರಾ ಉತ್ಸವದ ಮೂಲ ಉದ್ದೇಶ.

ಜನಸಾಮಾನ್ಯರೂ ಅಷ್ಟೇ. ರಾತ್ರಿಗಳಲ್ಲದಿದ್ದರೂ, ಹಗಲಿನ ಒಂಬತ್ತು ದಿನಗಳು ಶ್ರದ್ಧಾಭಕ್ತಿಯಿಂದ ಒಂದಲ್ಲ ಒಂದು ರೀತಿ ದೇವಿಯನ್ನು ತಮ್ಮ ಮನೆಗಳಲ್ಲಿ ಪೂಜಿಸುತ್ತಿದ್ದರು. ಬಿಡುವಿನ ವೇಳೆಯಲ್ಲಿ ಹೊರಗಡೆ ಅರಮನೆಯಲ್ಲಿ ರಾಜನ ದರ್ಶನ ಮಾಡಲು ಹೋಗುತ್ತಿದ್ದರು. ಸಾಧ್ಯವಾದಲ್ಲಿ ದೇವಸ್ಥಾನಗಳಿಗೆ ಹೋಗಿ ದೇವಿಯ ದರ್ಶನ ಮಾಡಿ ಬರುತ್ತಿದ್ದರು. ದಸರಾದ ಹತ್ತು ದಿನಗಳೂ ಜನರಲ್ಲೂ ಭಕ್ತಿ ಮುಪ್ಪಡರಿರುತ್ತಿತ್ತು.

ದೇವಸ್ಥಾನಗಳಲ್ಲಿಯೂ ಅಷ್ಟೇ. ಮಹತ್ವದ ಪೂಜೆಗಳು. ಅದರಲ್ಲಿಯೂ ರಾಜವಂಶದ ದೇವತೆಯಾದ, ಮೈಸೂರು ಜನರ ಆರಾಧ್ಯ ದೇವಿಯಾದ **ಚಾಮುಂಡೇಶ್ವರಿಗೆ** ಅತೀ ಹೆಚ್ಚಿನ ಪ್ರಾಧಾನ್ಯ ಅವಳದೇ ಹಬ್ಬ, ಆರಾಧನೆ. ನಾನಾ ಅಡಚಣೆಗಳ ನಡುವೆ ಈಗಲೂ ಅದು ನಡೆದು ಬರುತ್ತಿರುವುದು ಮೈಸೂರಿನ ಸಂಸ್ಕೃತಿ-ಸಂಪ್ರದಾಯ ಉಳಿದಿರುವ ಸಂಕೇತ. ಅಲ್ಲೂ ಜನ ಭಕ್ತಿ-ಭಾವದ ವಾತಾವರಣ ಅನುಭವಿಸಬೇಕಾಗಿದೆ. ವ್ಯಾಪಾರ-ವಾಣಿಜ್ಯೀಕರಣ ಕಡಿಮೆಯಾಗಬೇಕಾಗಿದೆ. ಪ್ರವಾಸಿ ಕೇಂದ್ರ ಮಾಡುವ ಯೋಜನೆ ಕೈಬಿಡಬೇಕಾಗಿದೆ. ಯಾತ್ರಾಸ್ಥಳವನ್ನಾಗಿ ಬೆಟ್ಟದ ಜಾಗಕ್ಕೆ ಮಾತ್ರ ಸೀಮಿತಗೊಳಿಸಬೇಕಾಗಿದೆ. ಅಂದು ಇಂತಹ ಪೂಜೆ, ವಿಧಿ-ವಿಧಾನಗಳು ಜನರ ಆಕರ್ಷಣೆಗಾಗಿ ನಡೆಯುತ್ತಿರಲಿಲ್ಲ. ಜನರ ಶ್ರೇಯೋಭಿವೃದ್ಧಿಗಾಗಿ ನಡೆಯುತ್ತಿದ್ದವು. ಜನ ಅಲ್ಲಿ ಹೋಗಿ ಭಕ್ತಿಯಿಂದ ನಮಿಸಲೋ, ಪೂಜಿಸಲೋ ಬರಲು ಆಚರಿಸಲಾಗುತ್ತಿತ್ತು. ಅದು ರಾಜನ, ಜನರ ಆಶಯ-ಬಯಕೆಗಳನ್ನು ವ್ಯಕ್ತ ಮಾಡಲು, ಆಚರಣೆಯ ಉದ್ದೇಶ ಸಫಲವಾಗಲು ನಡೆಯುತ್ತಿದ್ದ ಪೂಜಾ-ಪುನಸ್ಕಾರಗಳು. ಇಂತಹ ಪವಿತ್ರ ಜಾಗಗಳಲ್ಲಿ ಜನ ತೃಪ್ತಿಯಿಂದ ತಾಯಿದೇವಿಯನ್ನು ಪೂಜಿಸಿ ಬರಬೇಕಾಗಿದೆ. ಅಂತಹ ಪವಿತ್ರ ವಾತಾವರಣಕ್ಕೆ ಕುಂದುಂಟಾಗದಂತೆ ಎಚ್ಚರ ವಹಿಸಬೇಕಾಗಿದೆ. ಜನ ತಮ್ಮ ಮನೆಗಳಲ್ಲಿ ಭಕ್ತಿಯಿಂದ ಪೂಜೆಗಳನ್ನು ಮಾಡುತ್ತಿದ್ದರೂ ಉತ್ಸಾಹದಿಂದ, ಸಂತೋಷದಿಂದ ದಸರಾ ಆಚರಣೆಯಲ್ಲಿ ಭಾಗವಹಿಸುತ್ತಿದ್ದರು. ಹಬ್ಬದ ಅಡುಗೆ ಮಾಡಿ, ದೇವರಿಗೆ ನೈವೇದ್ಯ ಮಾಡಿ, ಮನೆ ಮಂದಿ ಎಲ್ಲಾ ಸೇರಿ ಊಟ ಮಾಡುತ್ತಿದ್ದರು. ಮಕ್ಕಳನ್ನು ಕರೆದುಕೊಂಡು ಅರಮನೆಯ ಮುಂದೆ ಹೋಗಿ ದೀಪಾಲಂಕಾರ, ರಾಜನ ದರ್ಬಾರು ತೋರಿಸಿ, ತಾವೂ ನೋಡಿ ಹರ್ಷದಿಂದ-ಉತ್ಸಾಹದಿಂದ ಹಿಂತಿರುಗುತ್ತಿದ್ದರು. ವಿಜಯ ದಶಮಿಯಂದು ರಾಜನ ದರ್ಶನ ಸಿಕ್ಕಿದರೆ ಸಾಕು ಎಂದು ಸಾಲುಗಟ್ಟಿ ನಿಂತು ರಾಜನ ವಿಜೃಂಭಣೆಯ ಜಂಬೂ ಸವಾರಿಯನ್ನು ಕಂಡು ಬರುತ್ತಿದ್ದರು. ರಾಜನಾದರೋ ಮೆರವಣಿಗೆಯ ಮೂಲ ಆಕರ್ಷಣೆ. ರಾಜನಿಗಾದರೋ ತನ್ನ ಪ್ರಜೆಗಳಿಗೆ ತನ್ನ ದರ್ಶನ ಕೊಡುವ ಕಾರ್ಯ. ಅವನ ದರ್ಶನ ಜನರಿಗೆ ನೆಮ್ಮದಿ. ರಾಜ್ಯದ ರಕ್ಷಣೆ ಹೊತ್ತವನ ದರ್ಶನ. ಅರ್ಥಾತ್ ಇಂದ್ರ ಸ್ವರೂಪಿಯಾಗಿ ತಮ್ಮ ಹಿತವನ್ನು ಕಾಯುತ್ತಿರುವ, ಬಯಸುತ್ತಿರುವ ರಾಜನಿಗೆ ಭಕ್ತಿಯಿಂದ ನಮಿಸಿ ಬರುತ್ತಿದ್ದರು. ಇದು ಅಂದಿನ ದಸರಾ. ದಸರಾದ ಉದ್ದೇಶ, ನಡೆಯುತ್ತಿದ್ದ ರೀತಿ.

ಇಂದು,

ಇಂದು ಅದೇ ದಸರಾ ತನ್ನ ಪಾವಿತ್ರ್ಯತೆ ಕಳೆದುಕೊಳ್ಳುತ್ತಿದೆ. ಅದೊಂದು ದೊಂಬಿಯ ಜಾತ್ರೆಯಾಗುತ್ತಿದೆ. ಪಾವಿತ್ರ್ಯತೆಯ ಉದ್ದೇಶ ಕ್ರಮೇಣ ಕಳಚಿಕೊಳ್ಳುತ್ತಾ, ವಾಣಿಜ್ಯ ಉದ್ದೇಶದತ್ತ ತಿರುಗುತ್ತಿದೆ. ಮೂಲ ಸ್ವರೂಪ, ಸಂಪ್ರದಾಯ ಹಿನ್ನೆಲೆ ಹಿಂದೆ ಸರಿದು, ಐತಿಹಾಸಿಕ ಮಹತ್ವವೂ ಕಳೆದುಹೋಗುತ್ತಿದೆ.

ಅರಮನೆಯಲ್ಲಿಯೂ ರಾಜವಂಶದವರ ಆಚರಣೆಯೂ ಕಳೆಗುಂದಿರುವುದನ್ನು ನಾವು ಕಾಣಬಹುದು. ಪರಿಸ್ಥಿತಿಯ ಬದಲಾವಣೆಯಲ್ಲಿ ಅದಕ್ಕೂ ಪೆಟ್ಟುಬಿದ್ದಿದೆ. ಅದರ ವೈಭವ, ಇತಿಹಾಸದ ಮಹತ್ವವೂ ಮೂಲದಲ್ಲೇ ಕಳೆದುಹೋಗುತ್ತಿದೆ.

ರಾಜವಂಶದ ದಸರಾಕ್ಕೆ 613 ವರ್ಷಗಳ ಹಿನ್ನೆಲೆ ಇರುವುದನ್ನು ನಾವು ನೆನೆಸಬೇಕು. ಅಷ್ಟೇ ಅಲ್ಲ. ಅದು ವಿಜಯನಗರದ ಬಳುವಳಿಯೂ ಆಗಿ ಬಂದಿದೆ ಎಂಬುದನ್ನು ಮರೆಯಬಾರದು. ಆ ಉತ್ಸವವನ್ನು 1610ರಲ್ಲಿ ರಾಜ ಒಡೆಯರು ಪ್ರಥಮ ಬಾರಿಗೆ ನವರಾತ್ರಿ ಪ್ರಾರಂಭಿಸುವ ಮೂಲಕ ಮೈಸೂರಿನ ಕೀರ್ತಿಯನ್ನು ಬೆಳಗಿದರು. ವಿಜಯ ಸಂಕೇತ ಸಾರಿದರು. ಮೈಸೂರಿನಲ್ಲಿ ದಸರಾ ಪ್ರಾರಂಭವಾದದ್ದು ಅವರಿಂದ. ಅದೇ ಇಂದಿನ ದಸರಾಗೂ ಮೂಲ ಎಂಬುದನ್ನು ನಾವು ಸ್ಮರಿಸಬೇಕು. ಈ ಆರು ಶತಮಾನಗಳ ಅವಧಿಯಲ್ಲಿ, ಮಹಾರಾಜ ಜಯಚಾಮರಾಜ ಒಡೆಯರ ಅವಧಿಯವರೆಗೆ ಮೈಸೂರು, ಅಷ್ಟೇ ಏಕೆ ಕರ್ನಾಟಕದ ಸಂಸ್ಕೃತಿ, ಸಂಪ್ರದಾಯಗಳನ್ನು ಬೆಳೆಸಿ, ಪೋಷಿಸಿಕೊಂಡು ಬಂದು ಮರೆಯಲಾಗದ ಕಾಣಿಕೆ ನೀಡಿದ್ದಾರೆ ಅವರು. ಆದರೆ ನಾವಿಂದು, ಆ ಆರು ಶತಮಾನಗಳ ಇತಿಹಾಸ, ಸಂಪ್ರದಾಯಗಳನ್ನೇ ಬದಿಗೆ ಸರಿಸಿ ದಸರಾ ಆಚರಿಸುತ್ತಿದ್ದೇವೆ. ನೆಲೆಗಟ್ಟನ್ನೇ ಬಿಟ್ಟು ಮೆರವಣಿಗೆ ನಡೆಸುತ್ತಿದ್ದೇವೆ!

ಬದಲಾವಣೆ ಒಂದು ನೈಸರ್ಗಿಕ ಕ್ರಿಯೆ, ನಿಜ. ಹಾಗೆಂದು ಹಿಂದಿನ ವ್ಯವಸ್ಥೆ ನಶಿಸಿಹೋಗಬಾರದು. ಮೂಲ ಉದ್ದೇಶ, ಮಹತ್ವ ಮರೆಯಬಾರದು. ಅದಕ್ಕಾಗಿ ರಾಜ-ಮಹಾರಾಜರು ಸಂಕಷ್ಟಗಳ ನಡುವೆಯೂ ಭದ್ರ ಬುನಾದಿ ಹಾಕಿದ್ದನ್ನು ಕಡೆಗಣಿಸಬಾರದು. ಹಾಗೆ ಮಾಡಿದಲ್ಲಿ ದಸರಾ ಆಚರಣೆಗೆ ಮಹತ್ವವೇ ಇಲ್ಲವಾಗುತ್ತದೆ. ಅದು ಜಾತ್ರೆಯಾಗುತ್ತದೆ. ಮೋಜಾಗುತ್ತದೆ. ಅದೇ ಇಂದು ಆಗುತ್ತಿರುವುದು. ಬದಲಾವಣೆಗೆ ತಕ್ಕಂತೆ ಹೊಂದಿಸಿಕೊಳ್ಳುತ್ತಾ ಉಳಿಸಿಕೊಂಡು ಹೋದರೆ ಆಗ ನಮ್ಮ ಸಂಪ್ರದಾಯ ಉಳಿಯಬಲ್ಲದು, ಬೆಳೆಯಬಲ್ಲದು. ಉತ್ಸವದ ಐತಿಹಾಸಿಕ ಹಿನ್ನೆಲೆಯೂ ಉಳಿಯಬಲ್ಲದು.

ಒಂದೆಡೆ ಐತಿಹಾಸಿಕ, ಧಾರ್ಮಿಕ ದಸರಾ ಹಿಂದೆ ಸರಿದು ಕಳಪೆ-ಬಡಕಲಾಗಿ ಹೋಗಿದ್ದರೆ, ಇಂದು ವ್ಯವಸ್ಥೆಯಾಗುತ್ತಿರುವ ದಸರಾ ವಾಣಿಜ್ಯೀಕರಣ, ಪ್ರವಾಸೋದ್ಯಮ, ಜನಾಕರ್ಷಣೆಯತ್ತ ಸಂಪೂರ್ಣವಾಗಿ ತಿರುಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಮಾತನ್ನು ಕೆಲ ದಿನಗಳ ಹಿಂದೆ ಜಿಲ್ಲಾಧಿಕಾರಿಗಳೇ ಸ್ಪಷ್ಟವಾಗಿ ಹೇಳಿದ್ದಾರೆ: "ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಹೆಚ್ಚು ಆದಾಯ ಬರುವಂತೆ ಮಾಡಲು ಪರಿಶೀಲಿಸುತ್ತಿದ್ದೇವೆ." ಅವರ ಮಾತುಗಳು ಸರಿಯಿಲ್ಲ ಎಂದಲ್ಲ. ಇಂದಿನ ವಿಶ್ವ ವಾತಾವರಣವೇ ಹಾಗಾಗಿದೆ. ಪ್ರಾಯಶಃ ಈ ದೃಷ್ಟಿಯಲ್ಲೇ ಮೈಸೂರು ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಅವರು ದಸರಾ ವ್ಯವಸ್ಥೆಯ ಸಂದರ್ಭದಲ್ಲಿ ಅದರ ಹಿಂದಿನ ಸ್ವರೂಪವನ್ನು ಆದಷ್ಟು ತಂದು ಹೆಚ್ಚು ಆಕರ್ಷಕವನ್ನಾಗಿ ಮಾಡಬೇಕು ಎಂದು ಹೇಳಿರುವುದು. ಆದರೆ ಅವರು ಆ ಮಾತನ್ನು ಐದಾರು ತಿಂಗಳ ಮುಂಚೆಯೇ ಹೇಳಿದ್ದರೆ ಸ್ವಲ್ಪವಾದರೂ ಪ್ರಯೋಜನಕ್ಕೆ ಬರುತ್ತಿತ್ತು. ಅದು ಏಳೆಂಟು ದಿನಗಳಲ್ಲಿ ಸಾಧ್ಯವಿಲ್ಲ ಎಂಬುದು ಅವರಿಗೂ ಗೊತ್ತು. ಅಧಿಕಾರಿಗಳಿಗೂ ಗೊತ್ತು.

ಮೈಸೂರು ದಸರಾ ಗತವೈಭವ

ಶ್ರೀರಂಗಪಟ್ಟಣ ದಸರಾ



■ ಎಂ.ಕೆ.ಮೋಹನ್‌ರಾಜ್

ವಿಶ್ವವಿಖ್ಯಾತ ನಾಡಹಬ್ಬ ದಸರಾ ಆರಂಭವಾಗಿ ಶತಮಾನಗಳೇ ಕಳೆದಿದೆ. ನಾಡಹಬ್ಬ ದಸರಾ ತವರು ಶ್ರೀರಂಗಪಟ್ಟಣವಾಗಿದೆ. ಇಂದು ಜಗತ್ಪ್ರಸಿದ್ಧವಾಗಿರುವ ಮೈಸೂರು ದಸರಾವನ್ನು ದಕ್ಷಿಣ ಕರ್ನಾಟಕಕ್ಕೆ ತಂದ ಕೀರ್ತಿ ಶ್ರೀರಂಗರಾಯರಿಗೆ ಸಲ್ಲುತ್ತದೆ. ವಿಜಯನಗರದಲ್ಲಿ ಜರುಗುತ್ತಿದ್ದ ದಸರಾ ಮಹೋತ್ಸವದಲ್ಲಿ ಭಾಗವಹಿಸಿ, ಅದನ್ನು ಕಣ್ಣಾರೆ ಕಂಡ ಅವರು, ಶ್ರೀರಂಗಪಟ್ಟಣದಲ್ಲಿ ದಸರಾ ಆಚರಿಸಲು ನಿರ್ಧರಿಸಿ, ದಸರಾ ಆಚರಣೆಗೆ ನಾಂದಿ ಹಾಡಿದರು.

ವಿಜಯನಗರ ಪತನ ನಂತರ ವೈಭವಯುತ ದಸರಾವನ್ನು ಶ್ರೀರಂಗಪಟ್ಟಣದಲ್ಲಿ ಆಚರಿಸಲು ನಿರ್ಧರಿಸಿ, ಮೈಸೂರಿನ ಅರಸ ರಾಜ ಒಡೆಯರ್ 1610ರಂದು ದಸರಾ ಆಚರಣೆ ಘೋಷಿಸಿ, ಆರಂಭಿಸಿದರು. 'ದಶಹರ' ಪದದಿಂದ ದಸರಾ ಬಂದಿದೆ. ದಸರಾ ಎಂದರೆ ಹತ್ತು ದಿನದ ಹಬ್ಬ ಎಂದರ್ಥ. ಶ್ರೀರಾಮ, ರಾವಣನನ್ನು ಸೋಲಿಸಿದ ದಿನ. ಪಾಂಡವರು ಬನ್ನಿ ವೃಕ್ಷದಲ್ಲಿ ಇಟ್ಟಿದ್ದ ಆಯುಧಗಳನ್ನು ತೆಗೆದ ದಿನ. ದಾನವರ ಮೇಲೆ ದೇವಾನು ದೇವತೆಗಳು ಯುದ್ಧ ಮಾಡಿ ವಿಜಯ ಸಂಪಾದಿಸಿದ ವಿಜಯೋತ್ಸವದ ದಿನವಾಗಿ ಆಚರಿಸಲಾಗುತ್ತಿದೆ.

ನಾಡಹಬ್ಬ ದಸರಾ ಮೊದಲು ಬಂಗಾಳ ದೇಶದಲ್ಲಿ ಅದ್ಧೂರಿಯಾಗಿ ಆಚರಣೆಯಾಗುತ್ತಿತ್ತು. ಅದನ್ನು ಕಣ್ತುಂಬ ಕಂಡ ವಿಜಯನಗರದ ಅರಸರು ದಕ್ಷಿಣ ಭಾರತಕ್ಕೆ ತಂದರು. ವಿಜಯನಗರದಲ್ಲಿ ವೈಭವಯುತವಾಗಿ 10 ದಿನಗಳ ಕಾಲ ದಸರಾ ಆಚರಣೆಯಾಗುತ್ತಿತ್ತು. ವಿಜಯನಗರ ದಸರಾದಲ್ಲಿ ಅರಸರ ರಾಜ ದರ್ಬಾರ್, ಸೈನಿಕರ, ಕುದುರೆಗಳ, ಆನೆಗಳ, ಕಾಲಾಳುಗಳ ತಾಲೀಮು, ಆಯುಧ ಪೂಜೆ, ನಂತರ ಸಾಂಸ್ಕೃತಿಕ ಗತ ವೈಭವಗಳ ಭವ್ಯ ಮೆರವಣಿಗೆ ಜರುಗುತ್ತಿತ್ತು. ರಾಜರು ತಮ್ಮ ಶತ್ರುಗಳನ್ನು ಸದೆ ಬಡಿದ ಬಳಿಕ ವಿಜಯೋತ್ಸವ ಅಂಗವಾಗಿ ದಸರಾ ಆಚರಿಸುತ್ತಿದ್ದರೆಂಬ ಪ್ರತೀತಿ ಇದೆ.

ಆ ಸಂದರ್ಭದಲ್ಲಿ ವಿಜಯನಗರದ ರಾಜಪ್ರತಿನಿಧಿ ಶ್ರೀರಂಗರಾಯ ಶ್ರೀರಂಗಪಟ್ಟಣವನ್ನು ಪ್ರತಿನಿಧಿಸಿ ಆಳುತ್ತಿದ್ದ. ವಿಜಯನಗರದಲ್ಲಿ ಆಚರಣೆಯಾಗುತ್ತಿದ್ದ ದಸರಾವನ್ನು ಶ್ರೀರಂಗಪಟ್ಟಣದಲ್ಲಿ ಆಚರಿಸಲು ನಿರ್ಧರಿಸಿ, ಸಾಂಕೇತಿಕವಾಗಿ ಆಚರಣೆಗೆ ನಾಂದಿ ಹಾಡಿದ. ಅಲ್ಲಿಂದೀಚೆಗೆ ದಸರಾ ವೈವಿಧ್ಯಮಯ ಆಯಾಮಗಳನ್ನು ಕಂಡುಕೊಂಡು ಜಗತ್ಪ್ರಸಿದ್ಧವಾಯಿತು.

1563ರಲ್ಲಿ ತಾಳಿಕೋಟೆ ಕದನ ನಂತರ ಹಂತ ಹಂತವಾಗಿ ಹಂಪೆಯ ಗತ ವೈಭವ ಕಣ್ಮರೆಯಾಯಿತು. ವಿಜಯನಗರದಲ್ಲಿ ಆಚರಣೆಯಾಗುತ್ತಿದ್ದ ದಸರಾ ಶ್ರೀರಂಗಪಟ್ಟಣದಲ್ಲಿ ವೈಭವಯುತವಾಗಿ ಆಚರಣೆಯಾಗಲು ಆರಂಭವಾಯಿತು.

ಮೈಸೂರಿನ ಸ್ವತಂತ್ರ ಅರಸರಾದ ರಾಜ ಒಡೆಯರ್ ಕ್ರಿ.ಶ.1610ರಲ್ಲಿ ದಸರಾ ಹಬ್ಬವನ್ನು ಶ್ರೀರಂಗಪಟ್ಟಣದಲ್ಲಿ ವೈಭವಯುತವಾಗಿ ಆಚರಿಸಲು ನಿರ್ಧರಿಸಿ ಕೆಲವು ನಿಬಂಧನೆಯೊಂದಿಗೆ ಆರಂಭಿಸಿದರು. ರಾಜ ಒಡೆಯರ್ ಕಾಲದಿಂದ ಹಿಡಿದು, ಹೈದರ್ ಆಲಿ ಕಾಲದವರೆಗೂ ನಾಡ ಹಬ್ಬ ದಸರಾ ವೈಭವಯುತವಾಗಿ ಜರುಗಿತು. ಆದರೆ ಟಿಪ್ಪು ಕಾಲದಲ್ಲಿ ದಸರಾ ಕಳೆಗುಂದಿ ಗೌಣವಾಯಿತು. ದಸರಾ ಕಳೆ ಗುಂದಲು ಕಾರಣಗಳು ಅನೇಕ. ಹೈದರ್ ಮತ್ತು ಟಿಪ್ಪು ಮುಸ್ಲಿಂ ರಾಜರಾಗಿದ್ದರಿಂದ ದಸರಾಕ್ಕೆ ಹೆಚ್ಚು ಮಹತ್ವ ನೀಡಿಲ್ಲವೆಂಬ ವಾದ ಒಂದೆಡೆಯಾದರೆ, ಟಿಪ್ಪು ಕಾಲದಲ್ಲಿ ಬ್ರಿಟೀಷರ ಆಕ್ರಮಣದಿಂದಾಗಿ ಅವರನ್ನು ಹತ್ತಿಕ್ಕಲು ಮತ್ತು ಆಡಳಿತ ಯಂತ್ರವನ್ನು ಚುರುಕುಗೊಳಿಸಲು ಹೆಚ್ಚು ಕಾಲ ವಿನಿಯೋಗಿಸಿದರು ಎಂಬ ವಾದವೂ ಇದೆ.

ಶ್ರೀರಂಗಪಟ್ಟಣದಲ್ಲಿ ಆಚರಣೆಯಾಗುತ್ತಿದ್ದ ದಸರಾಕ್ಕೆ ತನ್ನದೇ ಆದ ಗತ ವೈಭವವಿದೆ. ಪಟ್ಟಣದ ಶ್ರೀರಂಗನಾಥ ದೇವಾಲಯದಿಂದ ದಸರಾ ಹೊರಟು, ಮೊದಲು ಶ್ರೀರಂಗನಾಥನಿಗೆ ಪೂಜೆ, ಆನಂತರ ಎದುರಿರುವ ಲಕ್ಷ್ಮಿ ನರಸಿಂಹಸ್ವಾಮಿಗೆ ಪೂಜೆ, ಬಳಿಕ ಉತ್ಸವ ಹೊರಡುತ್ತಿತ್ತು. ಶ್ರೀರಂಗನಾಥಸ್ವಾಮಿ ದೇವಾಲಯದ ಬಲಗಡೆಯೇ ಅರಮನೆ ಇದ್ದ ಪ್ರತೀತಿ ಇದೆ. ದಸರಾ ಉತ್ಸವವು ಒಂದು ಹರಿದಾರಿ. ಅಂದರೆ 9 ಮೈಲಿ ದೂರ ಮೆರವಣಿಗೆ ನಡೆಯುತ್ತಿತ್ತು. ಉತ್ಸವ ಪ್ರಮುಖ ಬೀದಿಗಳ ಮಾರ್ಗವಾಗಿ, ಊರಿನ ಪೂರ್ವ ದಿಕ್ಕಿಗಿರುವ ಮಹಾ ನವಮಿ ದಿಬ್ಬಕ್ಕೆ ಬರುತ್ತಿತ್ತು. ಅಲ್ಲಿ ರಾಜರು ಕುಳಿತು ರಾಜ ದರ್ಬಾರು ನಡೆಸುತ್ತಾ ದಸರಾವನ್ನು ವೀಕ್ಷಿಸುತ್ತಿದ್ದ. ಆ ಸಂದರ್ಭದಲ್ಲಿ ಮಲ್ಲಯುದ್ಧ, ಕುದುರೆಗಳ ಕಸರತ್ತು, ಗಜ ಓಟ, ಹುಲಿಕರಡಿ ವೀರ ಹೋರಾಟ ನಡೆಯುತ್ತಿತ್ತು. ಸಂಜೆಯಾದ ಬಳಿಕ ರಾಜ ಅರಮನೆ ಸೇರುತ್ತಿದ್ದ. ನೆರೆದಿದ ಸಾವಿರಾರು ಜನಕ್ಕೆ ಅನ್ನಸಂತರ್ಪಣೆ ನಡೆಯುತ್ತಿತ್ತು ಎಂದು ಶ್ರೀರಂಗಪಟ್ಟಣದ ದಸರಾ ಇತಿಹಾಸ ಸಾರುತ್ತದೆ.

ರಣಧೀರ ಕಂಠೀರವ ಒಡೆಯರ್ ಕಾಲದಲ್ಲಿ ಕವಿಯಾಗಿದ್ದ ಗೋವಿಂದ ವೈ 1648ರಲ್ಲಿ ಕಂಠೀರವ ನರಸರಾಜ ವಿಜಯಂ ಕೃತಿಯನ್ನು ರಚಿಸುತ್ತಾನೆ. ಆ ಕೃತಿಯಲ್ಲಿ ಹತ್ತು ದಿನಗಳ ಕಾಲ ಜರುಗುವ ದಸರಾ ಹಬ್ಬದ ವರ್ಣನೆಯನ್ನು ಮಾಡಿದ್ದಾನೆ. ಆ ಕೃತಿಯ ಪ್ರಕಾರ ದಸರಾ 23 ತಿಂಗಳು ಇರುವಾಗಲೇ ಪೂರ್ವ ಸಿದ್ಧತೆ ಆರಂಭವಾಗುತ್ತದೆ. ವಿನೋದಗಳು, ಒಡ್ಡೋಲಗಳು, ಗಜಪಯಣ, ಗಜ ಪುರಸ್ಕಾರ, ರಾಜ ಮರ್ಯಾದೆ ಸೇರಿದಂತೆ ದಸರಾ ಆಚರಣೆ ಆರಂಭವಾಗುತ್ತದೆ. 9ನೇ ದಿನಕ್ಕೆ ಆಯುಧ ಪೂಜೆ, ಹತ್ತನೇ ದಿನದಲ್ಲಿ ದಸರಾ ಮೆರವಣಿಗೆ ವೈಭವದ ವರ್ಣನೆ ಕಾಣಬಹುದಾಗಿದೆ. ದಸರಾ ವೀಕ್ಷಿಸಲು ಮಧುರೈ, ತಂಜಾವೂರು, ಮಲೆಯಾಳಿ ದೇಶಗಳಿಂದ ಬರುತ್ತಿದ್ದರೆಂಬ ವ್ಯಾಖ್ಯಾನವಿದೆ. ಶ್ರೀರಂಗ ಪಟ್ಟಣದಲ್ಲಿ ಆಚರಣೆಯಾಗುತ್ತಿದ್ದ ದಸರಾಕ್ಕೆ ತನ್ನದೇ ಆದ ಗತ ವೈಭವವಿದೆ. ಪಟ್ಟಣದ ಶ್ರೀರಂಗನಾಥ ದೇವಾಲಯದಿಂದ ದಸರಾ ಹೊರಟು, ಮೊದಲು ಶ್ರೀರಂಗ ನಾಥನಿಗೆ ಪೂಜೆ, ಆನಂತರ ಎದುರಿರುವ ಲಕ್ಷ್ಮಿ ನರಸಿಂಹಸ್ವಾಮಿಗೆ ಪೂಜೆ, ಬಳಿಕ ಉತ್ಸವ ಹೊರಡುತ್ತಿತ್ತು. ಶ್ರೀರಂಗನಾಥಸ್ವಾಮಿ ದೇವಾಲಯದ ಬಲಗಡೆಯೇ ಅರಮನೆ ಇದ್ದ ಪ್ರತೀತಿ ಇದೆ. ದಸರಾ ಉತ್ಸವವು ಒಂದು ಹರಿದಾರಿ. ಅಂದರೆ 9 ಮೈಲಿ ದೂರ ಮೆರವಣಿಗೆ ನಡೆಯುತ್ತಿತ್ತು. ಉತ್ಸವ ಪ್ರಮುಖ ಬೀದಿಗಳ ಮಾರ್ಗವಾಗಿ, ಊರಿನ ಪೂರ್ವ ದಿಕ್ಕಿಗಿರುವ ಮಹಾ ನವಮಿ ದಿಬ್ಬಕ್ಕೆ ಬರುತ್ತಿತ್ತು. ಅಲ್ಲಿ ರಾಜರು ಕುಳಿತು ರಾಜ ದರ್ಬಾರು ನಡೆಸುತ್ತಾ ದಸರಾವನ್ನು ವೀಕ್ಷಿಸುತ್ತಿದ್ದ. ಆ ಸಂದರ್ಭದಲ್ಲಿ ಮಲ್ಲಯುದ್ಧ, ಕುದುರೆಗಳ ಕಸರತ್ತು, ಗಜ ಓಟ, ಹುಲಿಕರಡಿ ವೀರ ಹೋರಾಟ ನಡೆಯುತ್ತಿತ್ತು. ಸಂಜೆಯಾದ ಬಳಿಕ ರಾಜ ಅರಮನೆ ಸೇರುತ್ತಿದ್ದ. ನೆರೆದಿದ್ದ ಸಾವಿರಾರು ಜನಕ್ಕೆ ಅನ್ನಸಂತರ್ಪಣೆ ನಡೆಯುತ್ತಿತ್ತು ಎಂದು ಶ್ರೀರಂಗಪಟ್ಟಣದ ದಸರಾ ಇತಿಹಾಸ ಸಾರುತ್ತದೆ.

ಟಿಪ್ಪು ಸುಲ್ತಾನ್ 1799ರಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿ ವೀರ ಮರಣವನ್ನಪ್ಪಿದ ಆನಂತರ ಟಿಪ್ಪು ಸಾವಿನಿಂದಾಗಿ ನಾಡಹಬ್ಬ ದಸರಾ ಮೈಸೂರಿಗೆ ಸ್ಥಳಾಂತರ ವಾಗುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಾವಧಿಯಲ್ಲಿ ದಸರಾ ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾವಣೆಯಾಗುತ್ತದೆ. 1610ರಿಂದ 1799ವರೆಗೆ ಶ್ರೀರಂಗಪಟ್ಟಣದಲ್ಲಿ ದಸರಾ ವೈಭವಯುತವಾಗಿ ಆಚರಣೆಗೊಂಡು ತನ್ನ ಗತಕಾಲವನ್ನು ಮೆರೆಯುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಿಂದ ಹಿಡಿದು ಇಂದಿನ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾಲದವರೆಗೂ ದಸರಾ ಮೈಸೂರಿನಲ್ಲಿ ಆಚರಣೆಗೊಂಡು ವಿವಿಧ ಮಜಲುಗಳನ್ನು ಕಂಡಿದೆ. ರಾಜರ ಆಳ್ವಿಕೆಯ ನಂತರ ದಸರಾವನ್ನು ಸರ್ಕಾರವೇ ಆಚರಿಸಲು ನಿರ್ಧರಿಸಿ ಕೋಟ್ಯಾಂತರ ವೆಚ್ಚದಲ್ಲಿ ಹತ್ತು ದಿನಗಳ ಕಾಲ ಮೈಸೂರು ದಸರಾ ಆಚರಣೆಗೊಳ್ಳುತ್ತಿದೆ. ದಸರಾವನ್ನು ವಿವಿಧ ಜಿಲ್ಲೆಯ ವಿವಿಧ ರಾಜ್ಯಗಳ, ವಿವಿಧ ದೇಶಗಳ ಕೋಟ್ಯಾಂತರ ಜನ ದಸರಾವನ್ನು ಸಾಕ್ಷೀಕರಿಸುತ್ತಾರೆ.


ಪ್ರತಿ ವರ್ಷವೂ ಶ್ರೀರಂಗಪಟ್ಟಣದಲ್ಲಿ ಜರುಗುತ್ತದೆ ಸಾಂಪ್ರದಾಯಿಕ ದಸರಾ

ಮೈಸೂರು ಸಂಸ್ಥಾನದಲ್ಲಿ 1799ರವರೆಗೂ ಶ್ರೀರಂಗಪಟ್ಟಣದಲ್ಲೇ ನಡೆಯುತ್ತಿದ್ದ ದಸರಾ ನಂತರ ಮೈಸೂರಿಗೆ ಸ್ಥಳಾಂತರವಾದ ಬಳಿಕ ಸಾಂಪ್ರದಾಯಕವಾಗಿ ಶ್ರೀರಂಗಪಟ್ಟಣದಲ್ಲಿ ದಸರಾ ಸರಳವಾಗಿ ನಡೆಯುತ್ತಿತ್ತು. ಇತ್ತೀಚಿನ ವರ್ಷದಲ್ಲಿ ಮೂರು ದಿನಗಳ ಕಾಲ ಮೈಸೂರು ದಸರಾ ಮಾದರಿಯಂತೆ ಸರಳವಾಗಿ ಕಾರ್ಯಕ್ರಮಗಳು ಜರುಗುತ್ತದೆ.

ಪ್ರತಿ ವರ್ಷವೂ ಮೂರು ದಿನಗಳ ಕಾಲ ಶ್ರೀರಂಗಪಟ್ಟಣದಲ್ಲಿ ನಡೆಯುವ ದಸರಾವನ್ನು ಜಿಲ್ಲಾಡಳಿತ ಹಾಗೂ ಶ್ರೀರಂಗಪಟ್ಟಣ ತಾಲೂಕು ಆಡಳಿತ ವಹಿಸಿಕೊಳ್ಳುತ್ತದೆ. ಸರ್ಕಾರವು ಸಹ ದಸರಾಗೆ ಖರ್ಚಿಗೆ ತಕ್ಕಂತೆ ಅನುದಾನ ಬಿಡುಗಡೆ ಮಾಡುತ್ತದೆ. ಕ್ಷೇತ್ರದ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಸೇರಿದಂತೆ ಜನಪ್ರತಿನಿಧಿಗಳು ಹಾಗೂ ಆಡಳಿತ ವರ್ಗ ಸೇರಿ ದಸರಾವನ್ನು ಆಯೋಜಿಸುತ್ತಾರೆ. 2008ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮೈಸೂರು ದಸರಾದ ಮೂಲ ಶ್ರೀರಂಗಪಟ್ಟಣದಲ್ಲೂ ವೈಭವದ ದಸರಾವನ್ನು ಮೂರು ದಿನಗಳ ಕಾಲ ಆಚರಣೆ ಮಾಡುವಂತೆ ಘೋಷಿಸಿ, ಹಣ ಬಿಡುಗಡೆ ಮಾಡಿದ್ದರು. ಅದರಂತೆ ಈ ಉತ್ಸವವನ್ನು ನಾಡಿನ ವಿವಿಧ ಗಣ್ಯರು ಉದ್ಘಾಟನೆ ಮಾಡುತ್ತಾ ಬಂದಿದ್ದಾರೆ. ಎಸ್.ಎಂ.ಕೃಷ್ಣ, ಬಿ.ಜಯಶ್ರೀ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸೇರಿದಂತೆ ಹಲವರು ಉದ್ಘಾಟಿಸಿದ್ದು, ಈ ವರ್ಷ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ.


ಮೂರು ದಿನಗಳ ದಸರಾದ ಮೊದಲ ದಿನ ತಾಲೂಕಿನ ಕಿರಂಗೂರು ಬಳಿ ಇರುವ ಬನ್ನಿ ಮಂಟಪದ ಬಳಿ ಮೂರು ಆನೆಗಳ ಒಳಗೊಂಡು ನಾಡದೇವತೆ ಚಾಮುಂಡೇಶ್ವರಿಯ ಮೆರವಣಿಗೆ, ಸಾಂಸ್ಕೃತಿಕ ಕಲಾತಂಡದ ವೈಭವ, ಡೊಳ್ಳು, ನಗಾರಿ ಸೇರಿದಂತೆ ಜಾನಪದ ಸೊಗಡನ್ನು ಶ್ರೀರಂಗಪಟ್ಟಣ ದಸರಾ ನೆನಪಿಸಲಿದ್ದು, ಸಾವಿರಾರು ಜನ ಭಾಗವಹಿಸಲಿದ್ದಾರೆ. ಕಲಾತಂಡದ ಮೆರವಣಿಗೆ ಬನ್ನಿಮಂಟಪದಿಂದ ಶ್ರೀರಂಗಪಟ್ಟಣದ ವಿವಿಧೆಡೆ ಸಂಚರಿಸಿ, ರಂಗನಾಥ ದೇಗುಲ ತಲುಪಲಿದೆ. ಪ್ರತಿದಿನ ಸಂಜೆ ರಂಗನಾಥ ದೇಗುಲದ ಮುಂಭಾಗದ ಮೈದಾನದಲ್ಲಿ ಸಿನಿಮಾ ಕಲಾವಿದರು ಹಾಗೂ ಇನ್ನಿತರ ಕಲಾವಿದರ ನೇತೃತ್ವದಲ್ಲಿ ಪ್ರತಿ ವರ್ಷದ ಮೂರು ದಿನ ಮ್ಯೂಸಿಕಲ್ ನೈಟ್ ಕಾರ್ಯಕ್ರಮ ಜರುಗಲಿದೆ.











President of AKBMS Sri Ashok Harnalli handing over letter of appointment as Vice President of AKBMS to Sri D T Prakash at Bangalore on 8th October

ಮೈಸೂರು ಮಹಾರಾಣಿಯರ ಮಹಾ ಕೊಡುಗೆ

ಕೆಂಪನಂಜಮ್ಮಣ್ಣಿಯವರು ಮೈಸೂರು ಸಂಸ್ಥಾನದ ಮಹಾರಾಣಿ ಮತ್ತು ರೆಸಿಡೆಂಟರೂ (1895–1902) ಆಗಿ ಆಡಳಿತ ನಡೆಸಿದರು. ಇವರು ಕಳಲೆ ಮನೆತನದ ನರಸರಾಜೇ ಅರಸು ಹಾಗೂ ಗುಣಮ್ಮಣ್ಣಿ ಅರಸು ದಂಪತಿಯ ಪುತ್ರಿಯಾಗಿ 1866ರ ಜೂನ್ 6ರಂದು ಜನಿಸಿದರು. ಇವರ ತಾಯಿ ಗುಣಮ್ಮಣ್ಣಿ (ಗುಣಾಂಬ) ಅವರು ಮಳವಳ್ಳಿ ಮಂಟೇಸ್ವಾಮಿ ಮಠದ ಸ್ವಾಮೀಜಿಯವರಾಗಿದ್ದ ಶ್ರೀ ವೀರರಾಜೇ ಅರಸ್ ಅವರ ಪುತ್ರಿ. ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಅವರು ಮೈಸೂರು ಸಂಸ್ಥಾನದ ಮಹಾರಾಜ 10ನೇ ಚಾಮರಾಜ ಒಡೆಯರ್ ಅವರನ್ನು ವಿವಾಹವಾದರು. ಇವರ ಸುಮಧುರ ದಾಂಪತ್ಯದ ಫಲವಾಗಿ ಜಯಲಕ್ಷ್ಮಮ್ಮಣ್ಣಿ, ಕೃಷ್ಣಾಜಮ್ಮಣ್ಣಿ, ಚಲುವಾಜಮ್ಮಣ್ಣಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಕಂಠೀರವ ನರಸಿಂಹರಾಜ ಒಡೆಯರ್ ಜನಿಸಿದರು.



ರಾಜಮಾತೆ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ



ರಾಜಮಾತೆ ಲಕ್ಷ್ಮಮ್ಮಣ್ಣಿ

ಎಂ.ಬಿ.ಪವನ್‌ಮೂರ್ತಿ

ಮೈಸೂರು ಸಂಸ್ಥಾನದಲ್ಲಿ ಮಹಾರಾಜರು ಮಾತ್ರವಲ್ಲದೆ, ಮಹಾರಾಣಿಯರ ಕೊಡುಗೆಯೂ ಅಪಾರವಾಗಿದೆ. ಸಂಸ್ಥಾನದ ರಾಜ್ಯಾಡಳಿತವನ್ನು ಯದು ವಂಶಕ್ಕೆ ಮರುಸ್ಥಾಪಿಸಿ, ಪ್ರಜೆಗಳ ಹಿತ ಬಯಸಿ ಹಲವು ಮಾದರಿಗಳಿಗೆ ಹೆಸರಾದವರು ರಾಜಮಾತೆ ಲಕ್ಷ್ಮಮ್ಮಣ್ಣಿ. ಅಂತೆಯೇ ಪ್ರಜಾವಾತ್ಸಲ್ಯದ ಆಡಳಿತಕ್ಕೆ ಹೆಸರಾಗಿದ್ದ ರಾಜಮಾತೆ ಕೆಂಪನಂಜಮ್ಮಣ್ಣಿ (ವಾಣಿವಿಲಾಸ ಸನ್ನಿಧಾನ) ಅವರು ಪ್ರಜೆಗಳ ಶ್ರೇಯೋಭಿವೃದ್ಧಿಗೆ ಹಲವು ಸುಧಾರಣೆಗೆ ನಾಂದಿ ಹಾಡಿದರು.

ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಈ ನಾಡಿನ ಅಭಿವೃದ್ಧಿಗೆ ಅಪಾರ. ಇಂತಹ ಮಹಾಪುರುಷರ ತಾಯಿಯವರಾದ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಅವರು ರಾಜ್ಯಾಡಳಿತದ ಚುಕ್ಕಾಣಿಯನ್ನು ಹಿಡಿದು ಸಮರ್ಥವಾಗಿ ನಡೆಸಿದ ಕೀರ್ತಿಗೂ ಭಾಜನರಾಗಿದ್ದಾರೆ. ವಾಣಿ ವಿಲಾಸ ಸನ್ನಿಧಾನ ಎಂದೇ ಪ್ರಖ್ಯಾತರಾದ ಕೆಂಪನಂಜಮ್ಮಣ್ಣಿ ಮಹಿಳಾ ಶಿಕ್ಷಣಕ್ಕೆ ಉತ್ತೇಜನ ನೀಡಿದವರು.

ಕೆಂಪನಂಜಮ್ಮಣ್ಣಿಯವರು ಮೈಸೂರು ಸಂಸ್ಥಾನದ ಮಹಾರಾಣಿ ಮತ್ತು ರೆಸಿಡೆಂಟರೂ (1895–1902) ಆಗಿ ಆಡಳಿತ ನಡೆಸಿದರು. ಇವರು ಕಳಲೆ ಮನೆತನದ ನರಸರಾಜೇ ಅರಸು ಹಾಗೂ ಗುಣಮ್ಮಣ್ಣಿ ಅರಸು ದಂಪತಿಯ ಪುತ್ರಿಯಾಗಿ 1866ರ ಜೂನ್ 6ರಂದು ಜನಿಸಿದರು. ಇವರ ತಾಯಿ ಗುಣಮ್ಮಣ್ಣಿ (ಗುಣಾಂಬ) ಅವರು ಮಳವಳ್ಳಿ ಮಂಟೇಸ್ವಾಮಿ ಮಠದ ಸ್ವಾಮೀಜಿಯವರಾಗಿದ್ದ ಶ್ರೀ ವೀರರಾಜೇ ಅರಸ್ ಅವರ ಪುತ್ರಿ.

ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಅವರು ಮೈಸೂರು ಸಂಸ್ಥಾನದ ಮಹಾರಾಜ 10ನೇ ಚಾಮರಾಜ ಒಡೆಯರ್ ಅವರನ್ನು ವಿವಾಹವಾದರು. ಇವರ ಸುಮಧುರ ದಾಂಪತ್ಯದ ಫಲವಾಗಿ ಜಯಲಕ್ಷ್ಮಮ್ಮಣ್ಣಿ, ಕೃಷ್ಣಾಜಮ್ಮಣ್ಣಿ, ಚಲುವಾಜಮ್ಮಣ್ಣಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಕಂಠೀರವ ನರಸಿಂಹರಾಜ ಒಡೆಯರ್ ಜನಿಸಿದರು. 10ನೇ ಚಾಮರಾಜ ಒಡೆಯರ್ ತಮ್ಮ ಆಡಳಿತದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ರಚಿಸಿ ರಾಜಪ್ರಭುತ್ವದಲ್ಲೂ ಪ್ರಜಾಪ್ರಭುತ್ವಕ್ಕೆ ಆದ್ಯತೆ ನೀಡಿದ್ದರು.

ದುರಾದೃಷ್ಟವಾಷತ್ 1894ರಲ್ಲಿ ಡಿಫ್ತೀರಿಯಾ ರೋಗಕ್ಕೆ ತುತ್ತಾಗಿ 10ನೇ ಚಾಮರಾಜ ಒಡೆಯರ್ ನಿಧನರಾದರು. ಹೀಗಾಗಿ ಅಂದಿನ ಬ್ರಿಟಿಷ್ ಸರ್ಕಾರ ವಾಣಿವಿಲಾಸ ಸನ್ನಿಧಾನ ಅವರನ್ನು ಮೈಸೂರು ಸಂಸ್ಥಾನದ ರೀಜೆಂಟ್ ಆಗಿ (ರಾಜಪ್ರತಿನಿಧಿ) ನೇಮಿಸಿತು. ಆಗಿನ್ನೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಕೇವಲ 10 ವರ್ಷ ವಯಸ್ಸು. ಈ ಹಿನ್ನೆಲೆಯಲ್ಲಿ ಅವರ ತಾಯಿ ವಾಣಿವಿಲಾಸ ಸನ್ನಿಧಾನ ಅವರನ್ನು ರಾಜಪ್ರತಿನಿಧಿಯಾಗಿ ನೇಮಿಸಲಾಯಿತು. ಹೀಗಾಗಿ 1895ರಿಂದ 1902ರವರೆಗೆ ರಾಜ್ಯಾಡಳಿತದ ಬೃಹತ್ ಜವಾಬ್ದಾರಿಯನ್ನು ಸಮರ್ಥವಾಗಿ ರಾಜಮಾತೆ ವಾಣಿ ವಿಲಾಸ ಸನ್ನಿಧಾನ ನಿರ್ವಹಿಸಿದರು.



ರಾಜಮಾತೆ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಅವರೊಂದಿಗೆ ಅವರ ಪುತ್ರರಾದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ (ಎಡದಲ್ಲಿರುವವರು), ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ಮೊಮ್ಮಗ ಜಯಚಾಮರಾಜ ಒಡೆಯರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ವಾಣಿವಿಲಾಸ ಸನ್ನಿಧಾನ ಅವರು ತಮ್ಮ ಆಡಳಿತಾವಧಿಯಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟರು. ಬಾಲಕಿಯರಿಗಾಗಿ ಶಾಲೆ ಆರಂಭಿಸಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ. ಮಹಾರಾಣಿ ಹೈಸ್ಕೂಲ್, ಮಹಾರಾಣಿ ಕಾಲೇಜು ಆರಂಭದಲ್ಲೂ ಅವರ ಶ್ರಮ ಅಪಾರವಾಗಿದೆ.


ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಲ್ಲಿ ವೇದಾವತಿ ನದಿಗೆ ಅಣೆಕಟ್ಟು ಕಟ್ಟುವಲ್ಲಿ ಇವರ ಪಾತ್ರ ಪ್ರಮುಖವಾದುದು. ಈ ಅಣೆಕಟ್ಟೆಗೆ 'ವಾಣಿವಿಲಾಸ ಸಾಗರ' ಎಂದೇ ನಾಮಕರಣ ಮಾಡಲಾಗಿದೆ. ಕೆಆರ್‌ಎಸ್ ಅಣೆಕಟ್ಟು ನಿರ್ಮಾಣಕ್ಕಾಗಿ ಇವರ ಆಭರಣಗಳನ್ನೇ ಒತ್ತೆ ಇಡಲಾಗಿತ್ತು. ಪ್ರಜೆಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಮೈಸೂರಲ್ಲಿ ನೀರು ಸರಬರಾಜು ಕಾರ್ಯಾಗಾರ ಸ್ಥಾಪಿಸಿದರು. ಇದಕ್ಕೆ ಇವರ ಹೆಸರನ್ನೇ ನಾಮಕರಣ ಮಾಡಲಾಗಿದೆ. ಶಿಂಷಾದಲ್ಲಿ ಜಲ ವಿದ್ಯುತ್ ಉತ್ಪಾದನಾ ಸ್ಥಾವರ ಸ್ಥಾಪನೆಯಾಗಿದ್ದು ಇವರ ಅವಧಿಯಲ್ಲೇ. ಇದು ಏಷ್ಯಾದ ಮೊದಲ ಜಲ ವಿದ್ಯುತ್ ಉತ್ಪಾದನಾ ಘಟಕ ಎಂಬ ಹೆಗ್ಗಳಿಗೆಕೆ ಭಾಜನವಾಗಿದೆ.


ರಾಜಮಾತೆ ಲಕ್ಷ್ಮಮ್ಮಣ್ಣಿ : ಕತ್ತಿ ಗೋಪಾಲ ರಾಜೇ ಅರಸ್ ಅವರ ಪುತ್ರಿಯಾದ ರಾಜಮಾತೆ ಲಕ್ಷ್ಮಮ್ಮಣ್ಣಿಯವರು 1742ರಲ್ಲಿ ಜನಿಸಿದರು. ಮಹಾರಾಜ ಇಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪತ್ನಿಯಾದ ಇವರು ಯದು ವಂಶಕ್ಕೆ ರಾಜ್ಯಾಡಳಿತವನ್ನು ಮರಳಿ ತಂದು ಕೊಡುವಲ್ಲಿ ಅಪಾರ ಶ್ರಮಿಸಿದರು. ಇದಕ್ಕಾಗಿ ಅವರು ಅನುಭವಿಸಿದ ಕಷ್ಟನಷ್ಟಗಳು ಮಾತ್ರ ಹೇಳತೀರದು.

1796ರಲ್ಲಿ ಸಿಡುಬು ಇಡೀ ದಕ್ಷಿಣ ಭಾರತವನ್ನೇ ನಡುಗಿಸಿತ್ತು. ಮೈಸೂರು ಸಂಸ್ಥಾನದಲ್ಲೂ ನೂರಾರು ಮಂದಿ ಬಲಿಯಾದರು. ಇಂತಹ ಸಂಕಷ್ಟದ ಸನ್ನಿವೇಶದಲ್ಲಿ ಇಂಗ್ಲೆಂಡ್ ದೇಶದಲ್ಲಿನ ವೈದ್ಯರೊಬ್ಬರು ಸಿಡುಬು ಕಾಯಿಲೆಗೆ ಲಸಿಕೆ ಆವಿಷ್ಕರಿಸಿರುವುದನ್ನು ಮೈಸೂರು ಸಂಸ್ಥಾನದ ರೆಸಿಡೆಂಟ್ ಆಗಿದ್ದ ಮೇಜರ್ ವಿಲ್ಕ್ಸ್ ರಾಜಮಾತೆ ಲಕ್ಷ್ಮಮ್ಮಣ್ಣಿ ಅವರಿಗೆ ತಿಳಿಸಿದರು. ಆದರೆ ಸಂಸ್ಥಾನದ ಪ್ರಜೆಗಳು ಲಸಿಕೆ ಹಾಕಿಸಿಕೊಳ್ಳಲು ಆತಂಕ ವ್ಯಕ್ತಪಡಿಸುತ್ತಿದ್ದರು.


ಅದೇ ಸಮಯದಲ್ಲಿ ಮೈಸೂರು ಅರಮನೆಯಲ್ಲಿ ರಾಜಮಾತೆ ಲಕ್ಷ್ಮಮ್ಮಣ್ಣಿ ಅವರ ಸೊಸೆಯಾದ ಲಕ್ಷ್ಮೀವಿಲಾಸ ಸನ್ನಿಧಾನ ಅವರಿಗೆ ಈ ಕಾಯಿಲೆ ಲಕ್ಷಣಗಳು ಕಾಣಿಸಿಕೊಂಡವು. ಆದರೆ ಸಿಡುಬು ಎದ್ದಿರಲಿಲ್ಲ. ಇದರಿಂದ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಚಿಂತಾಕ್ರಾಂತರಾದರು. ಇಂತಹ ಸಮಯದಲ್ಲಿ ತಮ್ಮ ದೃಢ ನಿರ್ಧಾರದೊಂದಿಗೆ ತಮ್ಮ ಸೊಸೆಗೆ ಲಸಿಕೆ ಕೊಡಿಸಿದರು. ಇದರಿಂದ ಮಹಾರಾಣಿ ಲಕ್ಷ್ಮೀವಿಲಾಸ ಸನ್ನಿಧಾನದವರು ಗುಣಮುಖರಾದರು. ಹೀಗೆ ರಾಜಮಾತೆ ಲಕ್ಷ್ಮಮ್ಮಣ್ಣಿಯವರು ತಮ್ಮ ಸೊಸೆಯ ಪ್ರಾಣವನ್ನೇ ಪಣಕ್ಕಿಟ್ಟು ಲಸಿಕೆ ಮೇಲೆ ಭರವಸೆ ಮೂಡಿಸಿದರು.



ನಾಡಿನ ಸಮಸ್ತ ಜನತೆಗೆ
ಮೈಸೂರು ದಸರಾ
ಹಾಗೂ ನವರಾತ್ರಿ
ಹಬ್ಬದ ಶುಭಾಶಯಗಳು
ಪುಷ್ಪಲತಾ ಜಗನ್ನಾಥ್ B.A.,LLB
ಮಾಜಿ ಮಹಾಪೌರರು, ಸದಸ್ಯರು ಮೈಸೂರು
ಮಹಾನಗರ ಪಾಲಿಕೆ-ವಾರ್ಡ್ ನಂ.11


CHOPRA
SINCE 1968
Specialized In:
Designer Fabrics for Western outfit.
Sherwani, Bandgala, Bandi, Suits,
Blazer, Kurta Pyjama, Trouser, Shirt
and more. Fabric variety from
Raymond & Reid & Tailor
Get Customized Stiching
Within 24hrs
Only At Yadavgiri
0821-355-4750 / 99804 33597
#D 26, Yadavagiri, Industrial Area, Next to Hotel Anand
Vihar, Vani Vilas Mohalla, Mysore, 570020



ನಾಡಿನ ಸಮಸ್ತ ಜನತೆಗೆ
ನಾಡ ಹಬ್ಬ ದಸರಾದ ಶುಭಾಶಯಗಳು
ಕೊಥಾರಿ ಕೇಬಲ್ಸ್
Kothari Cables
Copper & Aluminium Wires,
Submersible / UG Cables & PVC Pipes
KOTHARI PVC PIPE
AVAILABLE AT ALL LEADING STORES



ನಾಡಿನ ಸಮಸ್ತ ಜನತೆಗೆ
ದಸರಾ
ಹಬ್ಬದ ಶುಭಾಶಯಗಳು
ಗೋಪಿ
ಸದಸ್ಯರು, ಮೈಸೂರು ಮಹಾನಗರ
ಪಾಲಿಕೆ, ವಾರ್ಡ್ ನಂ.43



ನಾಡಿನ ಸಮಸ್ತ ಜನತೆಗೆ
ವಿಶ್ವವಿಖ್ಯಾತ
ದಸರಾ
ಹಬ್ಬದ
ಶುಭಾಶಯಗಳು
ಆರ್.ಲಿಂಗಪ್ಪ
ಮಾಜಿ ಮಹಾಪೌರರು,
ಮೈಸೂರು ಮಹಾನಗರ ಪಾಲಿಕೆ


ನಾಡಿನ ಸಮಸ್ತರಿಗೂ
ದಸರಾ
ಹಬ್ಬವು ಸುಖ,
ಸಂತೋಷ, ಸಮೃದ್ಧಿ,
ಸಹಬಾಳ್ವೆ ಹಾಗೂ
ಶಾಂತಿ ನೀಡಲಿ ಎಂದು
ಶುಭಾಶಯಗಳನ್ನು
ಕೋರುವೆ
ಡಾ. ಡಿ.ತಿಮ್ಮಯ್ಯ
ವಿಧಾನ ಪರಿಷತ್ ಸದಸ್ಯರು,
ಮೈಸೂರು-ಚಾಮರಾಜನಗರ ಕ್ಷೇತ್ರ


ವಿಶ್ವವಿಖ್ಯಾತ ದಸರಾ 2023 ರ
ಉದ್ಘಾಟನೆಗೆ ಆಗಮಿಸುತ್ತಿರುವ
ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿಗಳು, ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಸಚಿವರುಗಳಾದ ಶ್ರೀ ಹೆಚ್.ಸಿ. ಮಹದೇವಪ್ಪ
ಶ್ರೀ ಶಿವರಾಜ್ ಎಂ. ತಂಗಡಗಿ
ಶ್ರೀ ಮಧು ಬಂಗಾರಪ್ಪ
ಹಾಗು ಎಲ್ಲಾ ಗಣ್ಯರಿಗೆ ಆದರದ ಸುಸ್ವಾಗತ
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಹಿಂದುಳಿದ ವರ್ಗಗಳ ವಿಭಾಗ, ಮೈಸೂರು ನಗರ (ಜಿಲ್ಲಾ)


ನಾಡಿನ ಸಮಸ್ತ ಜನತೆಗೆ
ದಸರಾ
ಹಬ್ಬದ ಶುಭಾಶಯಗಳು
ಸಿ.ಬಸವೇಗೌಡ
ಮಾಜಿ ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ
ಪ್ರಾಧಿಕಾರ / ಮೈಸೂರು-ಚಾಮರಾಜನಗರ
ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್


ನಾಡಿನ ಸಮಸ್ತ ಜನತೆಗೆ
ವಿಶ್ವವಿಖ್ಯಾತ
ದಸರಾ
ಹಬ್ಬದ
ಶುಭಾಶಯಗಳು
ವರುಣಾ ಮಹೇಶ್
ಕಾರ್ಯದರ್ಶಿ ಕೆಪಿಸಿಸಿ


ನಾಡಿನ ಸಮಸ್ತ ಜನತೆಗೆ
ನಾಡಹಬ್ಬ
ದಸರಾ
ಹಬ್ಬದ
ಶುಭಾಶಯಗಳು
ರಾಮಣ್ಣ ಅಂಡ್ ಸನ್ಸ್ ಚುರುಮುರಿ ಕಾರ್ನರ್
ದಾಳಿಂಬೆ ಚುರುಮುರಿ
ಲೇ ಚುರುಮುರಿ ರಾಮಣ್ಣರವರು
ಮಾಲೀಕರು, ರಾಮಣ್ಣ ಅಂಡ್ ಸನ್ಸ್ ಚುರುಮುರಿ,
ದಾಳಿಂಬೆ ಚುರುಮುರಿ ಕಾರ್ನರ್ ದಸರಾ ವಸ್ತು
ಪ್ರದರ್ಶನ ಮೈದಾನ, ಮೈಸೂರು
ಆರ್.ಪರಮೇಶ
(ಚುರುಮುರಿ ರಾಮಣ್ಣ ರವರ ಮಗ)
ದೇವರಾಜ ಮೊಹಲ್ಲಾ ಮೈಸೂರು.


ClearMedi Healthcare
ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ
ClearMedi Radiant Hospital
Unit of ClearMedi Healthcare Pvt. Ltd.
ಕ್ಲಿಯರ್‌ಮೆಡಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
ClearMedi Multispeciality Hospitals
Unit of ClearMedi Healthcare Pvt. Ltd.
Frozen Section Machine
1st Time in Comprehensive Oncology Hospital of Mysore
CANCER SURGERIES NOW WITH :
Immediate Diagnosis
Enhanced Precision
Better Outcomes
ClearMedi Radiant Hospital
ClearMedi Multispeciality Hospital
www.clearmedi.in
0821-2336666
9343 108 108